# 2001 ರ ಕರ್ನಾಟಕ ಅಧಿನಿಯಮ ಸಂಖ್ಯೆ 29

# ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000

## ಅಧ್ಯಾಯ - I

### ಪ್ರಾರಂಭಿಕ

**ಪ್ರಕರಣಗಳು :**

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ

2. ಪರಿಭಾಷೆಗಳು

## ಅಧ್ಯಾಯ - II

### ವಿಶ್ವವಿದ್ಯಾನಿಲಯಗಳು

3. ವಿಶ್ವವಿದ್ಯಾನಿಲಯಗಳ ಸ್ಥಾಪನೆ ಮತ್ತು ನಿಗಮನ

4. ವಿಶ್ವವಿದ್ಯಾನಿಲಯದ ಅಧಿಕಾರಗಳು

5. ಅಧಿಕಾರ ವ್ಯಾಪ್ತಿ, ವಿಶೇಷಾಧಿಕಾರ ಇತ್ಯಾದಿಗಳಿಗೆ ಪ್ರವೇಶಾವಕಾಶ

6. ವಿಶ್ವವಿದ್ಯಾನಿಲಯವು ಎಲ್ಲಾ ವರ್ಗಗಳ ವ್ಯಕ್ತಿಗಳಿಗೂ ಮುಕ್ತವಾಗಿರತಕ್ಕದ್ದು

7. ವಿಶ್ವವಿದ್ಯಾನಿಲಯದಲ್ಲಿ ಬೋಧನೆ ಮತ್ತು ಸಂಶೋಧನೆ

8. ಶಿಸ್ತು, ಪರಿವೀಕ್ಷಣೆ ಮತ್ತು ನಿಯಂತ್ರಣ

9. ನಿರ್ದೇಶನಗಳನ್ನು ನೀಡಲು ಅಧಿಕಾರ

10. ವಿಶ್ವವಿದ್ಯಾನಿಲಯದ ಆದೇಶಗಳನ್ನು ರದ್ದುಗೊಳಿಸಲು ಅಧಿಕಾರ

## ಅಧ್ಯಾಯ - III

### ವಿಶ್ವವಿದ್ಯಾನಿಲಯದ ಅಧಿಕಾರಿಗಳು

11. ವಿಶ್ವವಿದ್ಯಾನಿಲಯದ ಅಧಿಕಾರಿಗಳು

12. ಕುಲಾಧಿಪತಿ

13. ಸಹಕುಲಾಧಿಪತಿ

14. ಕುಲಪತಿ

15. ಕುಲಪತಿಯ ಅಧಿಕಾರಗಳು

16. ಕುಲಪತಿಯ ಹುದ್ದೆಯು ಖಾಲಿ ಇರುವ ಕಾಲದಲ್ಲಿ ಕಾರ್ಯ ವ್ಯವಸ್ಥೆ

17. ರಿಜಿಸ್ಟ್ರಾರ್

18. ರಿಜಿಸ್ಟ್ರಾರ್ (ಮೌಲ್ಯಮಾಪನ)

19. ಹಣಕಾಸು ಅಧಿಕಾರಿ

20. ರಿಜಿಸ್ಟ್ರಾರ್, ರಿಜಿಸ್ಟ್ರಾರ್ (ಮೌಲ್ಯಮಾಪನ), ಹಣಕಾಸು ಅಧಿಕಾರಿಯ ಹುದ್ದೆಯು ತಾತ್ಕಾಲಿಕವಾಗಿ ಖಾಲಿ ಇರುವುದು.

21. ಡೀನ್

22. ವಿದ್ಯಾರ್ಥಿಗಳ ಕಲ್ಯಾಣ ನಿರ್ದೇಶಕರು

23. ಗ್ರಂಥಪಾಲ

24. ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಲಿಯ ನಿರ್ದೇಶಕ

25. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ತು

26. ಶಾರೀರಕ ಶಿಕ್ಷಣ ನಿರ್ದೇಶಕರು

## ಅಧ್ಯಾಯ - IV

## ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು

27. ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು

28. ಸಿಂಡಿಕೇಟ್

29. ಸಿಂಡಿಕೇಟಿನ ಅಧಿಕಾರಗಳು

30. ವಿದ್ಯಾವಿಷಯಕ ಪರಿಷತ್ತು

31. ವಿದ್ಯಾವಿಷಯಕ ಪರಿಷತ್ತಿನ ಅಧಿಕಾರಗಳು

32. ಹಣಕಾಸು ಸಮಿತಿ

33. ಅಧ್ಯಯನ ಮಂಡಲಿ

34. ವ್ಯಾಸಂಗ ವಿಭಾಗಗಳು

35. ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಲಿ

36. ಪರೀಕ್ಷಕರ ನೇಮಕಾತಿ ಮಂಡಲಿ

37. ಇತರೆ ಮಂಡಲಿಗಳು

38. ವಿದ್ಯಾವಿಷಯಕ ಪರಿಷತ್ತು ಮತ್ತು ಸಿಂಡಿಕೇಟಿನ ಸದಸ್ಯರ ಪದಾವಧಿ

39. ಪ್ರಾಧಿಕಾರಗಳ ಸದಸ್ಯತ್ವ ಹೊಂದಲು ನಿರ್ಬಂಧ

## ಅಧ್ಯಾಯ - V

### ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳು

40. ಪರಿನಿಯಮಗಳು

41. ಪರಿನಿಯಮಗಳ ಅಧಿನಿಯಮಿತಿ ಮತ್ತು ಅವುಗಳ ರಚನೆ

42. ಆರ್ಡಿನೆನ್ಸ್‌ಗಳು

43. ಆರ್ಡಿನೆನ್ಸ್‌ಗಳ ರಚನೆಯ ಕಾರ್ಯವಿಧಾನ

44. ವಿನಿಯಮಗಳು

45. ನಿಯಮಗಳು

## ಅಧ್ಯಾಯ - VI

### ಹಣಕಾಸು ಮತ್ತು ಲೆಕ್ಕಪತ್ರಗಳು

46. ವಿಶ್ವವಿದ್ಯಾನಿಲಯದ ನಿಧಿಗಳು

47. ವಾರ್ಷಿಕ ಲೆಕ್ಕ ಪತ್ರಗಳು ಮತ್ತು ಲೆಕ್ಕ ಪರಿಶೋಧನೆ

48. ಹಣಕಾಸಿನ ಅಂದಾಜುಗಳು

49. ಲೆಕ್ಕಪರಿಶೋಧನೆಗೆ ನಿರ್ದೇಶಿಸಲು ಸರ್ಕಾರದ ಅಧಿಕಾರ

50. ವಾರ್ಷಿಕ ವರದಿ

## ಅಧ್ಯಾಯ - VII

### ಪ್ರಾಧಿಕಾರಗಳಲ್ಲಿ ಖಾಲಿ ಸ್ಥಾನಗಳು

51. ಪದವನ್ನು ತೆರವುಗೊಳಿಸುವುದು

52. ಖಾಲಿ ಸ್ಥಾನಗಳನ್ನು ಭರ್ತಿ ಮಾಡುವುದು

## ಅಧ್ಯಾಯ - VIII

### ವಿಶ್ವವಿದ್ಯಾನಿಲಯದ ಅಧ್ಯಾಪಕರು ಮತ್ತು ಇತರ ನೌಕರರ ನೇಮಕಾತಿ

53. ಅಧ್ಯಾಪಕರ ಮತ್ತು ಗ್ರಂಥಪಾಲರ ನೇಮಕಾತಿ
54. ಬಡ್ತಿ ಯೋಜನೆಗಳಿಗನುಸಾರ ನೇಮಕಾತಿ
55. ಅರೆಕಾಲಿಕ ಹುದ್ದೆಗಳ ನೇಮಕಾತಿ
56. ತಾತ್ಕಾಲಿಕ ನೇಮಕ
57. ಬೋಧಕೇತರ, ಲಿಪಿಕ ಮತ್ತು ಇತರೆ ಸಿಬ್ಬಂದಿಯ ನೇಮಕ

## ಅಧ್ಯಾಯ - IX

### ನೌಕರರ ಅಂತರ - ವಿಶ್ವವಿದ್ಯಾನಿಲಯ ವರ್ಗಾವಣೆ

58. ನೌಕರರ ವರ್ಗಾವಣೆಗಳು

## ಅಧ್ಯಾಯ - X

### ಕಾಲೇಜುಗಳ ಸಂಯೋಜನೆ ಮತ್ತು ಸಂಸ್ಥೆಗಳಿಗೆ ಮನ್ನಣೆ

59. ಕಾಲೇಜುಗಳ ಸಂಯೋಜನೆ
60. ಹೊಸ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಪ್ರವೇಶಕ್ಕೆ ನಿರ್ಬಂಧ
61. ಪರೀಕ್ಷೆಗಳಿಗೆ ಹಾಜರಾಗಲು ನಿರ್ಬಂಧ
62. ಖಾಯಂ ಸಂಯೋಜನೆ
63. ಸಂಯೋಜನೆಯನ್ನು ಹಿಂತೆಗೆದುಕೊಳ್ಳುವುದು
64. ಸ್ವಾಯತ್ತ ಕಾಲೇಜು
65. ಕಾಲೇಜುಗಳ ಅಥವಾ ವ್ಯಾಸಂಗ ಕ್ರಮದ ಸ್ವಯಂ ಮುಚ್ಚುವಿಕೆ
66. ಕೆಲವು ಸಂಸ್ಥೆಗಳಿಗೆ ಮನ್ನಣೆ
67. ಕಾಲೇಜುಗಳ ಪರಿವೀಕ್ಷಣೆ

## ಅಧ್ಯಾಯ - XI

### ಪಟ್ಟಿಗೆ ಸೇರಿಸುವಿಕೆ ಮತ್ತು ಪದವಿಗಳು

68. ವಿದ್ಯಾರ್ಥಿಗಳ ಪ್ರವೇಶಕ್ಕಾಗಿ ಅರ್ಹತೆ

69. ಗೌರವ ಪದವಿಗಳು

70. ಪದವಿ ಅಥವಾ ಡಿಪ್ಲೊಮಾಗಳನ್ನು ಹಿಂತೆಗೆದುಕೊಳ್ಳುವುದು

## ಅಧ್ಯಾಯ - XII

### ವಿಶ್ವವಿದ್ಯಾನಿಲಯ ಪುನರವಲೋಕನಾ ಆಯೋಗ

71. ವಿಶ್ವವಿದ್ಯಾನಿಲಯದ ಪುನರವಲೋಕನಾ ಆಯೋಗದ ನೇಮಕ

72. ಕರ್ನಾಟಕ ರಾಜ್ಯ ಅಂತರ - ವಿಶ್ವವಿದ್ಯಾನಿಲಯ ಮಂಡಳಿ

## ಅಧ್ಯಾಯ - XIII

### ಪರೀಕ್ಷೆಯ ಕೆಲಸದಲ್ಲಿ ತೊಡಗಿರುವ ವ್ಯಕ್ತಿಗಳ ಪ್ರಕಾರ್ಯಗಳು ಮತ್ತು ಜವಾಬ್ದಾರಿಗಳು

73. ಅಧ್ಯಾಪಕರ ಕರ್ತವ್ಯಗಳು

74. ಪರೀಕ್ಷಾ ಕಾರ್ಯವನ್ನು ನೆರವೇರಿಸುವ ಹೊಣೆ

75. ಅಪರಾಧದ ದುಷ್ಪ್ರೇರಣೆಗಾಗಿ ಶಿಕ್ಷೆ

76. ಖಾಸಗಿ ಟ್ಯೂಷನ್ ಮೇಲೆ ಪ್ರತಿಬಂಧ

## ಅಧ್ಯಾಯ - XIV

### ಸಂಕೀರ್ಣ ಮತ್ತು ತಾತ್ಕಾಲಿಕ ಉಪಬಂಧಗಳು

77. ಶಿಸ್ತು

78. ಈ ಅಧಿನಿಯಮವು ಇತರ ಅಧಿನಿಯಮಗಳ ಮೇಲೆ ಹೆಚ್ಚಿನ ಪ್ರಭಾರವುಳ್ಳದ್ದಾಗಿರುವುದು

79. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ

80. ಅಧಿನಿಯಮ ಮತ್ತು ವ್ಯವಹರಣೆಗಳು ರಚನೆ, ರಿಕ್ತಸ್ಥಾನ, ಇತ್ಯಾದಿ ದೋಷದ ಆಧಾರದ ಮೇಲೆ ಮಾತ್ರವೇ ಅಸಿಂಧುವಾಗತಕ್ಕದ್ದಲ್ಲ.

81. ವಿಶ್ವವಿದ್ಯಾನಿಲಯದೊಡನೆ ಸಂಯೋಜಿತ ಕಾಲೇಜುಗಳ ಸಂಬಂಧ

82. ವಿಶ್ವವಿದ್ಯಾನಿಲಯಕ್ಕೆ ಸರ್ಕಾರಿ ಕಾಲೇಜುಗಳ ವರ್ಗಾವಣೆ

83. ಪರಿನಿಯಮಗಳ, ವಿನಿಯಮಗಳ, ಆರ್ಡಿನೆನ್ಸ್ ಇತ್ಯಾದಿಗಳ ಮುಂದುವರಿಕೆ

84. ತಾತ್ಕಾಲಿಕ ಉಪಬಂಧಗಳು

85. ತೊಂದರೆಗಳನ್ನು ನಿವಾರಿಸಲು ಅಧಿಕಾರ

86. ನಿರಸನ ಮತ್ತು ಉಳಿಸುವಿಕೆಗಳು

## ಉದ್ದೇಶ ಮತ್ತು ಕಾರಣಗಳ ಹೇಳಿಕೆ

## (ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ವಿಶ್ವವಿದ್ಯಾನಿಲಯಗಳ ಕಾರ್ಯನಿರ್ವಹಣೆಯನ್ನು ಪುನರವಲೋಕಿಸುವುದಕ್ಕೆ ಹಾಗೂ ಉನ್ನತ ಶಿಕ್ಷಣವು ಸಮಾಜದ ಅವಶ್ಯಕತೆಗಳಿಗೆ ಸರಿಹೊಂದುವಂತೆ ಮಾನವ ಶಕ್ತಿಯ ಪೂರೈಕೆ, ಶಿಕ್ಷಣದ ಗುಣಮಟ್ಟದ ಸುಧಾರಣೆ, ಸಂಪನ್ಮೂಲಗಳ ಸಂಗ್ರಹಣೆಯಲ್ಲಿ ಸ್ವಾವಲಂಬಿತರಾಗುವುದು, ಶಿಕ್ಷಕ ಸಮೂಹದ ಕೊಡುಗೆಯ ನಿರ್ಧರಣೆ-ಇವೇ ಮುಂತಾದ ವಿಷಯಗಳನ್ನು ಸಾಧಿಸುವುದಕ್ಕೆ ಸಂಬಂಧಪಟ್ಟಂತೆ ಕೆಲವು ಪರಿಶೀಲನಾಂಶಗಳ ಬಗ್ಗೆ ಶಿಫಾರಸ್ಸುಗಳನ್ನು ಮಾಡಲು ಒಂದು ಆಯೋಗವನ್ನು ರಚಿಸಲಾಯಿತು. ಅದರ ನಿರ್ದಿಷ್ಟ ಶಿಫಾರಸ್ಸುಗಳ ಪೈಕಿ ಕೆಲವನ್ನು ಕಾರ್ಯಗತಗೊಳಿಸುವ ದಿಶೆಯಲ್ಲಿ ವಿಶ್ವವಿದ್ಯಾನಿಲಯ ರಚನೆಗೆ ಸಂಬಂಧಿಸಿದಂತೆ ಕೆಲವು ಪರಿವರ್ತನೆಗಳನ್ನು ಮಾಡುವುದು, ಮತ್ತು ಶಿಕ್ಷಣದಲ್ಲಿ ಶ್ರೇಷ್ಠತೆಯನ್ನು ಸಾಧಿಸುವುದಕ್ಕಾಗಿ ಬೋಧನೆ, ಕಲಿಕೆ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ನವೀನ ವಿಧಾನಗಳನ್ನು ಅಳವಡಿಸಿಕೊಳ್ಳಲು ಅನುಕೂಲವಾಗುವಂತೆ ಶೈಕ್ಷಣಿಕ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯನ್ನು ಪ್ರದಾನ ಮಾಡುವುದು ಮತ್ತು ಆಡಳಿತದಲ್ಲಿ ಸುಧಾರಣೆಯನ್ನು ತರುವುದು ಸಹ ವಿಹಿತವೆಂದು ಪರಿಗಣಿಸಲಾಯಿತು. ಇದಲ್ಲದೆ, ಮುಕ್ತವಿಶ್ವವಿದ್ಯಾನಿಲಯ, ಆರೋಗ್ಯ ವಿಶ್ವವಿದ್ಯಾನಿಲಯ ಮತ್ತು ತಾಂತ್ರಿಕ ವಿಶ್ವವಿದ್ಯಾನಿಲಯಗಳ ಸ್ಥಾಪನೆಯ ಪರಿಣಾಮವಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 1976ರಲ್ಲಿ ಒಳಗೊಂಡ ಕೆಲವು ಉಪಬಂಧಗಳು ಅನಾವಶ್ಯಕವೆಂದು ಕಂಡು ಬಂದುದರಿಂದಾಗಿ ಅವುಗಳನ್ನು ಬಿಟ್ಟುಬಿಡಬೇಕಾಗಿದೆ. ಆದ್ದರಿಂದ ಪ್ರಸ್ತುತ ಇರುವ ಅಧಿನಿಯಮಕ್ಕೆ ಬದಲು ವಿಶ್ವವಿದ್ಯಾನಿಲಯಗಳ ನಿರ್ವಹಣೆಗಾಗಿ ಒಂದು ಹೊಸ ಶಾಸನವನ್ನು ರೂಪಿಸುವುದು ಅನಿವಾರ್ಯವಾಗಿದೆ.

ಆದ್ದರಿಂದ ಈ ವಿಧೇಯಕ.

(2000ದ ವಿಧಾನಸಭಾ ವಿಧೇಯಕ ಸಂಖ್ಯೆ 37 ಕಡತ ಸಂಖ್ಯೆ ಸಂವ್ಯಶಾಇ 60 ಶಾಸನ 2000)

# 2001 ರ ಕರ್ನಾಟಕ ಅಧಿನಿಯಮ ಸಂಖ್ಯೆ 29

*(2001ರ ಸೆಪ್ಟೆಂಬರ್ ಹದಿಮೂರನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

# ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000

*(2001ರ ಸೆಪ್ಟೆಂಬರ್ 12ನೇ ದಿನಾಂಕದಂದು ರಾಜ್ಯಪಾಲರ ಅನುಮೋದನೆಯನ್ನು ಪಡೆಯಲಾಗಿದೆ)*

ರಾಜ್ಯ ವಿಶ್ವವಿದ್ಯಾನಿಲಯಗಳಿಗೆ ಸಂಬಂಧಪಡುವ ಈಗ ಇರುವ ಅಧಿನಿಯಮವನ್ನು ಒಂದು ಸಮಗ್ರ ಅಧಿನಿಯಮದ ಮೂಲಕ ಪ್ರತಿಸ್ಥಾಪಿಸಲು ಒಂದು ಅಧಿನಿಯಮ.

ರಾಜ್ಯ ವಿಶ್ವವಿದ್ಯಾನಿಲಯಗಳಿಗೆ ಸಂಬಂಧಪಡುವ ಕಾನೂನನ್ನು ಸಂಯೋಜಿಸಲು ಮತ್ತು ತಿದ್ದುಪಡಿ ಮಾಡಲು ಈಗ ಇರುವ ಅಧಿನಿಯಮವನ್ನು ಒಂದು ಸಮಗ್ರವಾದ ಅಧಿನಿಯಮದ ಮೂಲಕ ಪ್ರತಿಸ್ಥಾಪಿಸುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ಐವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ; ಎಂದರೆ:-

## ಅಧ್ಯಾಯ - I

## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.** - (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ಎಂದು ಕರೆಯತಕ್ಕದ್ದು.

(2) ಇದು ಕೂಡಲೇ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು;

(1) " ವಿದ್ಯಾ ವಿಷಯಕ ಪರಿಷತ್ತು (ಅಕಾಡೆಮಿಕ್ ಕೌನ್ಸಿಲ್)" ಎಂದರೆ, 30ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ವಿದ್ಯಾ ವಿಷಯಕ ಪರಿಷತ್ತು;

(2) "ಕಾಲೇಜು" ಎಂದರೆ, ವಿಶ್ವ ವಿದ್ಯಾನಿಲಯವು ಕಾಲೇಜು ಎಂಬುದಾಗಿ ನಿರ್ವಹಿಸುತ್ತಿರುವ ಒಂದು ಸಂಸ್ಥೆ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜಾಗಿ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಗಳಿಗೆ ಪ್ರವೇಶ ಪಡೆದಿರುವ ಒಂದು ಸಂಸ್ಥೆಯನ್ನು ಒಳಗೊಳ್ಳುತ್ತದೆ.

---

ಕರ್ನಾಟಕ ರಾಜ್ಯ ಪತ್ರದ ಭಾಗ IV-A ವಿಶೇಷ ಪತ್ರಿಕೆ ಸಂಖ್ಯೆ 1668 ದಿನಾಂಕ 13-9-2001 ರಲ್ಲಿ ಪ್ರಕಟಿತ.
(ಕಡತ ಸಂಖ್ಯೆ ಸಂವ್ಯಶಾಇ 60 ಶಾಸನ 2000)

(3) “ವಿಭಾಗ”, “ಅಧ್ಯಯನಗಳ ವಿಭಾಗ”, “ಸ್ನಾತಕೋತ್ತರ ಪದವಿ ವಿಭಾಗ” ಮತ್ತು “ಅಧ್ಯಯನಗಳ ಸ್ನಾತಕೋತ್ತರ ಪದವಿ ವಿಭಾಗ” ಎಂದರೆ, ವಿಶ್ವವಿದ್ಯಾನಿಲಯವು ನಡೆಸುತ್ತಿರುವ ಮತ್ತು ನಿರ್ವಹಿಸುತ್ತಿರುವ ವಿಶ್ವವಿದ್ಯಾನಿಲಯದಲ್ಲಿನ ವಿಭಾಗ, ಅಧ್ಯಯನಗಳ ವಿಭಾಗ, ಸ್ನಾತಕೋತ್ತರ ಪದವಿ ವಿಭಾಗ ಮತ್ತು ಅಧ್ಯಯನಗಳ ಸ್ನಾತಕೋತ್ತರ ಪದವಿ ವಿಭಾಗ:

ಪರಂತು, ವಿಶ್ವವಿದ್ಯಾನಿಲಯವು ಯಾವುದೇ ವಿಭಾಗ, ಅಧ್ಯಯನಗಳ ವಿಭಾಗ, ಸ್ನಾತಕೋತ್ತರ ಪದವಿ ವಿಭಾಗ ಅಥವಾ ಅಧ್ಯಯನಗಳ ಸ್ನಾತಕೋತ್ತರ ವಿಭಾಗವನ್ನು ನಡೆಸದೆ ಮತ್ತು ನಿರ್ವಹಿಸದೆ ಇರುವಲ್ಲಿ, ಸಂಯೋಜಿತ ಕಾಲೇಜು ಅಥವಾ ಕಾಲೇಜುಗಳು ಅಥವಾ ಕುಲಾಧಿಪತಿಯು ರಾಜ್ಯಸರ್ಕಾರದೊಂದಿಗೆ ಸಮಾಲೋಚಿಸಿ ಅಧಿಸೂಚಿಸಬಹುದಾದಂಥ ಅಧ್ಯಾಪಕರು, ವಿಭಾಗ, ಅಧ್ಯಯನಗಳ ವಿಭಾಗ, ಸ್ನಾತಕೋತ್ತರ ಪದವಿ ವಿಭಾಗ ಅಥವಾ ಅಧ್ಯಯನಗಳ ಸ್ನಾತಕೋತ್ತರ ಪದವಿ ವಿಭಾಗ ಎಂದು ಭಾವಿಸತಕ್ಕದ್ದು;

(4) ‘‘ವಿದ್ಯಾರ್ಥಿ ನಿಲಯ’’ ಎಂದರೆ, ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ವಿಶ್ವವಿದ್ಯಾನಿಲಯವು ನಿರ್ವಹಿಸುತ್ತಿರುವ ಅಥವಾ ಅದರಿಂದ ಮನ್ನಣೆ ಪಡೆದ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗಾಗಿ ಇರುವ ಒಂದು ನಿವಾಸದ ಘಟಕ;

(5) ‘‘ಇತರ ಹಿಂದುಳಿದ ವರ್ಗಗಳು’’ ಎಂದರೆ, ಸಂವಿಧಾನದ 15(4)ನೇ ಅನುಚ್ಛೇದದ ಮತ್ತು 16(4)ನೇ ಅನುಚ್ಛೇದದ ಅಡಿಯಲ್ಲಿ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಿದ ಸಮುದಾಯಗಳು, ಜಾತಿಗಳು ಮತ್ತು ಪಂಗಡಗಳು;

(6) “ಪ್ರಾಂಶುಪಾಲ” ಎಂದರೆ, ಒಂದು ಕಾಲೇಜಿನ ಮುಖ್ಯಸ್ಥ;

(7) ‘‘ಧಾರ್ಮಿಕ ಅಲ್ಪಸಂಖ್ಯಾತರು’’ ಎಂದರೆ, ಭಾರತ ಸಂವಿಧಾನದ 30ನೇ ಅನುಚ್ಛೇದದ ಅರ್ಥ ವ್ಯಾಪ್ತಿಯೊಳಗೆ ಧಾರ್ಮಿಕ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ವ್ಯಕ್ತಿಗಳು;

(8) “ಅನುಸೂಚಿತ ಜಾತಿಗಳು” ಎಂಬುದು, ಭಾರತ ಸಂವಿಧಾನದ 341ನೇ ಅನುಚ್ಛೇದದ ಅಡಿಯಲ್ಲಿ ಮಾಡಿದ ಮತ್ತು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ, ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ, 1950ರಲ್ಲಿ ನಿರ್ದಿಷ್ಟಪಡಿಸಿದ ಅನುಸೂಚಿತ ಜಾತಿಗಳು ಎಂಬ ಉಲ್ಲೇಖವನ್ನು ಹೊಂದಿರತಕ್ಕದ್ದು;

(9) “ಅನುಸೂಚಿತ ಪಂಗಡಗಳು” ಎಂಬುದು, ಭಾರತ ಸಂವಿಧಾನದ 342ನೇ ಅನುಚ್ಛೇದದ ಅಡಿಯಲ್ಲಿ ಮಾಡಿದ ಮತ್ತು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ, ಸಂವಿಧಾನದ (ಅನುಸೂಚಿತ ಪಂಗಡಗಳು) ಆದೇಶ, 1950ರಲ್ಲಿ ನಿರ್ದಿಷ್ಟಪಡಿಸಿದ ಅನುಸೂಚಿತ ಪಂಗಡಗಳು ಎಂಬ ಉಲ್ಲೇಖವನ್ನು ಹೊಂದಿರತಕ್ಕದ್ದು.

(10) “ಪರಿನಿಯಮಗಳು”, “ಆರ್ಡಿನೆನ್ಸ್‌ಗಳು”, “ವಿನಿಯಮಗಳು”, ಮತ್ತು “ನಿಯಮಗಳು” ಎಂದರೆ, ಅನುಕ್ರಮವಾಗಿ ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ವಿಶ್ವವಿದ್ಯಾನಿಲಯದ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳು.

(11) "ಸಿಂಡಿಕೇಟ್" ಎಂದರೆ, 28ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಸಿಂಡಿಕೇಟ್;

(12) "ಅಧ್ಯಾಪಕರು" ಎಂದರೆ, ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ನೀಡುವ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ರೀಡರುಗಳು ಅಥವಾ ಉಪನ್ಯಾಸಕರು.

(13) "ವಿಶ್ವವಿದ್ಯಾನಿಲಯ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಮತ್ತು ನಿಗಮಿತವಾದ ಒಂದು ವಿಶ್ವವಿದ್ಯಾನಿಲಯ;

(14) "ವಿಶ್ವವಿದ್ಯಾನಿಲಯ ಪ್ರದೇಶ" ಎಂದರೆ ವಿಶ್ವವಿದ್ಯಾನಿಲಯದ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಪ್ರದೇಶ.

## ಅಧ್ಯಾಯ - II

## ವಿಶ್ವವಿದ್ಯಾನಿಲಯಗಳು

**3. ವಿಶ್ವವಿದ್ಯಾನಿಲಯಗಳ ಸ್ಥಾಪನೆ ಮತ್ತು ನಿಗಮನ.-** (1) 1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮದ 3ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾನಿಲಯಗಳನ್ನು, ಇದರಲ್ಲಿ ಇನ್ನು ಮುಂದೆ ಉಪಬಂಧಿಸಲಾದಂತೆ, ಅವುಗಳ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯೊಡನೆ, ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾನಿಲಯಗಳೆಂದು ಭಾವಿಸತಕ್ಕದ್ದು, ಎಂದರೆ:-

(ಎ) ಬೆಂಗಳೂರಿನಲ್ಲಿ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿದ ಮತ್ತು ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಕೋಲಾರ ಮತ್ತು ತುಮಕೂರು ಜಿಲ್ಲೆಗಳ ಪ್ರದೇಶದ ಮೇಲೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಬೆಂಗಳೂರು ವಿಶ್ವವಿದ್ಯಾನಿಲಯ;

(ಬಿ) ಗುಲಬರ್ಗಾದಲ್ಲಿ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿದ ಮತ್ತು ಬಳ್ಳಾರಿ, ಬೀದರ್, ಗುಲಬರ್ಗಾ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ಪ್ರದೇಶದ ಮೇಲೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಗುಲಬರ್ಗಾ ವಿಶ್ವವಿದ್ಯಾನಿಲಯ;

(ಸಿ) ಧಾರವಾಡದಲ್ಲಿ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿದ ಮತ್ತು ಬಾಗಲಕೋಟೆ, ಬೆಳಗಾವಿ, ವಿಜಾಪುರ, ಧಾರವಾಡ, ಗದಗ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಪ್ರದೇಶದ ಮೇಲೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಕರ್ನಾಟಕ ವಿಶ್ವವಿದ್ಯಾನಿಲಯ;

(ಡಿ) ಶಂಕರಘಟ್ಟದಲ್ಲಿ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿದ ಮತ್ತು ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳ

ಪ್ರದೇಶದ ಮೇಲೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಕುವೆಂಪು ವಿಶ್ವವಿದ್ಯಾನಿಲಯ;

(ಇ) ಮಂಗಳೂರು ತಾಲ್ಲೂಕಿನ ಕೊಣಾಜೆಯಲ್ಲಿ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿದ ಮತ್ತು ದಕ್ಷಿಣ ಕನ್ನಡ, ಕೊಡಗು ಮತ್ತು ಉಡುಪಿ ಜಿಲ್ಲೆಗಳ ಪ್ರದೇಶದ ಮೇಲೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮಂಗಳೂರು ವಿಶ್ವವಿದ್ಯಾನಿಲಯ;

(ಎಫ್) ಮೈಸೂರಿನಲ್ಲಿ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿದ ಮತ್ತು ಚಾಮರಾಜನಗರ, ಹಾಸನ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳ ಪ್ರದೇಶದ ಮೇಲೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮೈಸೂರು ವಿಶ್ವವಿದ್ಯಾನಿಲಯ;

(2) (i) ಪ್ರತಿಯೊಂದು ವಿಶ್ವವಿದ್ಯಾನಿಲಯದ ಕುಲಾಧಿಪತಿ, ಸಹಕುಲಾಧಿಪತಿ (ಪ್ರೊಚಾನ್ಸ್‌ಲರ್), ಕುಲಪತಿ ಮತ್ತು ವಿದ್ಯಾವಿಷಯಕ ಪರಿಷತ್ತು ಮತ್ತು ಸಿಂಡಿಕೇಟಿನ ಸದಸ್ಯರು, (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಆ ವಿಶ್ವವಿದ್ಯಾನಿಲಯದ ಹೆಸರಿನಿಂದ ಕರೆಯಲ್ಪಡುವ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು;

(ii) ಅಂಥ ಪ್ರತಿಯೊಂದು ವಿಶ್ವವಿದ್ಯಾನಿಲಯವೂ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮುದ್ರೆಯನ್ನು ಹೊಂದಿರತಕ್ಕದ್ದು ಮತ್ತು ಅದರ ಹೆಸರಿನಿಂದ ಅದು ದಾವೆ ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು.

(3) ವಿಶ್ವವಿದ್ಯಾನಿಲಯವು, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸಲು ಮತ್ತು ಧಾರಣ ಮಾಡಲು, ವಿಶ್ವವಿದ್ಯಾನಿಲಯದ ಉದ್ದೇಶಗಳಿಗಾಗಿ ಅದರಲ್ಲಿ ನಿಹಿತವಾಗಿರಬಹುದಾದ ಅಥವಾ ಅದರಿಂದ ಆರ್ಜಿತವಾಗಿರಬಹುದಾದ ಯಾವುದೇ ಚರ ಮತ್ತು ಸ್ಥಿರ ಸ್ವತ್ತನ್ನು ಗುತ್ತಿಗೆಗೆ ಕೊಡಲು, ಮಾರಾಟ ಮಾಡಲು ಅಥವಾ ಅನ್ಯಥಾ ವರ್ಗಾವಣೆ ಮಾಡಲು ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ಕರಾರು ಮಾಡಿಕೊಳ್ಳುವುದಕ್ಕೆ ಮತ್ತು ಅವಶ್ಯವಾದ ಇತರ ಎಲ್ಲ ಕಾರ್ಯಗಳನ್ನೂ ಮಾಡುವುದಕ್ಕೆ ಸಕ್ಷಮವಾಗಿರತಕ್ಕದ್ದು:

(4) ವಿಶ್ವವಿದ್ಯಾನಿಲಯದಲ್ಲಿ ನಿಹಿತವಾಗಿರಬಹುದಾದ ಅಥವಾ ಅದು ಆರ್ಜಿಸಿರಬಹುದಾದ ಯಾವುದೇ ಸ್ಥಿರ ಸ್ವತ್ತನ್ನು, ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದುಕೊಳ್ಳದೆ ಗುತ್ತಿಗೆ, ಮಾರಾಟ ಅಥವಾ ಅನ್ಯಥಾ ವರ್ಗಾವಣೆ ಮಾಡತಕ್ಕದ್ದಲ್ಲ.

(5) ವಿಶ್ವವಿದ್ಯಾನಿಲಯದಿಂದ ಅಥವಾ ಅದರ ವಿರುದ್ಧ ಹೂಡಲಾದ ಎಲ್ಲಾ ದಾವೆಗಳಲ್ಲಿ ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿ, ವಾದಪತ್ರಗಳಿಗೆ ರಿಜಿಸ್ಟ್ರಾರರು ಸಹಿ

ಮಾಡಿ ಸತ್ಯಾಪನೆ ಮಾಡತಕ್ಕದ್ದು ಮತ್ತು ಅಂತಹ ದಾವೆಗಳಲ್ಲಿನ ಮತ್ತು ವ್ಯವಹರಣೆಗಳಲ್ಲಿನ ಎಲ್ಲ ಆದೇಶಿಕೆಗಳನ್ನು ರಿಜಿಸ್ಟ್ರಾರರಿಗೆ ನೀಡತಕ್ಕದ್ದು ಮತ್ತು ಅವರಿಗೆ ಜಾರಿ ಮಾಡತಕ್ಕದ್ದು.

**4. ವಿಶ್ವವಿದ್ಯಾನಿಲಯದ ಅಧಿಕಾರಗಳು. – ಈ** ಅಧಿನಿಯಮದ ಉಪಬಂಧಗಳು ಮತ್ತು ಪರಿನಿಯಮಗಳು ಅಥವಾ ಆರ್ಡಿನೆನ್ಸ್‌ಗಳ ಮೂಲಕ ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ವಿಶ್ವವಿದ್ಯಾನಿಲಯವು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಈ ಮುಂದಿನ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:–

(i) ತಾನು ಯುಕ್ತವೆಂದು ಭಾವಿಸುವಂತಹ ವ್ಯಾಸಂಗ ಶಾಖೆಗಳಲ್ಲಿ ಮತ್ತು ಅಧ್ಯಯನ ಕ್ರಮಗಳಲ್ಲಿ, ಶಿಕ್ಷಣ (ಅಂಚೆ ತೆರಪಿನ ಮೂಲಕ ಶಿಕ್ಷಣವೂ ಸೇರಿದಂತೆ), ಬೋಧನೆ ಮತ್ತು ತರಬೇತಿಯನ್ನು ಒದಗಿಸುವುದು ಮತ್ತು ಸಂಶೋಧನೆ ಹಾಗೂ ಜ್ಞಾನ ಪ್ರಸಾರಕ್ಕಾಗಿ ವ್ಯವಸ್ಥೆ ಮಾಡುವುದು;

(ii) (ಎ) ಪರಿನಿಯಮಗಳು, ಆರ್ಡಿನೆನ್ಸ್‌ಗಳು ಅಥವಾ ವಿನಿಯಮಗಳ ಮೂಲಕ ನಿಯಮಿಸಲಾದ ರೀತಿಯಲ್ಲಿ, ಅವುಗಳಿಂದ ವಿನಾಯಿತಿಗೊಳಿಸಲಾಗಿದ್ದ ಹೊರತು, ವಿಶ್ವವಿದ್ಯಾನಿಲಯದಲ್ಲಿ ಅಥವಾ ಯಾವುದೇ ಕಾಲೇಜಿನಲ್ಲಿ ಅಧ್ಯಯನ ಕ್ರಮವನ್ನು ಅನುಸರಿಸಿರುವ ಮತ್ತು ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಮೂಲಕ ನಿಯಮಿಸಲಾದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ;

(ಬಿ) ಪರಿನಿಯಮಗಳು ಅಥವಾ ಆರ್ಡಿನೆನ್ಸ್‌ಗಳ ಮೂಲಕ ನಿಯಮಿಸಲಾದ ಷರತ್ತುಗಳ ಅಡಿಯಲ್ಲಿ ಸಂಶೋಧನೆ ನಡೆಸಿರುವ,

- ಅಂಥ ವ್ಯಕ್ತಿಗಳಿಗೆ, ಪರೀಕ್ಷೆಗಳನ್ನು ನಡೆಸುವುದು ಮತ್ತು ಪದವಿಗಳು, ಡಿಪ್ಲೊಮಾಗಳು ಅಥವಾ ಇತರ ಶೈಕ್ಷಣಿಕ ಪದವಿಗಳನ್ನು ನೀಡುವುದು ಮತ್ತು ಪ್ರದಾನ ಮಾಡುವುದು;

(iii) ಪರಿನಿಯಮಗಳ ಮೂಲಕ ವಿಧಿಸಲಾದ ರೀತಿಯಲ್ಲಿ ವ್ಯಕ್ತಿಗಳಿಗೆ ಗೌರವ ಪದವಿಗಳನ್ನು ಅಥವಾ ಇತರ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

(iv) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಪಟ್ಟಿಯಲ್ಲಿ ಸೇರಿಲ್ಲದ ವ್ಯಕ್ತಿಗಳಿಗೆ, ವಿಶ್ವವಿದ್ಯಾನಿಲಯವು ನಿರ್ಧರಿಸಬಹುದಾದಂತೆ ಡಿಪ್ಲೊಮಾಗಳನ್ನು ನೀಡುವುದು ಮತ್ತು ಅಂಥ ಉಪನ್ಯಾಸ ಮತ್ತು ಬೋಧನೆಗಳ ವ್ಯವಸ್ಥೆ ಮಾಡುವುದು;

(V) ವಿಶ್ವವಿದ್ಯಾನಿಲಯವು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅಂತಹ ಉದ್ದೇಶಗಳಿಗಾಗಿ ಇತರ ವಿಶ್ವವಿದ್ಯಾನಿಲಯಗಳೊಡನೆ ಮತ್ತು ಪ್ರಾಧಿಕಾರಗಳೊಡನೆ ಸಹಕರಿಸುವುದು;

(vi) ಪ್ರಾಧ್ಯಾಪಕರ, ರೀಡರುಗಳ, ಉಪನ್ಯಾಸಕರ ಮತ್ತು ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ಇತರ ಯಾವುದೇ ಬೋಧಕ ಹುದ್ದೆಗಳನ್ನು ಸ್ಥಾಪಿಸುವುದು, ಅಮಾನತುಗೊಳಿಸುವುದು ಅಥವಾ ರದ್ದುಗೊಳಿಸುವುದು;

(vii) ಫೆಲೋಷಿಪ್, ಸಂಚಾರಿ ಫೆಲೋಷಿಪ್, ವಿದ್ಯಾರ್ಥಿ ವೇತನಗಳು, ಶಿಷ್ಯ ವೇತನಗಳು, ವೃತ್ತಿವೇತನಗಳು, ಪದಕಗಳು ಮತ್ತು ಪಾರಿತೋಷಕಗಳನ್ನು ಸ್ಥಾಪಿಸುವುದು ಮತ್ತು ನೀಡುವುದು;

(viii) ಕಾಲೇಜುಗಳು, ಪ್ರಯೋಗಶಾಲೆಗಳು, ಗ್ರಂಥಾಲಯಗಳು, ವಸ್ತು ಸಂಗ್ರಹಾಲಯಗಳು, ಮುದ್ರಣಾಲಯಗಳು, ಸಂಶೋಧನಾ ಸಂಸ್ಥೆಗಳು, ವಿದ್ಯಾ ವಿಷಯಕ್ಕೆ ಮತ್ತು ಆಡಳಿತ ತರಬೇತಿಗೆ ಸಂಬಂಧಿಸಿದ ಸಂಸ್ಥೆಗಳನ್ನು ಮತ್ತು ವಿಶ್ವವಿದ್ಯಾನಿಲಯದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಅವಶ್ಯಕವಾದ ಇತರ ಸಂಸ್ಥೆಗಳನ್ನು ನಿರ್ವಹಿಸುವುದು ಮತ್ತು ಅವುಗಳ ಆಡಳಿತವನ್ನು ನಡೆಸುವುದು;

(ix) ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವುದು, ನಿರ್ವಹಿಸುವುದು ಮತ್ತು ಆಡಳಿತ ನಡೆಸುವುದು;

(x) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ನಿವಾಸ ಮತ್ತು ಶಿಸ್ತಿನ ಮೇಲ್ವಿಚಾರಣೆ ಮತ್ತು ನಿಯಂತ್ರಣ ಮಾಡುವುದು;

(xi) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಆರೋಗ್ಯ ಮತ್ತು ಸಾಮಾನ್ಯ ಕಲ್ಯಾಣವನ್ನು ವೃದ್ಧಿಗೊಳಿಸುವುದಕ್ಕಾಗಿ ಏರ್ಪಾಟುಗಳನ್ನು ಮಾಡುವುದು;

(xii) ಆರ್ಡಿನೆನ್ಸ್‌ಗಳ ಮೂಲಕ ನಿಯಮಿಸಬಹುದಾದ ಅಂಥ ಶುಲ್ಕಗಳನ್ನು ಮತ್ತು ಇತರ ಚಾರ್ಜುಗಳನ್ನು ನಿಗದಿಪಡಿಸುವುದು, ವಸೂಲಿ ಮಾಡುವುದು, ತಗಾದೆ ಮಾಡುವುದು ಮತ್ತು ಪರಿಷ್ಕರಿಸುವುದು;

(xiii) ವಿದ್ಯಾರ್ಥಿನಿಯರಿಗೆ ಮತ್ತು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಹಾಗೂ ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ ನಿವಾಸ, ಶಿಸ್ತು ಮತ್ತು ಬೋಧನೆಗೆ ಸಂಬಂಧಿಸಿದಂತೆ ವಿಶೇಷ ಏರ್ಪಾಟುಗಳನ್ನು ಮಾಡುವುದು;

(xiv) ಪರಿನಿಯಮಗಳ ಮೂಲಕ ಆಡಳಿತಾತ್ಮಕ, ಲಿಪಿಕ ಮತ್ತು ಇತರ ಆವಶ್ಯಕ ಬೋಧಕೇತರ ಹುದ್ದೆಗಳನ್ನು ಸೃಜಿಸುವುದು;

(xv) ವಿಶ್ವವಿದ್ಯಾನಿಲಯದ ಉದ್ದೇಶಕ್ಕಾಗಿ ಅನುದಾನ, ಮರಣಶಾಸನದ ಮೂಲಕ ಅಥವಾ ಅನ್ಯಥಾ ವಿಶ್ವವಿದ್ಯಾನಿಲಯದಲ್ಲಿ ನಿಹಿತವಾಗಬಹುದಾದ ಯಾವುವೇ ದತ್ತಿಗಳು, ದೇಣಿಗೆಗಳು ಅಥವಾ ನಿಧಿಗಳನ್ನು

ಅಂಗೀಕರಿಸುವುದು, ಧಾರಣ ಮಾಡುವುದು ಮತ್ತು ನಿರ್ವಹಿಸುವುದು ಹಾಗೂ ಯುಕ್ತವೆಂದು ಭಾವಿಸಬಹುದಾದ ಯಾವುದೇ ರೀತಿಯಲ್ಲಿ ಅಂತಹ ದತ್ತಿಗಳನ್ನು, ದೇಣಿಗೆಗಳನ್ನು ಅಥವಾ ನಿಧಿಗಳನ್ನು ತೊಡಗಿಸುವುದು:

ಪರಂತು, ವಿದೇಶದಿಂದ, ವಿದೇಶಿ ಪ್ರತಿಷ್ಠಾನದಿಂದ ಅಥವಾ ಅಂಥ ದೇಶದಲ್ಲಿರುವ ಯಾವೊಬ್ಬ ವ್ಯಕ್ತಿಯಿಂದ ದೇಣಿಗೆಯನ್ನು ರಾಜ್ಯ ಸರ್ಕಾರದ ಅನುಮೋದನೆಯಿಲ್ಲದೆ ಅಂಗೀಕರಿಸತಕ್ಕದ್ದಲ್ಲ.

(xvi) ಪ್ರತಿಭೆ, ಸಂಶೋಧನೆ ಹಾಗೂ ಸಾಮಾನ್ಯ ಜ್ಞಾನದ ಕೃತಿಗಳ ಪ್ರಕಟಣೆಯನ್ನು ಕೈಗೊಳ್ಳುವುದು;

(xvii) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಅಥವಾ ನೌಕರರಿಗೆ ಸಂಬಂಧಿಸಿದಂತೆ ಯೂನಿಯನ್‌ಗಳನ್ನು ಮತ್ತು ಅಸೋಸಿಯೇಷನ್‌ಗಳನ್ನು ಸಂಘಟಿಸುವುದು, ಪ್ರೋತ್ಸಾಹಿಸುವುದು, ವಿನಿಯಮಿಸುವುದು ಮತ್ತು ನಿಯಂತ್ರಿಸುವುದು;

(xviii) ಪರಿನಿಯಮಗಳ ಮೂಲಕ ವಿಶ್ವವಿದ್ಯಾನಿಲಯಗಳ ಪ್ರಾಧಿಕಾರಗಳೆಂದು ಘೋಷಿಸಲಾಗುವ ಅಂಥ ನಿಕಾಯಗಳನ್ನು ನಿರ್ವಹಿಸುವುದು;

(xix) ವಿಶ್ವವಿದ್ಯಾನಿಲಯವು ನಿರ್ವಹಿಸದೆ ಇರುವ ಶಿಕ್ಷಣ ಸಂಸ್ಥೆಗಳನ್ನು ಸಂಯೋಜಿತ ಕಾಲೇಜುಗಳಾಗಿ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಗಳಿಗೆ ಪ್ರವೇಶ ಕೊಡುವುದು;

(xx) (ಎ) ಶಾರೀರಿಕ ತರಬೇತಿಗೆ;

(ಬಿ) ವಿದ್ಯಾರ್ಥಿ ಯೂನಿಯನ್‌ಗಳಿಗೆ, ಮತ್ತು;

(ಸಿ) ಕ್ರೀಡಾ ಮತ್ತು ಅಥ್ಲೆಟಿಕ್ ಕ್ಲಬ್ಬುಗಳಿಗೆ;

-ವಿಶ್ವವಿದ್ಯಾನಿಲಯದ ನಿಧಿಗಳಿಂದ ಅನುದಾನಗಳನ್ನು ಕೊಡುವುದು.

(xxi) ಸಂಯೋಜಿತಗೊಂಡ ಕಾಲೇಜುಗಳಿಗೆ ಅಗತ್ಯವಾಗಬಹುದಾದಂಥ ಬೋಧನೆ ಮತ್ತು ಮಾರ್ಗದರ್ಶನವನ್ನು ತನ್ನ ಪ್ರಾಧ್ಯಾಪಕರು ಮತ್ತು ಇತರ ಅಧ್ಯಾಪಕರು ಮತ್ತು ವಿಭಾಗಗಳು ಹಾಗೂ ವಿಶೇಷ ಸಂಶೋಧನಾ ಸಂಸ್ಥೆಗಳ ಮೂಲಕ ಒದಗಿಸುವುದು;

(xxii) ಪರಿನಿಯಮಗಳ ಮೂಲಕ ಕಾಲಕಾಲಕ್ಕೆ ನಿಯಮಿಸ ಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಯಾವುದೇ ಉದ್ದೇಶಕ್ಕಾಗಿ ಯಾವುದೇ ಸಂಸ್ಥೆಗೆ ಪೂರ್ಣವಾಗಿ ಅಥವಾ ಭಾಗಶ: ಮನ್ನಣೆ ಕೊಡುವುದು ಮತ್ತು ಅಂಥ ಮನ್ನಣೆಯನ್ನು ಹಿಂತೆಗೆದುಕೊಳ್ಳುವುದು;

(xxiii) ಈ ಮೇಲೆ ಹೇಳಿದ ಅಧಿಕಾರಕ್ಕೆ ಪ್ರಾಸಂಗಿಕವಾಗಿರಲಿ ಅಥವಾ ಇಲ್ಲದಿರಲಿ, ಕೃಷಿ, ಆರೋಗ್ಯ ವಿಜ್ಞಾನ, ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನಗಳನ್ನು ಹೊರತುಪಡಿಸಿ, ವಿಶೇಷವಾಗಿ ವಿಶ್ವವಿದ್ಯಾಲಯದ ಉದ್ದೇಶಗಳನ್ನು ಮುಂದುವರಿಸಲು ಮತ್ತು ಸಾಮಾನ್ಯವಾಗಿ ಕಲೆ, ವಿಜ್ಞಾನ, ವಾಣಿಜ್ಯ ಹಾಗೂ ವ್ಯವಸ್ಥಾಪನೆ ಮತ್ತು ಇತರ ಕಲಿಕೆ ಮತ್ತು ಸಂಸ್ಕೃತಿ ವಿಭಾಗಗಳನ್ನು ಬೆಳೆಸಲು ಮತ್ತು ವೃದ್ಧಿಪಡಿಸಲು ಅವಶ್ಯಕವಾಗಬಹುದಾದ ಇತರ ಕಾರ್ಯಗಳನ್ನು ಮತ್ತು ವಿಷಯಗಳನ್ನು ಕೈಗೊಳ್ಳುವುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನದಲ್ಲಿ ಘಟಕ ಕಾಲೇಜುಗಳನ್ನು ಹೊಂದಿರುವ ವಿಶ್ವವಿದ್ಯಾನಿಲಯಗಳು, ಆ ಸಂಬಂಧದಲ್ಲಿ ಈ ಅಧಿನಿಯಮದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸುವುದು ಮುಂದುವರಿಯತಕ್ಕದ್ದು;

**5. ಅಧಿಕಾರ ವ್ಯಾಪ್ತಿ, ವಿಶೇಷಾಧಿಕಾರ ಇತ್ಯಾದಿಗಳಿಗೆ ಪ್ರವೇಶಾವಕಾಶ.-** ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದ ಹೊರತು, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಪ್ರದತ್ತವಾದ ವಿಶ್ವವಿದ್ಯಾನಿಲಯದ ಅಧಿಕಾರಗಳನ್ನು ವಿಶ್ವವಿದ್ಯಾನಿಲಯ ಪ್ರದೇಶದಲ್ಲಿ ಚಲಾಯಿಸತಕ್ಕದ್ದು ಮತ್ತು ಸದರಿ ಪ್ರದೇಶದ ಹೊರಗಡೆ ಇರುವ ಯಾವುದೇ ಶಿಕ್ಷಣ ಸಂಸ್ಥೆಯು, ವಿಶ್ವವಿದ್ಯಾನಿಲಯದ ಯಾವುವೇ ವಿಶೇಷಾಧಿಕಾರಗಳೊಡನೆ ಸಹವರ್ತಿಸತಕ್ಕದ್ದಲ್ಲ ಅಥವಾ ಅವುಗಳಿಗೆ ಪ್ರವೇಶ ಪಡೆಯತಕ್ಕದ್ದಲ್ಲ:

ಪರಂತು, ಅಂಚೆ ತೆರಪಿನ ಶಿಕ್ಷಣ ಮೂಲಕ, ವ್ಯಾಸಂಗ ಕ್ರಮಗಳ ಅಥವಾ ಬಾಹ್ಯ ಪದವಿ ವ್ಯಾಸಂಗ ಕ್ರಮಗಳ ಪ್ರಯೋಜನವನ್ನು ವಿಶ್ವವಿದ್ಯಾನಿಲಯವು, ವಿಶ್ವವಿದ್ಯಾನಿಲಯ ಪ್ರದೇಶದ ಹೊರಗಡೆ ಇರುವ ವಿದ್ಯಾರ್ಥಿಗಳಿಗೆ ವಿಸ್ತರಿಸಬಹುದು:

ಮತ್ತು ಪರಂತು,ಸಂಯೋಜನೆಯುನ್ನು ಮಂಜೂರ್ಮಾಡುವ ಮೂಲಕ ವಿಶ್ವವಿದ್ಯಾನಿಲಯದೊಡನೆ ದೇಶದ ಹೊರಗಿನ ಶಿಕ್ಷಣ ಸಂಸ್ಥೆಯು ಸಂಯೋಜಿತವಾಗತಕ್ಕದ್ದು ಮತ್ತು ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಗಳಿಗೆ ಪ್ರವೇಶ ಪಡೆಯತಕ್ಕದ್ದು. ಅಂಥ ಅಧಿಕಾರಗಳನ್ನು ವಿಶ್ವವಿದ್ಯಾನಿಲಯವು, 59ನೇ ಪ್ರಕರಣದಲ್ಲಿ ನಿಯಮಿಸಲಾದ ರೀತಿಯಲ್ಲಿ ಚಲಾಯಿಸತಕ್ಕದ್ದು:

ಅಲ್ಲದೆ ಪರಂತು, ಒಂದು ವಿಶ್ವವಿದ್ಯಾನಿಲಯದ ಪ್ರದೇಶದೊಳಗೆ ಇರುವ ಒಂದು ಶಿಕ್ಷಣ ಸಂಸ್ಥೆಯು, ಯಾವುದೇ ಇತರ ವಿಶ್ವವಿದ್ಯಾನಿಲಯದೊಡನೆ ಸಹವರ್ತಿಸಬಹುದು ಅಥವಾ ವಿಶೇಷಾಧಿಕಾರಗಳಿಗೆ ಪ್ರವೇಶ ಪಡೆಯಬಹುದು ಅಥವಾ ಒಂದು ಕಾಲೇಜು ಯಾವ ವಿಶ್ವವಿದ್ಯಾನಿಲಯದ ಅಧಿಕಾರ ವ್ಯಾಪ್ತಿಯೊಳಗೆ ಇರುವುದೋ ಆ ವಿಶ್ವವಿದ್ಯಾನಿಲಯದೊಡನೆ ಸಮಾಲೋಚಿಸಿ, ಸರ್ಕಾರದ ನಿರ್ದಿಷ್ಟ ಮಂಜೂರಾತಿಯೊಡನೆ, ವಿದೇಶಿ ವಿಶ್ವವಿದ್ಯಾನಿಲಯಗಳೂ ಸೇರಿದಂತೆ, ಸ್ಥಾಪಿತವಾದ ಮತ್ತು ನಿಗಮಿತವಾದ ಯಾವುದೇ ವಿಶ್ವವಿದ್ಯಾನಿಲಯಕ್ಕೆ

ಸಂಯೋಜಿತವಾಗಬಹುದು. ಅಂಥ ಮಂಜೂರಾತಿ ನೀಡುವ ರೀತಿ ಮತ್ತು ಕಾರ್ಯ ವಿಧಾನವು ಪರಿನಿಯಮಗಳಲ್ಲಿ ನಿಯಮಿಸಬಹುದಾದಂಥದ್ದಾಗಿರತಕ್ಕದ್ದು.

**ವಿವರಣೆ:-** ಈ ಪ್ರಕರಣದ ಉದ್ದೇಶಕ್ಕಾಗಿ 'ವಿದೇಶಿ ವಿಶ್ವವಿದ್ಯಾನಿಲಯ' ಎಂದರೆ ಸಂಸತ್ತಿನ ಅಥವಾ ಒಂದು ರಾಜ್ಯ ವಿಧಾನಮಂಡಲದ ಅಧಿನಿಯಮದ ಅಡಿಯಲ್ಲಿ ಭಾರತದ ಒಳಗಡೆ ಸ್ಥಾಪಿತವಾದ ವಿಶ್ವವಿದ್ಯಾನಿಲಯವಾಗಿರದ ಒಂದು ವಿಶ್ವವಿದ್ಯಾನಿಲಯ.

**6. ವಿಶ್ವವಿದ್ಯಾನಿಲಯವು ಎಲ್ಲಾ ವರ್ಗಗಳ ವ್ಯಕ್ತಿಗಳಿಗೂ ಮುಕ್ತವಾಗಿರತಕ್ಕದ್ದು.-** (1) ವಿಶ್ವ ವಿದ್ಯಾನಿಲಯವು, ಎಲ್ಲಾ ವ್ಯಕ್ತಿಗಳಿಗೆ, ಅವರು ಹೆಣ್ಣಾಗಿರಲಿ ಅಥವಾ ಗಂಡಾಗಿರಲಿ ಮತ್ತು ಯಾವುದೇ ಜನಾಂಗ, ಪಂಥ, ಜಾತಿ ಅಥವಾ ವರ್ಗಕ್ಕೆ ಸೇರಿರಲಿ, ಮುಕ್ತವಾಗಿರತಕ್ಕದ್ದು ಮತ್ತು ಅದಕ್ಕೆ ಅಧ್ಯಾಪಕನಾಗಿ ಅಥವಾ ವಿದ್ಯಾರ್ಥಿಯಾಗಿ ಪ್ರವೇಶ ಪಡೆಯಲು ಅಥವಾ ಅದರಲ್ಲಿ ಯಾವುದೇ ಹುದ್ದೆಯನ್ನು ಧಾರಣ ಮಾಡಲು ಅಥವಾ ಅದರಲ್ಲಿ ಪದವೀಧರನಾಗಲು ಅಥವಾ ಅದರ ಯಾವುದೇ ವಿಶೇಷಾಧಿಕಾರವನ್ನು ಅನುಭವಿಸಲು ಅಥವಾ ಚಲಾಯಿಸಲು ಹಕ್ಕುಳ್ಳವನಾಗಿರುವುದಕ್ಕೆ ಯಾವುದೇ ಧಾರ್ಮಿಕ ನಂಬಿಕೆ ಅಥವಾ ನಿಷ್ಠೆಯ ಬಗ್ಗೆ ಯಾವನೇ ವ್ಯಕ್ತಿಯ ಮೇಲೆ ಯಾವುದೇ ಅರ್ಹತೆಯನ್ನು ವಿಶ್ವವಿದ್ಯಾನಿಲಯವು ವಿಧಿಸುವುದು ಕಾನೂನು ಬದ್ಧವಾಗಿರತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ವಿಶ್ವವಿದ್ಯಾನಿಲಯವು, ರಾಜ್ಯ ಸರ್ಕಾರದ ವಿಶೇಷ ಅಥವಾ ಸಾಮಾನ್ಯ ನಿರ್ದೇಶನಗಳಿಗನುಸಾರವಾಗಿ, ಈ ಕೆಳಕಂಡ ವರ್ಗಗಳ ವ್ಯಕ್ತಿಗಳಿಗಾಗಿ, ವಿಶ್ವವಿದ್ಯಾನಿಲಯವು ನಿರ್ವಹಿಸುತ್ತಿರುವ ಅಥವಾ ನಿಯಂತ್ರಿಸುತ್ತಿರುವ ಯಾವುದೇ ಕಾಲೇಜು ಅಥವಾ ಸಂಸ್ಥೆಯಲ್ಲಿ ವಿದ್ಯಾರ್ಥಿಗಳ ಪ್ರವೇಶದ ಉದ್ದೇಶಗಳಿಗಾಗಿ ಸ್ಥಾನಗಳನ್ನು ಮೀಸಲಿರಿಸತಕ್ಕದ್ದು, ಎಂದರೆ:-

(i) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು;

(ii) ಇತರ ಹಿಂದುಳಿದ ವರ್ಗಗಳು;

(iii) ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ನಾಮ ನಿರ್ದೇಶಿತರಾದವರು;

(iv) ರಕ್ಷಣಾ ಸಿಬ್ಬಂದಿ ಮತ್ತು ಮಾಜಿ ಸೈನಿಕರು ಮತ್ತು ಅವರ ಮಕ್ಕಳು;

(v) ದೈಹಿಕವಾಗಿ ಅಂಗವಿಕಲತೆಯುಳ್ಳ ವ್ಯಕ್ತಿಗಳು (ಸಮಾನ ಅವಕಾಶಗಳು, ಹಕ್ಕುಗಳ ಸಂರಕ್ಷಣೆ ಮತ್ತು ಸಂಪೂರ್ಣ ಭಾಗವಹಿಸುವಿಕೆ) ಅಧಿನಿಯಮ, 1995ರ (1996ರ ಕೇಂದ್ರ ಅಧಿನಿಯಮ 1) ಅಡಿಯಲ್ಲಿ ಪರಿಭಾಷಿಸಲಾದ ಅಂಗವಿಕಲರು;

(3) ವಿಶ್ವವಿದ್ಯಾನಿಲಯುವು, ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳಿಗೊಳಪಟ್ಟು, ಊಟ, ವಸತಿಗಳ ಶುಲ್ಕ ಅಥವಾ ಇತರ ವೆಚ್ಚಗಳನ್ನು ಸಂದಾಯ

ಮಾಡುವುದರಿಂದ  ವಿನಾಯಿತಿ ಕೊಡಬಹುದು ಅಥವಾ ವಿಶೇಷ ವಿದ್ಯಾರ್ಥಿ ವೇತನಗಳನ್ನು ನೀಡಬಹುದು.

**7. ವಿಶ್ವವಿದ್ಯಾನಿಲಯದಲ್ಲಿ ಬೋಧನೆ ಮತ್ತು ಸಂಶೋಧನೆ.-** (1) ವಿದ್ಯಾವಿಷಯಕ ಪರಿಷತ್ತಿನ ನಿಯಂತ್ರಣಕ್ಕೊಳಪಟ್ಟು ವಿಶ್ವವಿದ್ಯಾನಿಲಯದ ವ್ಯಾಸಂಗ ಕ್ರಮಕ್ಕೆ ಸಂಬಂಧಪಟ್ಟಂತೆ ಎಲ್ಲ ಮನ್ನಣೆ ಪಡೆದ ಬೋಧನೆಯನ್ನು, ವಿನಿಯಮಗಳ ಮೂಲಕ ನಿಯಮಿಸಲಾದ ಪಠ್ಯಕ್ರಮಕ್ಕನುಸಾರವಾಗಿ ವಿಶ್ವವಿದ್ಯಾನಿಲಯದ ಅಧ್ಯಾಪಕರು ನಡೆಸತಕ್ಕದ್ದು ಮತ್ತು ಅದು ಉಪನ್ಯಾಸ ನೀಡುವುದು, ಪ್ರಯೋಗಶಾಲಾ ಕೆಲಸ ಮತ್ತು ಇತರ ಬೋಧನಾವಿಧಾನವನ್ನು ಒಳಗೊಳ್ಳತಕ್ಕದ್ದು.

(2) ಅಂಥ ಎಲ್ಲಾ ಬೋಧನೆಯನ್ನು ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಮೂಲಕ ನಿಯಮಿಸಬಹುದಾದಂತೆ  ಅಂಥ ಪ್ರಾಧಿಕಾರಗಳು ವ್ಯವಸ್ಥೆಗೊಳಿಸತಕ್ಕದ್ದು.

(3) ವ್ಯಾಸಂಗ ಕ್ರಮಗಳು ಮತ್ತು ಪಠ್ಯವಿಷಯಕಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮನಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

**8. ಶಿಸ್ತು, ಪರಿವೀಕ್ಷಣೆ ಮತ್ತು ನಿಯಂತ್ರಣ.-** (1) ಕುಲಾಧಿಪತಿಯವರು ತಾನಾಗಿ ಅಥವಾ ರಾಜ್ಯ ಸರ್ಕಾರದ ಶಿಫಾರಸುಗಳ ಮೇಲೆ ತಾನು ನಿರ್ದೇಶಿಸಬಹುದಾದಂತೆ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳಿರುವ ಒಂದು ಆಯೋಗದಿಂದ, ವಿಶ್ವವಿದ್ಯಾನಿಲಯದ ಕಟ್ಟಡಗಳ, ಪ್ರಯೋಗ ಶಾಲೆಗಳ, ಗ್ರಂಥಾಲಯಗಳ, ವಸ್ತು ಸಂಗ್ರಹಾಲಯಗಳ, ಕಾರ್ಯಾಗಾರಗಳ, ಸಾಧನ ಸಾಮಗ್ರಿಗಳ ಮತ್ತು ವಿಶ್ವವಿದ್ಯಾನಿಲಯವು, ನಿರ್ವಹಿಸುವ, ಆಡಳಿತ ನಡೆಸುವ, ಮನ್ನಣೆ ಕೊಟ್ಟಿರುವ ಅಥವಾ ಅನುಮೋದಿಸಿರುವ ಯಾವುದೇ ಸಂಸ್ಥೆ ಮತ್ತು ವಿಶ್ವವಿದ್ಯಾನಿಲಯವು ನಡೆಸಿದ ಅಥವಾ ನಿರ್ವಹಿಸಿದ ಪರೀಕ್ಷೆಗಳ, ಬೋಧನೆಗಳ ಮತ್ತು ಇತರ ಕೆಲಸಗಳ ಪರಿವೀಕ್ಷಣೆಯನ್ನು ಮಾಡಿಸಬಹುದು ಮತ್ತು  ವಿಶ್ವವಿದ್ಯಾನಿಲಯದ ಯಾವೊಬ್ಬ  ನೌಕರನ ವಿರುದ್ಧ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪೂರಕವಾಗಿ ಮಾಡಲಾದ ಯಾವುದೇ ನಿರ್ದಿಷ್ಟ ಆಪಾದನೆಗಳ ಬಗ್ಗೆ ಅದೇ ರೀತಿ ಪರಿವೀಕ್ಷಣೆ ಮಾಡಿಸಬಹುದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ಪರಿವೀಕ್ಷಣೆ ಅಥವಾ ವಿಚಾರಣೆಯನ್ನು ಮಾಡಲು ನಿರ್ದೇಶಿಸಲಾದ ಆಯೋಗವು ಸಂಬಂಧಪಟ್ಟ ಸಂಸ್ಥೆಗಳನ್ನು ಮತ್ತು ಆವರಣಗಳನ್ನು ಪ್ರವೇಶಿಸಲು ಮತ್ತು ಅಗತ್ಯವಾಗಬಹುದಾದಂಥ ಲೆಕ್ಕಪತ್ರಗಳನ್ನು ಅಥವಾ ಇತರ ದಾಖಲೆಗಳನ್ನು ಪರಿವೀಕ್ಷಿಸಲು ಅವಕಾಶವಿರತಕ್ಕದ್ದು.

(3) ಆಯೋಗವು, ಪರಿವೀಕ್ಷಣೆಯ ಅಥವಾ ವಿಚಾರಣೆಯ ಫಲಿತಾಂಶದ ವರದಿಯನ್ನು ಕುಲಾಧಿಪತಿಗೆ ಸಲ್ಲಿಸತಕ್ಕದ್ದು ಮತ್ತು ಅದರ ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(4) ಪರಿವೀಕ್ಷಣೆಯ ವರದಿಯನ್ನು ಸ್ವೀಕರಿಸಿದ ಕೂಡಲೇ ಕುಲಾಧಿಪತಿಯು, ಅದರ ಮೇಲೆ ತನ್ನ ತೀರ್ಮಾನಗಳನ್ನು ದಾಖಲಿಸತಕ್ಕದ್ದು ಮತ್ತು ಅವಶ್ಯಕವಾಗ ಬಹುದಾದ ಅಥವಾ ತಾನು ನಿರ್ದೇಶಿಸಬಹುದಾದ ಕ್ರಮ ಕೈಕೊಳ್ಳುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(5) ರಾಜ್ಯ ಸರ್ಕಾರವು, ವಿಚಾರಣೆಯ ಅಥವಾ ಪರಿವೀಕ್ಷಣೆಯ ವರದಿಯಲ್ಲಿಯ ತೀರ್ಮಾನಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ನಿರ್ದೇಶಿಸಿದಂತೆ ಅಂಥ ಕ್ರಮ ಕೈಗೊಳ್ಳಲು ಪ್ರಾರಂಭಿಸುವಂತೆ ಕುಲಪತಿಗೆ ನಿರ್ದೇಶಿಸತಕ್ಕದ್ದು ಮತ್ತು ಸಿಂಡಿಕೇಟ್ ಸರ್ಕಾರದ ನಿರ್ದೇಶನಗಳನ್ನು ಅನುಷ್ಠಾನಗೊಳಿಸತಕ್ಕದ್ದು.

(6) ಕುಲಪತಿಯು, ರಾಜ್ಯ ಸರ್ಕಾರದ ಆದೇಶಗಳಲ್ಲಿ ನಿರ್ದಿಷ್ಠಪಡಿಸಲಾದ ರಾಜ್ಯ ಸರ್ಕಾರದ ನಿರ್ದೇಶನಗಳನ್ನು ಅನುಸರಿಸಿ ಕೈಗೊಂಡ ಕ್ರಮದ ಬಗ್ಗೆ ಒಂದು ವರದಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(7) ಕುಲಪತಿಯು, ರಾಜ್ಯ ಸರ್ಕಾರದ ತೀರ್ಮಾನಗಳನ್ನು ಪಾಲಿಸಲು ತಪ್ಪಿದಲ್ಲಿ, ಆಗ ಆ ಬಗ್ಗೆ ಕುಲಾಧಿಪತಿಗೆ ವರದಿಮಾಡತಕ್ಕದ್ದು. ಅವರ ಆದೇಶವು ಅಂತಿಮವಾಗಿರತಕ್ಕದ್ದು ಮತ್ತು ಕುಲಾಧಿಪತಿಯವರ ಆದೇಶಗಳಲ್ಲಿ ನಿರೂಪಿಸಲಾದ ಅಂಥ ಅವಧಿಯೊಳಗೆ ಕುಲಪತಿಯು ಅವುಗಳನ್ನು ಕಾರ್ಯಗತಗೊಳಿಸತಕ್ಕದ್ದು.

(8) ಸಿಂಡಿಕೇಟು, ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂತೆ, ಅಂಥ ವಿವರಣ ಪಟ್ಟಿಗಳು, ತಃಖ್ತೆಗಳು, ಲೆಕ್ಕಪತ್ರಗಳು ಅಥವಾ ವಿಶ್ವವಿದ್ಯಾನಿಲಯದ ಆಡಳಿತಕ್ಕೆ ಸಂಬಂಧಪಡುವ ಇತರ ವಿವರಗಳನ್ನು ಸಲ್ಲಿಸತಕ್ಕದ್ದು.

**9. ನಿರ್ದೇಶನಗಳನ್ನು ನೀಡಲು ಅಧಿಕಾರ.–** ಕುಲಾಧಿಪತಿಯು, ತಾನಾಗಿ ಅಥವಾ ರಾಜ್ಯ ಸರ್ಕಾರದ ಶಿಫಾರಸಿನ ಮೇಲೆ, ವಿಶ್ವವಿದ್ಯಾನಿಲಯದ ಆಡಳಿತ ಮತ್ತು ವಿದ್ಯಾ ವಿಷಯಕ ಕಾರ್ಯನಿರ್ವಹಣೆಯ ಮತ್ತು ವಿಶೇಷವಾಗಿ ಶಾಂತಿ ಮತ್ತು ನೆಮ್ಮದಿಯನ್ನು ಕಾಯ್ದುಕೊಂಡುಬರುವ ದೃಷ್ಟಿಯಿಂದ ಮತ್ತು ಸ್ವತ್ತು ಮತ್ತು ಹಣಕಾಸು ವ್ಯವಸ್ಥೆಯನ್ನು ಸಂರಕ್ಷಿಸುವುದಕ್ಕಾಗಿ ಅವಶ್ಯಕ ಅಥವಾ ಯುಕ್ತವಾಬಹುದಾದ ಅಂಥ ನಿರ್ದೇಶನಗಳನ್ನು ನೀಡಬಹುದು.

**10. ವಿಶ್ವವಿದ್ಯಾನಿಲಯದ ಆದೇಶಗಳನ್ನು ರದ್ದುಗೊಳಿಸಲು ಅಧಿಕಾರ.–** (1) ರಾಜ್ಯ ಸರ್ಕಾರವು, ಅಧಿಕೃತ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ, ಈ ಅಧಿನಿಯಮದ ಅಥವಾ ಪರಿನಿಯಮಗಳು, ವಿನಿಯಮಗಳು ಅಥವಾ ಆರ್ಡಿನೆನ್ಸ್‌ಗಳ, ಉಪಬಂಧಗಳಿಗೆ ಸುಸಂಗತವಾಗಿಲ್ಲವಾಗಿಲ್ಲವೆಂದು ಅಥವಾ ಅನ್ಯಥಾ ರಾಜ್ಯಸರ್ಕಾರದ ಕಾರ್ಯನೀತಿಗೆ ಅಸಂಗತವಾಗಿದೆಯೆಂದು ತಾನು ಅಭಿಪ್ರಾಯಪಡುವ ಯಾವುದೇ ಆದೇಶ, ಅಧಿಸೂಚನೆ, ಠರಾವು ಅಥವಾ ಯಾವುವೇ ವ್ಯವಹರಣೆಗಳನ್ನು ರದ್ದುಗೊಳಿಸಬಹುದು:

ಪರಂತು, ಅಂಥ ಯಾವುದೇ ಆದೇಶವನ್ನು ಮಾಡುವುದಕ್ಕೆ ಮೊದಲು ರಾಜ್ಯ ಸರ್ಕಾರವು, ವಿಶ್ವವಿದ್ಯಾನಿಲಯಕ್ಕೆ ಒಂದು ಅವಕಾಶವನ್ನು ಕೊಡತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶವನ್ನು ಅದನ್ನು ಹೊರಡಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

## ಅಧ್ಯಾಯ - III

## ವಿಶ್ವವಿದ್ಯಾನಿಲಯದ ಅಧಿಕಾರಿಗಳು

**11. ವಿಶ್ವವಿದ್ಯಾನಿಲಯದ ಅಧಿಕಾರಿಗಳು.-** ಈ ಮುಂದಿನವರು ವಿಶ್ವವಿದ್ಯಾನಿಲಯದ ಅಧಿಕಾರಿಗಳಾಗಿರತಕ್ಕದ್ದು, ಎಂದರೆ:-

(ಎ) ಕುಲಾಧಿಪತಿ;

(ಬಿ) ಸಹಕುಲಾಧಿಪತಿ;

(ಸಿ) ಕುಲಪತಿ;

(ಡಿ) ರಿಜಿಸ್ಟ್ರಾರ್;

(ಇ) ರಿಜಿಸ್ಟ್ರಾರ್; (ಮೌಲ್ಯ ಮಾಪನ)

(ಎಫ್) ಡೀನರುಗಳು;

(ಜಿ) ಗ್ರಂಥಪಾಲ;

(ಹೆಚ್) ಹಣಕಾಸು ಅಧಿಕಾರಿ;

(ಐ) ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯ ಮಾಪನ ಮಂಡಳಿಯ ನಿರ್ದೇಶಕರು;

(ಜೆ) ವಿದ್ಯಾರ್ಥಿ ಕಲ್ಯಾಣದ ನಿರ್ದೇಶಕರು;

(ಕೆ) ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ತು;

(ಎಲ್) ನಿರ್ದೇಶಕರು, ಶಾರೀರಿಕ ಶಿಕ್ಷಣ;

(ಎಮ್) ರಾಜ್ಯ ಸರ್ಕಾರದ ಶಿಫಾರಸಿನ ಮೇಲೆ ಕುಲಪತಿಯು ಕಾಲಕಾಲಕ್ಕೆ ಹೆಸರಿಸಬಹುದಾದ ವಿಶ್ವವಿದ್ಯಾನಿಲಯದ ಅಂಥ ಇತರ ಅಧಿಕಾರಿಗಳು.

**12. ಕುಲಾಧಿಪತಿ.-** (1) ಕರ್ನಾಟಕ ರಾಜ್ಯಪಾಲರು ತಮ್ಮ ಪದದ ಕಾರಣದಿಂದಾಗಿ ವಿಶ್ವವಿದ್ಯಾನಿಲಯದ ಕುಲಾಧಿಪತಿಯಾಗಿರತಕ್ಕದ್ದು.

(2) ಅವರು ವಿಶ್ವವಿದ್ಯಾನಿಲಯದ ಮುಖ್ಯಸ್ಥರಾಗಿರತಕ್ಕದ್ದು ಮತ್ತು ಉಪಸ್ಥಿತರಿದ್ದಾಗ ವಿಶ್ವವಿದ್ಯಾನಿಲಯದ ಯಾವುದೇ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಅವರು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ತಮಗೆ ಪ್ರದತ್ತವಾದ ಇತರ ಅಧಿಕಾರಗಳನ್ನು ಹೊಂದಿರತಕ್ಕದ್ದು.

**13. ಸಹಕುಲಾಧಿಪತಿ.-** (1) ಕರ್ನಾಟಕದಲ್ಲಿ ಉನ್ನತ ಶಿಕ್ಷಣ ಅಥವಾ ವಿಶ್ವವಿದ್ಯಾನಿಲಯ ಶಿಕ್ಷಣದ ಪ್ರಭಾರಹೊಂದಿರುವ ಸಚಿವನು ಅವನ ಪದದ ಕಾರಣದಿಂದಾಗಿ ವಿಶ್ವವಿದ್ಯಾನಿಲಯದ ಸಹ ಕುಲಾಧಿಪತಿಯಾಗಿರತಕ್ಕದ್ದು.

(2) ಆತನು, ಕುಲಾಧಿಪತಿಯವರ ಗೈರುಹಾಜರಿಯಲ್ಲಿ, ವಿಶ್ವವಿದ್ಯಾನಿಲಯದ ಯಾವುದೇ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

**14. ಕುಲಪತಿ.-** (1) ಕುಲಪತಿಯು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು.

(2) ರಾಜ್ಯಸರ್ಕಾರವು, ಕುಲಾಧಿಪತಿಯಿಂದ, ರಾಜ್ಯಸರ್ಕಾರದಿಂದ, ವಿಶ್ವವಿದ್ಯಾನಿಲಯ ಅನುದಾನ ಆಯೋಗದಿಂದ ಮತ್ತು ಸಿಂಡಿಕೇಟ್‌ನಿಂದ ನಾಮನಿರ್ದೇಶಿತರಾದ ಒಬ್ಬೊಬ್ಬ ವ್ಯಕ್ತಿಯಿಂದ ಕೂಡಿದ ನಾಲ್ಕು ಮಂದಿ ಸದಸ್ಯರನ್ನು ಒಳಗೊಂಡ ಒಂದು ಶೋಧನಾ ಸಮಿತಿಯನ್ನು ರಚಿಸತಕ್ಕದ್ದು. ರಾಜ್ಯ ಸರ್ಕಾರವು, ನಾಲ್ಕು ಸದಸ್ಯರ ಪೈಕಿ ಒಬ್ಬನನ್ನು ಸಮಿತಿಯ ಅಧ್ಯಕ್ಷನನ್ನಾಗಿ ನೇಮಕ ಮಾಡತಕ್ಕದ್ದು. ಉನ್ನತ ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಸರ್ಕಾರದ ಉಪ ಕಾರ್ಯದರ್ಶಿಯ ದರ್ಜೆಗೆ ಕಡಿಮೆಯಲ್ಲದ ಅವರ ನಾಮನಿರ್ದೇಶಿತನು ಸಮಿತಿಯ ಸಂಚಾಲಕನಾಗಿರತಕ್ಕದ್ದು.

(3) ರಾಜ್ಯಸರ್ಕಾರದ, ವಿಶ್ವವಿದ್ಯಾನಿಲಯದ ಅಥವಾ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತವಾದ ಯಾವುದೇ ಕಾಲೇಜಿನ ಅಥವಾ ಸಂಸ್ಥೆಯ ವ್ಯವಹಾರಗಳೊಂದಿಗೆ ಸಂಬಂಧವಿರುವ ಯಾವ ವ್ಯಕ್ತಿಯನ್ನೂ ಶೋಧನಾ ಸಮಿತಿಯ ಸದಸ್ಯನನ್ನಾಗಿ ನಾಮನಿರ್ದೇಶನ ಮಾಡತಕ್ಕದ್ದಲ್ಲ.

(4) ಶೋಧನಾ ಸಮಿತಿಯು, ಖ್ಯಾತ ಶಿಕ್ಷಣ ತಜ್ಞರಾದ ಮೂರು ವ್ಯಕ್ತಿಗಳ ಒಂದು ಪಟ್ಟಿಯನ್ನು ಅಕಾರಾದಿ ಕ್ರಮದಲ್ಲಿ ರಾಜ್ಯಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ಆ ಪಟ್ಟಿಯನ್ನು ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು, ಅವರು ಅರ್ಹತೆ, ಸಮದರ್ಶಿತ್ವ ಮತ್ತು ಸಾಮಾಜಿಕ ನ್ಯಾಯ ಇವುಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ರಾಜ್ಯ ಸರ್ಕಾರದ ಸಹಮತಿಯೊಡನೆ ಪಟ್ಟಿಯಿಂದ ಒಬ್ಬ ವ್ಯಕ್ತಿಯನ್ನು ಕುಲಪತಿಯಾಗಿ ನೇಮಕ ಮಾಡತಕ್ಕದ್ದು.

ಪರಂತು, ಕುಲಾಧಿಪತಿಯವರು ಅವಶ್ಯವೆಂದು ಪರಿಗಣಿಸಿದರೆ ರಾಜ್ಯ ಸರ್ಕಾರದ ಸಹಮತಿಯೊಡನೆ ಎರಡನೆಯ ಪಟ್ಟಿಯನ್ನು ತರಿಸಿಕೊಳ್ಳಬಹುದು ಮತ್ತು ಶೋಧನಾ ಸಮಿತಿಯು ಎರಡನೆಯ ಪಟ್ಟಿಯನ್ನು ಸಲ್ಲಿಸತಕ್ಕದ್ದು ಹಾಗೂ ಅದು ಅಂತಿಮವಾಗಿರತಕ್ಕದ್ದು.

(5) ಯಾವೊಬ್ಬ ವ್ಯಕ್ತಿಯ ವಯಸ್ಸು ಅರವತ್ತೈದು ವರ್ಷವನ್ನು ಮೀರಿದ್ದರೆ, ಆತನನ್ನು ಕುಲಪತಿಯನ್ನಾಗಿ ನೇಮಕ ಮಾಡತಕ್ಕದ್ದಲ್ಲ ಅಥವಾ ಅವನು ಆ ಪದವನ್ನು ಧಾರಣ ಮಾಡತಕ್ಕದ್ದಲ್ಲ.

(6) ಕುಲಪತಿಯವರು, ಕುಲಾಧಿಪತಿಯವರ ಇಷ್ಟಪರ್ಯಂತ ಮತ್ತು (5)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು ನಾಲ್ಕು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು. ಅವರು ಎರಡನೇ ಅವಧಿಗೆ ಪುನರ್‌ನೇಮಕಕ್ಕೆ ಅರ್ಹರಾಗಿರತಕ್ಕದ್ದಲ್ಲ.

(7) ಕುಲಪತಿಯನ್ನು, ಈ ಅಧಿನಿಯಮದ ಉಪಬಂಧಗಳನ್ನು ಉದ್ದೇಶಪೂರ್ವಕವಾಗಿ ಬಿಟ್ಟುಬಿಡುವ ಅಥವಾ ನೆರವೇರಿಸಲು ನಿರಾಕರಿಸುವ ಅಥವಾ ಅವನಲ್ಲಿ ನಿಹಿತವಾದ ಅಧಿಕಾರಗಳನ್ನು ದುರುಪಯೋಗ ಪಡಿಸಿಕೊಂಡ ಕಾರಣದ ಮೇಲೆ ಮತ್ತು ರಾಜ್ಯ ಸರ್ಕಾರವು, (8)ನೇ ಉಪ ಪ್ರಕರಣದ ಮೇರೆಗೆ ಅದರಿಂದ ಆದೇಶಿಸಲಾದ ವಿಚಾರಣೆಯ ವರದಿಯನ್ನು ಪರಿಗಣಿಸಿದ ನಂತರ ಮತ್ತು ರಾಜ್ಯಸರ್ಕಾರವು ಸೂಚಿಸಿದ ಸಲಹೆಯ ಮೇಲೆ ಕುಲಾಧಿಪತಿಯು ಹೊರಡಿಸಿದ ಆದೇಶದ ಹೊರತು, ಪದದಿಂದ ತೆಗೆದು ಹಾಕತಕ್ಕದ್ದಲ್ಲ.

(8) ಈ ಪ್ರಕರಣದ ಮೇರೆಗೆ ಒಂದು ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ, ರಾಜ್ಯಸರ್ಕಾರವು, ಉಚ್ಚ ನ್ಯಾಯಾಲಯದ ಅಥವಾ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರುವ ಅಥವಾ ಆಗಿದ್ದ ವ್ಯಕ್ತಿಯನ್ನು ನೇಮಕ ಮಾಡತಕ್ಕದ್ದು. ವಿಚಾರಣಾ ಪ್ರಾಧಿಕಾರವು, ಕುಲಪತಿಯು ಮನವಿಯನ್ನು ಸಲ್ಲಿಸಲು ಅವಕಾಶ ನೀಡಿದ ನಂತರ ವಿಚಾರಣೆ ನಡೆಸತಕ್ಕದ್ದು ಮತ್ತು ವಿಧಿಸಬೇಕಾದ ಯಾವುದೇ ದಂಡನೆ ಇದ್ದರೆ, ಅದೂ ಒಳಗೊಂಡಂತೆ ಒಂದು ವರದಿಯನ್ನು ರಾಜ್ಯಸರ್ಕಾರಕ್ಕೆ ಸಲ್ಲಿಸತಕ್ಕದ್ದು. ರಾಜ್ಯಸರ್ಕಾರವು, ವರದಿಯನ್ನು ಪರಿಶೀಲಿಸಿದ ನಂತರ, ಕುಲಾಧಿಪತಿಗೆ ಸಲಹೆ ನೀಡತಕ್ಕದ್ದು. ಕುಲಾಧಿಪತಿಯು ಸಾಧ್ಯವಾದಷ್ಟು ಮಟ್ಟಿಗೆ ಆರು ತಿಂಗಳೊಳಗಾಗಿ ಅಂಥ ಸಲಹೆಗೆ ಅನುಸಾರವಾಗಿ ಕ್ರಮ ಕೈಗೊಳ್ಳತಕ್ಕದ್ದು.

(9) ಕುಲಪತಿಯ ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳು ಕುಲಾಧಿಪತಿಯು ನಿರ್ಧರಿಸಬಹುದಾದಂತೆ ಇರತಕ್ಕದ್ದು. ಮತ್ತು ಅವುಗಳನ್ನು ಅವನು ಕುಲಪತಿಯಾಗಿ ನೇಮಕವಾದ ತರುವಾಯ ಅವನಿಗೆ ಅನಾನುಕೂಲವಾಗುವಂತೆ ವ್ಯತ್ಯಸ್ಥಗೊಳಿಸತಕ್ಕದ್ದಲ್ಲ. ಕುಲಪತಿಯಾಗಿ ತನ್ನ ಅಧಿಕಾರಾವಧಿಯಲ್ಲಿ ವಯೋನಿವೃತ್ತಿಯ ಮೇಲೆ ನಿವೃತ್ತನಾಗುವ ಕುಲಪತಿಯ ಸಂದರ್ಭದಲ್ಲಿ, ಈಗಾಗಲೇ ನಿರ್ಧರಿಸಲಾದ ಅವನ ಸೇವಾ ಷರತ್ತುಗಳು ಮುಂದುವರಿಯತಕ್ಕದ್ದು. ಅವನ ಎಲ್ಲ ನಿವೃತ್ತಿ ಸೌಲಭ್ಯಗಳನ್ನು ತಡೆ ಹಿಡಿಯತಕ್ಕದ್ದು, ಅವುಗಳನ್ನು ಅವನು ಕುಲಪತಿಯಾಗಿ ಪದವನ್ನು ತ್ಯಜಿಸಿದ ನಂತರ ಬಿಡುಗಡೆ ಮಾಡತಕ್ಕದ್ದು.

(10) ನಿವೃತ್ತಿಹೊಂದಿದ ಒಬ್ಬ ವ್ಯಕ್ತಿಯು ಕುಲಪತಿಯಾಗಿ ನೇಮಕಗೊಂಡರೆ, ಆತನು ಕುಲಪತಿಯಾಗಿ ನೇಮಕಗೊಂಡ ಮೇಲೆ ಉಪಲಬ್ಧಿಗಳು ಸೇರಿದಂತೆ ಸೇವಾ ನಿಬಂಧನೆ ಮತ್ತು ಷರತ್ತುಗಳನ್ನು ಕುಲಾಧಿಪತಿಯು ನಿರ್ಣಯಿಸತಕ್ಕದ್ದು. ಅವನು ಪಡೆಯುವ ನಿವೃತ್ತಿ ವೇತನದ ಮೊತ್ತವನ್ನು ಮತ್ತು ಭತ್ಯಗಳನ್ನು ಉಪಲಬ್ಧಿಗಳಿಂದ ಕಳೆಯತಕ್ಕದ್ದು.

(11) ರಾಜ್ಯದಲ್ಲಿ ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವ ಒಬ್ಬ ಪ್ರಾಧ್ಯಾಪಕನು ಕುಲಪತಿಯಾಗಿ ನೇಮಕಗೊಂಡರೆ, ಅವನು ಕುಲಪತಿಯಾಗಿರುವ ಅಧಿಕಾರಾವಧಿಯಲ್ಲಿ ಪ್ರಾಧ್ಯಾಪಕನಾಗಿ ಅವನ ಸೇವಾ ನಿಬಂಧನೆ ಮತ್ತು ಷರತ್ತುಗಳನ್ನು ಅವನಿಗೆ ಅನಾನುಕೂಲವಾಗುವಂತೆ ಪರಿಷ್ಕರಿಸತಕ್ಕದಲ್ಲ ಮತ್ತು ಅವನು ತನ್ನ ಹುದ್ದೆಯ ಧಾರಣಾಧಿಕಾರವನ್ನು ಉಳಿಸಿಕೊಳ್ಳತಕ್ಕದ್ದು.

**15. ಕುಲಪತಿಯ ಅಧಿಕಾರಗಳು.-** (1) ಕುಲಪತಿಯು ವಿಶ್ವವಿದ್ಯಾನಿಲಯದ ಪ್ರಧಾನ ಕಾರ್ಯನಿರ್ವಾಹಕ ಮತ್ತು ವಿದ್ಯಾ ವಿಷಯುಕ ಅಧಿಕಾರಿಯಾಗಿರತಕ್ಕದ್ದು ಮತ್ತು ವಿಶ್ವವಿದ್ಯಾನಿಲಯದ ವ್ಯವಹಾರಗಳ ಮೇಲೆ ಸಾಮಾನ್ಯ ನಿಯಂತ್ರಣವನ್ನು ಚಲಾಯಿಸತಕ್ಕದ್ದು. ಅವನು ವಿಶ್ವವಿದ್ಯಾನಿಲಯದಲ್ಲಿ ಶಿಸ್ತುಪಾಲನೆಗೆ ಅವಶ್ಯವಾದ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(2) ಅವನು ವಿದ್ಯಾ ವಿಷಯಕ ಪರಿಷತ್ತು, ಸಿಂಡಿಕೇಟ್ ಮತ್ತು ಹಣಕಾಸು ಸಮಿತಿಯ ಪದನಿಮಿತ್ತ ಅಧ್ಯಕ್ಷನಾಗಿರತಕ್ಕದ್ದು. ಅವನು ಕುಲಾಧಿಪತಿಯ ಮತ್ತು ಸಹಕುಲಾಧಿಪತಿಯ ಗೈರುಹಾಜರಿಯಲ್ಲಿ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಅವನು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಅಥವಾ ನಿಕಾಯಗಳ ಸಭೆಗಳ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ಅವನು ಮತ ಚಲಾಯಿಸಲು ಹಕ್ಕುಳ್ಳವನಾಗಿರತಕ್ಕದ್ದು.

(3) ಅವನು ಈ ಅಧಿನಿಯಮದ, ಪರಿನಿಯಮಗಳ, ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳ ಎಲ್ಲಾ ಉಪಬಂಧಗಳ ಪಾಲನೆಯನ್ನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ಅವಶ್ಯವಾದ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು.

(4) ಅವನು ತಾನಾಗಿಯೇ ಆಗಲಿ ಅಥವಾ ತನ್ನಿಂದ ಲಿಖಿತದಲ್ಲಿ ಅಧಿಕೃತನಾದ ವಿಶ್ವವಿದ್ಯಾನಿಲಯದ ಯಾವೊಬ್ಬ ಅಧಿಕಾರಿಯ ಮೂಲಕವೇ ಆಗಲಿ, ವಿದ್ಯಾವಿಷಯಕ ಪರಿಷತ್ತು, ಸಿಂಡಿಕೇಟ್ ಮತ್ತು ಹಣಕಾಸು ಸಮಿತಿಯ ಸಭೆಗಳನ್ನು ಕರೆಯಬಹುದು ಮತ್ತು ಈ ಪ್ರಾಧಿಕಾರಗಳ ತೀರ್ಮಾನಗಳನ್ನು ಜಾರಿಗೆ ತರಲು ಮತ್ತು ಕಾರ್ಯಗತಗೊಳಿಸಲು ಅವಶ್ಯವಾಗಬಹುದಾದಂಥ ಎಲ್ಲ ಕಾರ್ಯಗಳನ್ನು ನೆರವೇರಿಸತಕ್ಕದ್ದು.

(5) ಕುಲಪತಿಯು, ತ್ವರಿತ ಕ್ರಮವು ಅಗತ್ಯವೆಂದು ಅವನು ಅಭಿಪ್ರಾಯಪಡುವ ಯಾವುದೇ ತುರ್ತು ಸಂದರ್ಭದಲ್ಲಿ ಅವನು ಅವಶ್ಯವೆಂದು ಭಾವಿಸುವಂಥ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಆ ತರುವಾಯ ಅತಿ ಶೀಘ್ರ ಸಮಯದಲ್ಲಿ ಸಾಮಾನ್ಯವಾಗಿ ವ್ಯವಹರಿಸುತ್ತಿದ್ದಂಥ ಪ್ರಾಧಿಕಾರಕ್ಕೆ ಅಥವಾ ನಿಕಾಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ವರದಿ ಮಾಡತಕ್ಕದ್ದು:

ಪರಂತು, ಕುಲಪತಿಯು ತೆಗೆದುಕೊಂಡ ಕ್ರಮವನ್ನು ಸಂಬಂಧಪಟ್ಟ ಪ್ರಾಧಿಕಾರ ಅಥವಾ ನಿಕಾಯವು ಅನುಮೋದಿಸದಿದ್ದರೆ, ಅವರು ಆ ವಿಷಯವನ್ನು ಕುಲಾಧಿಪತಿಗೆ ಒಪ್ಪಿಸಬಹುದು, ಆ ಬಗ್ಗೆ ಅವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು:

ಮತ್ತು ಪರಂತು, ಈ ಉಪಪ್ರಕರಣದ ಮೇರೆಗೆ ಕುಲಪತಿಯ ವರದಿಯ ಆಧಾರದ ಮೇಲೆ ಪ್ರಾಧಿಕಾರ ಅಥವಾ ನಿಕಾಯವು ತೆಗೆದುಕೊಂಡ ತೀರ್ಮಾನದಿಂದ ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವ ಯಾವೊಬ್ಬ ವ್ಯಕ್ತಿಯು ಬಾಧಿತನಾದರೆ, ಆ ವ್ಯಕ್ತಿಯು ಅವನಿಗೆ ತೀರ್ಮಾನವನ್ನು ತಿಳಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಕುಲಾಧಿಪತಿಯ ಮುಂದೆ ಅಪೀಲು ಹೂಡಬಹುದು ಮತ್ತು ಅಂಥ ಅಪೀಲಿನ ಮೇಲೆ ಕುಲಾಧಿಪತಿಯ ತೀರ್ಮಾನವೇ ಅಂತಿಮವಾಗಿರತಕ್ಕದ್ದು:

ಮತ್ತೂ ಪರಂತು, ಈ ಉಪಪ್ರಕರಣದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ವಿಶ್ವವಿದ್ಯಾನಿಲಯದ ನೌಕರರ ವೇತನ ಶ್ರೇಣಿಯನ್ನು ಪರಿಷ್ಕರಿಸಲು ಅಥವಾ ಕಾಲೇಜಿಗೆ ಅಥವಾ ಶಿಕ್ಷಣ ವ್ಯಾಸಂಗ ಕ್ರಮಕ್ಕೆ ಸಂಯೋಜನೆ ಮಂಜೂರು ಮಾಡಲು ಚಲಾಯಿಸತಕ್ಕದ್ದಲ್ಲ ಮತ್ತು ಈ ಉಪ ಪ್ರಕರಣದ ಮೇರೆಗೆ ಅಧಿಕಾರಗಳನ್ನು ಚಲಾಯಿಸಿ ಪರಿನಿಯಮಗಳು ಅಥವಾ ವಿನಿಯಮಗಳನ್ನು ರಚಿಸಿದರೆ ಅವು ಈ ಅಧಿನಿಯಮದ ಸೂಕ್ತ ಉಪಬಂಧಗಳ ಮೇರೆಗೆ ಕುಲಾಧಿಪತಿಯ ಅನುಮೋದನೆಗೆ ಒಳಪಟ್ಟಿರತಕ್ಕದ್ದು ಮತ್ತು ಆರ್ಡಿನೆನ್ಸ್‌ಗಳನ್ನು ರಚಿಸಿದ್ದರೆ, ಅವುಗಳನ್ನು ಈ ಅಧಿನಿಯಮದ ಅನುಸಾರ ಕುಲಾಧಿಪತಿಗೆ ಸಲ್ಲಿಸತಕ್ಕದ್ದು.

(6) ಕುಲಪತಿಯು ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

**16. ಕುಲಪತಿಯ ಹುದ್ದೆಯು ಖಾಲಿ ಇರುವ ಕಾಲದಲ್ಲಿ ಕಾರ್ಯ ವ್ಯವಸ್ಥೆ.-** (1) ರಜೆ, ಅನಾರೋಗ್ಯ ಅಥವಾ ಇತರ ಯಾವುದೇ ಕಾರಣದಿಂದಾಗಿ ಕುಲಪತಿಯ ತಾತ್ಕಾಲಿಕ ಗೈರುಹಾಜರಿಯ ಅವಧಿಯಲ್ಲಿ, ಕುಲಾಧಿಪತಿಯು, ಕುಲಪತಿಯ ಕರ್ತವ್ಯಗಳನ್ನು ನಿರ್ವಹಿಸುವುದಕ್ಕಾಗಿ ತಾನು ಸೂಕ್ತವೆಂದು ಭಾವಿಸುವಂಥ ವ್ಯವಸ್ಥೆಗಳನ್ನು ಮಾಡಬಹುದು:

ಪರಂತು, ಕುಲಾಧಿಪತಿಯವರು ವ್ಯವಸ್ಥೆಗಳನ್ನು ಮಾಡುವವರೆಗೆ, ಕುಲಪತಿಯು, ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿರುವ ಜ್ಯೇಷ್ಠತಮ ಡೀನನನ್ನು ಒಂದು ತಿಂಗಳಿಗಿಂತ ಹೆಚ್ಚಿಲ್ಲದ ಅವಧಿಗೆ ಅಥವಾ ಕುಲಾಧಿಪತಿಯವರು ಅಂಥ ವ್ಯವಸ್ಥೆಗಳನ್ನು ಮಾಡುವವರೆಗೆ ಇವುಗಳಲ್ಲಿ ಯಾವುದು ಮುಂಚಿತವೋ ಆವರೆಗೆ, ಕುಲಪತಿಯ ಪ್ರಸಕ್ತ ಕರ್ತವ್ಯಗಳ ಪ್ರಭಾರದಲ್ಲಿರಿಸಲು ನಿಯೋಜಿಸಬಹುದು.

(2) ಕುಲಪತಿಯ ಹುದ್ದೆಯು ಭರ್ತಿಯಾಗದೆ ಖಾಲಿ ಉಳಿದಿರುವ ಅವಧಿಯಲ್ಲಿ, ಕುಲಾಧಿಪತಿಯು ನೇಮಕ ಮಾಡಬಹುದಾದ ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿರುವ ಅಂಥ ಜ್ಯೇಷ್ಠತಮ ಡೀನನು ಕುಲಪತಿಯಾಗಿ ಕಾರ್ಯನಿರ್ವಹಿಸತಕ್ಕದ್ದು ಮತ್ತು ಹಾಗೆ ನೇಮಕಗೊಂಡ ವ್ಯಕ್ತಿಯು ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಕುಲಪತಿಯ ಎಲ್ಲ ವಿಶೇಷಾಧಿಕಾರಗಳಿಗೆ ಮತ್ತು ಇದರ ಸಂಬಂಧದಲ್ಲಿ ಪರಿನಿಯಮಗಳೇನಾದರೂ ಇದ್ದರೆ ಅವುಗಳಿಗೆ ಅನುಸಾರವಾಗಿ ಕುಲಾಧಿಪತಿಯು ನಿರ್ಣಯಿಸಬಹುದಾದಂತೆ ಅಂಥ ಉಪಲಬ್ಧಿಗಳಿಗೆ ಮತ್ತು ಭತ್ಯಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು.

**17. ರಿಜಿಸ್ಟ್ರಾರ್:-** (1) ರಿಜಿಸ್ಟ್ರಾರನು, ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು. ಸೂಪರ್-ಟೈಮ್-ಶ್ರೇಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಖಿಲ ಭಾರತ ಸೇವೆಗೆ ಸೇರಿದ ಒಬ್ಬ ಅಧಿಕಾರಿಯನ್ನು, ರಾಜ್ಯಸರ್ಕಾರವು ನೇಮಕ ಮಾಡಬಹುದು.

(2) ರಿಜಿಸ್ಟ್ರಾರನು, ವಿದ್ಯಾವಿಷಯಕ ಪರಿಷತ್ತಿನ ಮತ್ತು ಸಿಂಡಿಕೇಟಿನ ಪದನಿಮಿತ್ತ ಸದಸ್ಯಕಾರ್ಯದರ್ಶಿಯು ಮತ್ತು ಹಣಕಾಸು ಸಮಿತಿಯ ಸದಸ್ಯನು ಆಗಿರತಕ್ಕದ್ದು.

(3) (i) ವಿಶ್ವವಿದ್ಯಾನಿಲಯದ ದಾಖಲೆಗಳ, ಸಾಮಾನ್ಯ ಮೊಹರಿನ ಮತ್ತು ಕುಲಪತಿ ಅಥವಾ ಸಿಂಡಿಕೇಟ್ ಅವನ ವಶಕ್ಕೆ ಒಪ್ಪಿಸುವಂಥ ಇತರ ಸ್ವತ್ತಿನ ಅಭಿರಕ್ಷಕನಾಗಿರುವುದು;

(ii) ಸಿಂಡಿಕೇಟಿನ, ವಿದ್ಯಾವಿಷಯಕ ಪರಿಷತ್ತಿನ ಅಥವಾ ವ್ಯಾಸಂಗ ವಿಭಾಗಗಳ, ಅಧ್ಯಯನ ಮಂಡಳಿಯ ಮತ್ತು ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಸಭೆಗಳನ್ನು ಕರೆಯುವ ನೋಟೀಸುಗಳನ್ನು ಹೊರಡಿಸುವುದು ಮತ್ತು ಅಂಥ ಎಲ್ಲ ಸಭೆಗಳ ನಡವಳಿಗಳನ್ನು ಇಡುವುದು;

(iii) ಅವನು ಸದಸ್ಯ ಕಾಯದರ್ಶಿಯಾಗಿರುವ ಪ್ರಾಧಿಕಾರಗಳ ಅಧಿಕೃತ ಪತ್ರವ್ಯವಹಾರವನ್ನು ನಡೆಸುವುದು;

(iv) ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಸಭೆಗಳ ಕಾರ್ಯ ಸೂಚಿಯ ಪ್ರತಿಗಳನ್ನು, ಅವುಗಳನ್ನು ಹೊರಡಿಸಿದ ಕೂಡಲೇ, ಮತ್ತು ಸಭೆಗಳನ್ನು ನಡೆಸಿದ ಒಂದು ತಿಂಗಳೊಳಗಾಗಿ ಅವುಗಳ ನಡವಳಿಗಳನ್ನು ಕುಲಾಧಿಪತಿಗೆ ಮತ್ತು ರಾಜ್ಯಸರ್ಕಾರಕ್ಕೆ ಒದಗಿಸುವುದು;

-ರಿಜಿಸ್ಟ್ರಾರನ ಕರ್ತವ್ಯವಾಗಿರತಕ್ಕದ್ದು.

(4) ರಿಜಿಸ್ಟ್ರಾರನು ಪರಿನಿಯಮಗಳು, ಆರ್ಡಿನೆನ್ಸ್‌ಗಳು ಅಥವಾ ವಿನಿಯಮಗಳು ನಿಯಮಿಸ ಬಹುದಾದಂಥ ಮತ್ತು ಕುಲಪತಿಯು ಕಾಲಕಾಲಕ್ಕೆ ಹಂಚಿಕೆ ಮಾಡಬಹುದಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

(5) ರಿಜಿಸ್ಟ್ರಾರನಿಗೆ ಒಬ್ಬ ಅಥವಾ ಅದಕ್ಕೂ ಹೆಚ್ಚಿನ ಉಪ ರಿಜಿಸ್ಟ್ರಾರರು ಮತ್ತು ಸಹಾಯಕ ರಿಜಿಸ್ಟ್ರಾರರು ನೆರವು ನೀಡತಕ್ಕದ್ದು.

**18. ರಿಜಿಸ್ಟ್ರಾರ್ (ಮೌಲ್ಯಮಾಪನ).-** (1) ರಿಜಿಸ್ಟ್ರಾರನು (ಮೌಲ್ಯಮಾಪನ) ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು. ಸಮೂಹ-ಎ ಹಿರಿಯ ಶ್ರೇಣಿಯ ದರ್ಜೆಗೆ ಕಡಿಮೆಯಲ್ಲದ ಕರ್ನಾಟಕ ಆಡಳಿತ ಸೇವೆಗೆ ಸೇರಿದ ಒಬ್ಬ ಅಧಿಕಾರಿಯನ್ನು ಅಥವಾ ಯಾವುದೇ ವಿಶ್ವವಿದ್ಯಾನಿಲಯದ ವ್ಯಾಸಂಗ ವಿಭಾಗದ ಒಬ್ಬ ಹಿರಿಯ ಸದಸ್ಯನನ್ನು ರಾಜ್ಯಸರ್ಕಾರವು, ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ (ಮೌಲ್ಯಮಾಪನ) ಆಗಿ ನೇಮಕ ಮಾಡಬಹುದು.

ಪರಂತು, ಅಂಥ ವ್ಯಕ್ತಿಯು ಲಭ್ಯವಿರದಿದ್ದಲ್ಲಿ, ಕುಲಪತಿಯವರು ಶಿಫಾರಸುಮಾಡಿದ ಮೂವರಿಗಿಂತ ಕಡಿಮೆಯಾಗಿರದ ವ್ಯಕ್ತಿಗಳ ಪಟ್ಟಿಯಿಂದ, ಸಿಂಡಿಕೇಟಿನ ಅನುಮೋದನೆಯೊಡನೆ, ಕುಲಪತಿಯವರು ರಿಜಿಸ್ಟ್ರಾರನನ್ನು (ಮೌಲ್ಯಮಾಪನ) ನೇಮಕಮಾಡತಕ್ಕದ್ದು. ಪರಿನಿಯಮಗಳ ಮೂಲಕ ನಿಯಮಿಸಲಾದ ಅವಧಿಯೊಳಗೆ, ಸಿಂಡಿಕೇಟು ಪಟ್ಟಿಯಲ್ಲಿರುವ ಯಾವೊಬ್ಬ ವ್ಯಕ್ತಿಯನ್ನು ಅನುಮೋದಿಸದಿದ್ದರೆ, ಕುಲಾಧಿಪತಿಯವರು, ಕುಲಪತಿಯವರೊಡನೆ ಸಮಾಲೋಚಿಸಿ, ಅವರ ಪೈಕಿ ರಿಜಿಸ್ಟ್ರಾರ್ (ಮೌಲ್ಯಮಾಪನ) ನಾಗಲು ತಾನು ಸೂಕ್ತವೆಂದು ಭಾವಿಸುವ ಅಂಥ ಇತರ ವ್ಯಕ್ತಿಯನ್ನು ನೇಮಕ ಮಾಡಬಹುದು. ಹಾಗೆ ನೇಮಕಗೊಂಡ ರಿಜಿಸ್ಟ್ರಾರ್ (ಮೌಲ್ಯಮಾಪನ) ಇವರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಉಪಲಬ್ಧಿಗಳು ಕುಲಾಧಿಪತಿಯವರು ನಿರ್ಧರಿಸ ಬಹುದಾದಂಥವುಗಳಾಗಿರತಕ್ಕದ್ದು.

(2) ರಿಜಿಸ್ಟ್ರಾರನು (ಮೌಲ್ಯಮಾಪನ) ಸಿಂಡಿಕೇಟ್, ವಿದ್ಯಾವಿಷಯಕ ಪರಿಷತ್ತು, ಹಣಕಾಸು ಸಮಿತಿ ಮತ್ತು ಎಲ್ಲ ವ್ಯಾಸಂಗ ವಿಭಾಗಗಳ ಸದಸ್ಯನಾಗಿರತಕ್ಕದ್ದು.

(3) ರಿಜಿಸ್ಟ್ರಾರನು (ಮೌಲ್ಯಮಾಪನ) ಪರೀಕ್ಷೆಗಳನ್ನು ನಡೆಸುವ ಮತ್ತು ಅದಕ್ಕೆ ಪ್ರಾಸಂಗಿಕವಾದ ಮತ್ತು ಅದಕ್ಕೆ ಸಹಾಯಕವಾದ ಎಲ್ಲ ಇತರ ವಿಷಯಗಳ ಪ್ರಭಾರದಲ್ಲಿರತಕ್ಕದ್ದು ಮತ್ತು ಪರಿನಿಯಮಗಳು ಅಥವಾ ಆರ್ಡಿನೆನ್ಸ್‌ಗಳ ಮೂಲಕ ನಿಯಮಿಸಬಹುದಾದಂಥ ಅಥವಾ ಕುಲಪತಿಯಿಂದ ಹಂಚಿಕೆಯಾಗ ಬಹುದಾದಂಥ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(4) ರಿಜಿಸ್ಟ್ರಾರನಿಗೆ (ಮೌಲ್ಯಮಾಪನ) ಒಬ್ಬ ಅಥವಾ ಹೆಚ್ಚು ಉಪ ರಿಜಿಸ್ಟ್ರಾರರು (ಮೌಲ್ಯಮಾಪನ) ಮತ್ತು ಸಹಾಯಕ ರಿಜಿಸ್ಟ್ರಾರರು (ಮೌಲ್ಯಮಾಪನ) ನೆರವು ನೀಡಬಹುದು.

**19. ಹಣಕಾಸು ಅಧಿಕಾರಿ.-** (1) ಹಣಕಾಸು ಅಧಿಕಾರಿಯು, ಕುಲಪತಿಯು ಸಿಂಡಿಕೇಟಿಗೆ ಶಿಫಾರಸ್ಸು ಮಾಡಿದ, ಲೆಕ್ಕಪರಿಶೋಧನೆ, ಲೆಕ್ಕಪತ್ರ ಮತ್ತು ಹಣಕಾಸು ಆಡಳಿತದಲ್ಲಿ ಅನುಭವವಿರುವ ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಜಂಟಿ ನಿಯಂತ್ರಕ ಕೇಡರ್‌ನಲ್ಲಿನ ಅಧಿಕಾರಿಗಳು ಅಥವಾ ಉಪಮಹಾಲೇಖಾಪಾಲ ದರ್ಜೆಯ ಒಬ್ಬ ಅಧಿಕಾರಿಯು ಇರುವ ಮೂರು ವ್ಯಕ್ತಿಗಳಿಗಿಂತ ಕಡಿಮೆಯಾಗಿರದ ಹೆಸರುಗಳ ಪಟ್ಟಿಯಿಂದ ಸಿಂಡಿಕೇಟಿನ ಅನುಮೋದನೆಯೊಂದಿಗೆ ಕುಲಪತಿಯಿಂದ ನೇಮಕ ಮಾಡಲಾಗುವ ವಿಶ್ವವಿದ್ಯಾನಿಲಯದ ಒಬ್ಬ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು. ಪರಿನಿಯಮಗಳ ಮೂಲಕ ನಿಯಮಿಸಲಾದ ಸಮಯದೊಳಗೆ ಪಟ್ಟಿಯಲ್ಲಿನ ಯಾರ ಹೆಸರೂ ಸಿಂಡಿಕೇಟಿನಿಂದ ಅನುಮೋದಿತವಾಗಿರದಿದ್ದರೆ, ಕುಲಾಧಿಪತಿಯು, ಕುಲಪತಿಯೊಂದಿಗೆ ಸಮಾಲೋಚಿಸಿ, ಹಣಕಾಸು ಅಧಿಕಾರಿ ಆಗಿರಲು ಸೂಕ್ತವೆಂದು ಅವನು ಭಾವಿಸುವಂಥ ಇತರ ವ್ಯಕ್ತಿಯನ್ನು ನೇಮಕ ಮಾಡಬಹುದು.

(2) ಹಣಕಾಸು ಅಧಿಕಾರಿಯ ನೇಮಕದ ಅವಧಿ ಮತ್ತು ಅವನ ಉಪಲಬ್ಧಿಗಳು ಮತ್ತು ಇತರ ನಿಬಂಧನೆಗಳು ಮತ್ತು ಷರತ್ತುಗಳು ಕುಲಾಧಿಪತಿಯು ನಿರ್ಧರಿಸುವಂಥವುಗಳಾಗಿರತಕ್ಕದ್ದು.

(3) ಹಣಕಾಸು ಅಧಿಕಾರಿಯು, ಹಣಕಾಸು ಸಮಿತಿಯ ನಿಯಂತ್ರಣಕ್ಕೊಳಪಟ್ಟು, ಪರಿನಿಯಮಗಳ, ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಅಥವಾ ಕುಲಪತಿ ಅಥವಾ ರಿಜಿಸ್ಟ್ರಾರನು ಕಾಲ ಕಾಲಕ್ಕೆ ಅಗತ್ಯಪಡಿಸಬಹುದಾದಂತೆ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂತಹ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು. ಅವನು ವಿದ್ಯಾವಿಷಯಕ ಪರಿಷತ್ತಿನ ಪದನಿಮಿತ್ತ ಸದಸ್ಯನಾಗಿರತಕ್ಕದ್ದು ಮತ್ತು ಹಣಕಾಸು ಸಮಿತಿಯ ಪದನಿಮಿತ್ತ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

**20. ರಿಜಿಸ್ಟ್ರಾರ್, ರಿಜಿಸ್ಟ್ರಾರ್ (ಮೌಲ್ಯಮಾಪನ), ಹಣಕಾಸು ಅಧಿಕಾರಿಯ ಹುದ್ದೆಯು ತಾತ್ಕಾಲಿಕವಾಗಿ ಖಾಲಿ ಇರುವುದು.–** (1) ರಿಜಿಸ್ಟ್ರಾರ್, ರಿಜಿಸ್ಟ್ರಾರ್ (ಮೌಲ್ಯಮಾಪನ) ಅಥವಾ ಹಣಕಾಸು ಅಧಿಕಾರಿಯ ಮರಣ, ಅಮಾನತ್ತು ಅಥವಾ ತಾತ್ಕಾಲಿಕ ಗೈರು ಹಾಜರಿಯ ಸಂದರ್ಭದಲ್ಲಿ, ಕುಲಾಧಿಪತಿಯು, ಸಂದರ್ಭಾನುಸಾರ ರಿಜಿಸ್ಟ್ರಾರ್, ರಿಜಿಸ್ಟ್ರಾರ್ (ಮೌಲ್ಯಮಾಪನ) ಅಥವಾ ಹಣಕಾಸು ಅಧಿಕಾರಿಯ ಕರ್ತವ್ಯಗಳನ್ನು ನಿರ್ವಹಿಸಲು ವಿಶ್ವವಿದ್ಯಾನಿಲಯದ ಯಾವೊಬ್ಬ ಇತರ ಸೂಕ್ತ ಅಧಿಕಾರಿಗೆ ಪ್ರಾಧಿಕಾರ ನೀಡಬಹುದು.

(2) ರಿಜಿಸ್ಟ್ರಾರ್, ರಿಜಿಸ್ಟ್ರಾರ್ (ಮೌಲ್ಯಮಾಪನ) ಅಥವಾ ಹಣಕಾಸು ಅಧಿಕಾರಿಯ ಪದದಲ್ಲಿ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಸೂಕ್ತ ಅಧಿಕಾರಿಯನ್ನು ನೇಮಕಾತಿ ಮಾಡುವ ವರೆಗೆ ಕುಲಪತಿಯು ತನ್ನ ವಿವೇಚನಾನುಸಾರ, ಅಂತಹ ಖಾಲಿ ಹುದ್ದೆಗಳ ಕರ್ತವ್ಯವನ್ನು ನಿರ್ವಹಿಸಲು ಯಾವೊಬ್ಬ ಅಧಿಕಾರಿಯನ್ನು ಪ್ರಾಧೀಕರಿಸಬಹುದು. ಕುಲಪತಿಯು, ಈ ಉಪಪ್ರಕರಣದ ಅಡಿಯಲ್ಲಿ ತಾನು ಕೈಗೊಂಡ ಕ್ರಮದ ಬಗ್ಗೆ ಕೂಡಲೇ ಕುಲಾಧಿಪತಿಗೆ ವರದಿಮಾಡತಕ್ಕದ್ದು.

**21. ಡೀನ್.–** (1) ಜ್ಯೇಷ್ಠತೆಯ ಅನುಸಾರ ಪ್ರತಿಯೊಂದು ವ್ಯಾಸಂಗ ವಿಭಾಗದಲ್ಲಿ ಒಬ್ಬ ಪ್ರಾಧ್ಯಾಪಕನು ಸರದಿಯ ಪ್ರಕಾರ ಎರಡು ವರ್ಷಗಳ ಅವಧಿಗೆ ವ್ಯಾಸಂಗ ವಿಭಾಗದ ಡೀನ್ ಆಗಿ ಕಾರ್ಯನಿರ್ವಹಿಸತಕ್ಕದ್ದು:

ಪರಂತು, ಪ್ರಾಧ್ಯಾಪಕರಿಲ್ಲದಿದ್ದರೆ, ಜ್ಯೇಷ್ಠತಮ ರೀಡರನು, ಡೀನ್ ಆಗಿ ಕಾರ್ಯ ನಿರ್ವಹಿಸತಕ್ಕದ್ದು:

ಮತ್ತು ಪರಂತು, ಯಾವುದೇ ವ್ಯಾಸಂಗ ವಿಭಾಗದಲ್ಲಿ ಯಾರೇ ಪ್ರಾಧ್ಯಾಪಕ ಅಥವಾ ರೀಡರ್ ಇಲ್ಲದಿದ್ದರೆ, ಆಗ ಕುಲಪತಿಯು, ತನ್ನ ವಿವೇಚನಾನುಸಾರ, ಡೀನ್ ಆಗಿ ಕಾರ್ಯ ನಿರ್ವಹಿಸಲು ಯಾರೇ ಇತರ ಸೂಕ್ತ ಅಧ್ಯಾಪಕರನ್ನು ನಿಯೋಜಿಸಬಹುದು.

ಮತ್ತೂ ಪರಂತು, ವ್ಯಾಸಂಗ ವಿಭಾಗದಲ್ಲಿ ಡೀನ್ ಆಗಿ ಕಾರ್ಯ ನಿರ್ವಹಿಸಲು ವ್ಯಾಸಂಗ ವಿಭಾಗದಲ್ಲಿ ಯಾವ ವ್ಯಕ್ತಿಯೂ ದೊರೆಯದಿದ್ದಲ್ಲಿ ಅಥವಾ ವಿಶ್ವವಿದ್ಯಾನಿಲಯವು ಯಾವುದೇ ವ್ಯಾಸಂಗ ವಿಭಾಗಕ್ಕೆ ಅಧ್ಯಯನಗಳ ವಿಭಾಗವನ್ನು ಹೊಂದಿಲ್ಲದಿದ್ದರೆ, ಆಗ, ಕುಲಪತಿಯು, ಜ್ಯೇಷ್ಠತೆಯ ಆಧಾರದ ಮೇಲೆ ವ್ಯಾಸಂಗ ವಿಭಾಗದ ಡೀನ್‌ಆಗಿ ಕಾರ್ಯ ನಿರ್ವಹಿಸಲು ಯಾವುದೇ ಸಂಯೋಜಿತ ಕಾಲೇಜಿನ ಅಧ್ಯಯನಗಳ ವಿಭಾಗದಲ್ಲಿ ಅಂಥ ಅಧ್ಯಾಪಕನನ್ನು ನಾಮನಿರ್ದೇಶನ ಮಾಡಬಹುದು.

(2) ಪ್ರತಿಯೊಂದು ವ್ಯಾಸಂಗ ವಿಭಾಗದ ಡೀನರು ವ್ಯಾಸಂಗ ವಿಭಾಗದ ಕಾರ್ಯನಿರ್ವಹಣಾ ಅಧಿಕಾರಿಯಾಗಿರತಕ್ಕದ್ದು ಮತ್ತು ವ್ಯಾಸಂಗ ವಿಭಾಗದ ಸಭೆಗಳ ಅಧ್ಯಕ್ಷತೆ ವಹಿಸತಕ್ಕದ್ದು.

(3) ಡೀನರು ಪರಿನಿಯಮಗಳು ಅಥವಾ ಆರ್ಡಿನೆನ್ಸ್‌ಗಳ ಮೂಲಕ ನಿಯಮಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

**22. ವಿದ್ಯಾರ್ಥಿಗಳ ಕಲ್ಯಾಣ ನಿರ್ದೇಶಕರು.-** ವಿದ್ಯಾರ್ಥಿಗಳ ಕಲ್ಯಾಣ ನಿರ್ದೇಶಕರು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು ಮತ್ತು ಸಿಂಡಿಕೇಟಿನ ಶಿಫಾರಸಿನ ಮೇರೆಗೆ ಕುಲಾಧಿಪತಿಯಿಂದ ನೇಮಕಗೊಳ್ಳತಕ್ಕದ್ದು. ಆತನು ಕುಲಾಧಿಪತಿಯವರು ಪ್ರದಾನ ಮಾಡಬಹುದಾದ ಅಥವಾ ವಿಧಿಸಬಹುದಾದ ಅಥವಾ ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು. ಆತನ ಪದಾವಧಿ, ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳು ಪರಿನಿಯಮಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**23. ಗ್ರಂಥಪಾಲ.-** ಗ್ರಂಥಪಾಲನು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು ಮತ್ತು 53ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ರಚಿತವಾದ ನೇಮಕಾತಿ ಮಂಡಲಿಯ ಶಿಫಾರಸಿನ ಮೇರೆಗೆ ಸಿಂಡಿಕೇಟಿನಿಂದ ನೇಮಕಗೊಳ್ಳತಕ್ಕದ್ದು. ಅವನು ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ವಿದ್ಯಾರ್ಹತೆಗಳನ್ನು ಹೊಂದಿರತಕ್ಕದ್ದು ಮತ್ತು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. ಅವನ ಉಪಲಬ್ಧಿಗಳು ಮತ್ತು ಸೇವಾ ನಿಬಂಧನೆಗಳು ಹಾಗೂ ಷರತ್ತುಗಳು, ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥವುಗಳಾಗಿರತಕ್ಕದ್ದು.

**24. ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಲಿಯ ನಿರ್ದೇಶಕ.-** ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಲಿಯ ನಿರ್ದೇಶಕನು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು ಮತ್ತು ಸಿಂಡಿಕೇಟಿನಿಂದ ನೇಮಕಗೊಳ್ಳತಕ್ಕದ್ದು. ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ವಿದ್ಯಾರ್ಹತೆಗಳನ್ನು ಅವನು ಹೊಂದಿರತಕ್ಕದ್ದು ಮತ್ತು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. ಅವನ ಉಪಲಬ್ಧಿಗಳು ಮತ್ತು ಸೇವಾ ನಿಬಂಧನೆಗಳು ಹಾಗೂ ಷರತ್ತುಗಳು ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥವುಗಳಾಗಿರತಕ್ಕದ್ದು.

**25. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ತು.-** ನಿರ್ದೇಶಕ, ಕಾಲೇಜು ಅಭಿವೃದ್ಧಿ ಪರಿಷತ್ತು ಇವನು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು ಮತ್ತು ಇವನು

ಸಿಂಡಿಕೇಟಿನಿಂದ ನೇಮಕಗೊಳ್ಳತಕ್ಕದ್ದು. ಇವನು, ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ವಿದ್ಯಾರ್ಹತೆಗಳನ್ನು ಹೊಂದಿರತಕ್ಕದ್ದು ಮತ್ತು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. ಅವನ ಉಪಲಬ್ಧಿಗಳು ಮತ್ತು ಸೇವಾ ನಿಬಂಧನೆಗಳು ಹಾಗು ಷರತ್ತುಗಳು ಪರಿನಿಯಮಗಳ ಮೂಲಕ ನಿಯಮಿಸಬಹುದಾಂಥವುಗಳಾಗಿರತಕ್ಕದ್ದು.

**26. ಶಾರೀರಿಕ ಶಿಕ್ಷಣ ನಿರ್ದೇಶಕರು.-** ಶಾರೀರಿಕ ಶಿಕ್ಷಣದ ನಿರ್ದೇಶಕರು ವಿಶ್ವವಿದ್ಯಾನಿಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು ಮತ್ತು 57ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ನೇಮಕಾತಿ ಮಂಡಲಿಯ ಶಿಫಾರಸಿನ ಮೇರೆಗೆ ಸಿಂಡಿಕೇಟಿನಿಂದ ನೇಮಕಗೊಳ್ಳತಕ್ಕದ್ದು. ಅವನು ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ವಿದ್ಯಾರ್ಹತೆಗಳನ್ನು ಹೊಂದಿರತಕ್ಕದ್ದು ಮತ್ತು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. ಅವನ ಉಪಲಬ್ಧಿಗಳು ಮತ್ತು ಸೇವಾ ಷರತ್ತುಗಳು ಪರಿನಿಯಮಗಳ ಮೂಲಕ ನಿಯಮಿಸಬಹುದಾಂಥವುಗಳಾಗಿರತಕ್ಕದ್ದು.

## ಅಧ್ಯಾಯ - IV

## ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು

**27. ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು.-** ಈ ಮುಂದಿನವು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳಾಗಿರತಕ್ಕದ್ದು, ಎಂದರೆ,-

(ಎ) ಸಿಂಡಿಕೇಟ್;

(ಬಿ) ವಿದ್ಯಾವಿಷಯಕ ಪರಿಷತ್ತು; (ಅಕಾಡೆಮಿಕ್ ಕೌನ್ಸಿಲ್)

(ಸಿ) ಹಣಕಾಸು ಸಮಿತಿ;

(ಡಿ) ಅಧ್ಯಯನಗಳ ಮಂಡಳಿ;

(ಇ) ವ್ಯಾಸಂಗ ವಿಭಾಗಗಳು;

(ಎಫ್) ಯೋಜನಾ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ;

(ಜಿ) ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳೆಂದು ಪರಿನಿಯಮಗಳ ಮೂಲಕ ಘೋಷಿಸಬಹುದಾದ ಅಂಥ ಇತರ ನಿಕಾಯಗಳು.

**28. ಸಿಂಡಿಕೇಟ್. –** (1) ಸಿಂಡಿಕೇಟ್ ಈ ಮುಂದಿನ ಸದಸ್ಯರನ್ನು ಒಳ ಗೊಂಡಿರತಕ್ಕದ್ದು; ಎಂದರೆ;-

(ಎ) ಕುಲಪತಿ;

(ಬಿ) ಕಾಲೇಜು ಶಿಕ್ಷಣ ಕಮೀಷನರ್ ಅಥವಾ ಜಂಟಿ ನಿರ್ದೇಶಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅವನ ನಾಮನಿರ್ದೇಶಿತ;

(ಸಿ) ತಾಂತ್ರಿತ ಶಿಕ್ಷಣ ನಿರ್ದೇಶಕ ಅಥವಾ ಜಂಟಿ ನಿರ್ದೇಶಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅವನ ನಾಮನಿರ್ದೇಶಿತ;

(ಡಿ) ಜ್ಯೇಷ್ಠತೆಯ ಆಧಾರದ ಮೇಲೆ ಸರದಿಯ ಮೇಲೆ ಒಂದು ವರ್ಷದ ಅವಧಿಗಾಗಿ ಕುಲಪತಿಯವರಿಂದ ನಾಮ ನಿರ್ದೇಶಿತನಾದ ಒಬ್ಬ ಡೀನ್;

(ಇ) ಖ್ಯಾತ ಶಿಕ್ಷಣತಜ್ಞರ, ವಾಣಿಜ್ಯ, ಬ್ಯಾಂಕಿಂಗ್, ಕೈಗಾರಿಕೆ ಅಥವಾ ಇತರ ವೃತ್ತಿಗಳ ಪೈಕಿಯಿಂದ ಕುಲಾಧಿಪತಿಯವರು ನಾಮನಿರ್ದೇಶನ ಮಾಡಿದ ಇಬ್ಬರು ಸದಸ್ಯರು;

(ಎಫ್) ಜ್ಯೇಷ್ಠತೆಗನುಸಾರವಾಗಿ ಸರದಿಯ ಮೇಲೆ ಒಂದು ವರ್ಷದ ಅವಧಿಗಾಗಿ ಕುಲಪತಿಯವರಿಂದ ನಾಮನಿರ್ದೇಶಿತರಾದ ಸಂಯೋಜಿತ ಕಾಲೇಜುಗಳ ನಾಲ್ಕು ಪ್ರಾಂಶುಪಾಲರು, ಅವರಲ್ಲಿ ಒಬ್ಬರು ಮಹಿಳಾ ಪ್ರಾಂಶುಪಾಲರಾಗತಕ್ಕದ್ದು;

(ಜಿ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಆರು ಜನ ಖ್ಯಾತ ಶಿಕ್ಷಣ ತಜ್ಞರು, ಅವರಲ್ಲಿ,-

(i) ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಒಬ್ಬರು;

(ii) ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಒಬ್ಬರು;

(iii) ಮಹಿಳೆಯರು ಒಬ್ಬರು;

(iv) ಧಾರ್ಮಿಕ ಅಲ್ಪಸಂಖ್ಯಾತರಿಗೆ ಸೇರಿದ ಒಬ್ಬರು;

(v) ಇತರ ಇಬ್ಬರು;

- ಇರತಕ್ಕದ್ದು:

ಪರಂತು, ಸಂಯೋಜಿತ ಕಾಲೇಜಿನಲ್ಲಿ ಅಥವಾ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಸಾಮರ್ಥ್ಯದಲ್ಲಿ ನಿಯೋಜನೆಯಲ್ಲಿರುವ ಯಾವೊಬ್ಬ ವ್ಯಕ್ತಿಯು ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದಲ್ಲ.

(ಹೆಚ್) ರಾಜ್ಯ ಸರ್ಕಾರದ ಅನುಮೋದನೆಯೊಂದಿಗೆ ಕುಲಪತಿಯು, ಜ್ಯೇಷ್ಠತೆಗನುಸಾರವಾಗಿ ಸರದಿಯ ಮೇಲೆ ಒಂದು ವರ್ಷದ ಅವಧಿಗೆ ನಾಮನಿರ್ದೇಶನ ಮಾಡಿದ ಸ್ನಾತಕೋತ್ತರ ಅಧ್ಯಯನಗಳ ಒಬ್ಬ ಪ್ರಾಧ್ಯಾಪಕ:

(ಐ) ವೈದ್ಯಕೀಯ ಶಿಕ್ಷಣದ ನಿರ್ದೇಶಕರು ಅಥವಾ ಜಂಟಿ ನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ಅವರ ನಾಮನಿರ್ದೇಶಿತರು;

(ಜೆ) ಸಾರ್ವಜನಿಕ ಶಿಕ್ಷಣದ ಆಯುಕ್ತರು ಅಥವಾ ಜಂಟಿ ನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ಅವರ ನಾಮನಿರ್ದೇಶಿತರು;

(ಕೆ) ಪದವಿ ಪೂರ್ವ ಶಿಕ್ಷಣದ ನಿರ್ದೇಶಕರು ಅಥವಾ ಜಂಟಿ ನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ಅವರ ನಾಮನಿರ್ದೇಶಿತರು;

(2) ಸಿಂಡಿಕೇಟ್, ಒಂದು ವರ್ಷದಲ್ಲಿ ಕನಿಷ್ಠಪಕ್ಷ ಎಂಟು ಸಭೆಗಳನ್ನು ನಡೆಸತಕ್ಕದ್ದು. ಎರಡು ನಿರಂತರ ಸಭೆಗಳ ನಡುವಣ ಅವಧಿಯು ಎಂಟು ವಾರಗಳನ್ನು ಮೀರತಕ್ಕದ್ದಲ್ಲ. ಕುಲಪತಿಯು, ತುರ್ತು ಸಂದರ್ಭಗಳಲ್ಲಿ ವಿಶೇಷ ಸಭೆಗಳನ್ನು ನಡೆಸಬಹುದು.

(3) ಕುಲಾಧಿಪತಿ ಅಥವಾ ರಾಜ್ಯ ಸರ್ಕಾರವು, ಅವರು ನಿರ್ದಿಷ್ಟಪಡಿಸಬಹುದಾದಂತೆ ಅಂಥ ಪರಿಶೀಲನಾಂಶಗಳನ್ನು ಚರ್ಚಿಸಲು ಸಭೆಗಳನ್ನು ನಡೆಸುವುದಕ್ಕೆ ನಿರ್ದೇಶನಗಳನ್ನು ನೀಡಬಹುದು ಮತ್ತು ಕುಲಪತಿಯು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

**29. ಸಿಂಡಿಕೇಟಿನ ಅಧಿಕಾರಗಳು.-** (1) ಸಿಂಡಿಕೇಟು, ವಿಶ್ವವಿದ್ಯಾನಿಲಯದ ನಿಧಿಗಳ ಮತ್ತು ಸ್ವತ್ತುಗಳ ನಿರ್ವಹಣೆಯ ಮತ್ತು ವಿಶ್ವವಿದ್ಯಾನಿಲಯದ ವ್ಯವಹಾರಗಳ ಆಡಳಿತದ ಅಧಿಕಾರವನ್ನು ಹೊಂದಿರತಕ್ಕದ್ದು.

(2) ಹಿಂದೆ ಹೇಳಿದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಸಿಂಡಿಕೇಟು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ವಿಶ್ವವಿದ್ಯಾನಿಲಯದ ಹಣಕಾಸು ಮತ್ತು ಎಲ್ಲ ಇತರ ಆಡಳಿತಾತ್ಮಕ ವ್ಯವಹಾರಗಳನ್ನು ನಿರ್ವಹಿಸುವುದು ಮತ್ತು ನಿಯಂತ್ರಿಸುವುದು ಮತ್ತು ಆ ಉದ್ದೇಶಕ್ಕಾಗಿ ತಾನು ಅವಶ್ಯಕ ಹಾಗೂ ಸೂಕ್ತವೆಂದು ಭಾವಿಸಬಹುದಾದ ಅಂಥ ಏಜೆಂಟರನ್ನು ನೇಮಕ ಮಾಡುವುದು;

(ಬಿ) ವಿಶ್ವವಿದ್ಯಾನಿಲಯದ ಪರವಾಗಿ ಕರಾರುಗಳನ್ನು ಮಾಡಿ ಕೊಳ್ಳುವುದು, ವ್ಯತ್ಯಸ್ತಗೊಳಿಸುವುದು, ಕಾರ್ಯಗತಗೊಳಿಸುವುದು ಮತ್ತು ರದ್ದುಗೊಳಿಸುವುದು;

(ಸಿ) 34ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಪರೀಕ್ಷಕರು ಮತ್ತು ಮಾಡರೇಟರುಗಳನ್ನು ನೇಮಕಮಾಡುವುದು ಮತ್ತು ಅವಶ್ಯವೆನಿಸಿದರೆ

ಅವರನ್ನು ಬದಲಾಯಿಸುವುದು ಅಥವಾ ತೆಗೆದು ಹಾಕುವುದು ಹಾಗೂ ಅವರ ಫೀಜುಗಳು, ಉಪಲಬ್ಧಿಗಳು ಮತ್ತು ಪ್ರವಾಸ ಮತ್ತು ಇತರ ಭತ್ಯಗಳನ್ನು ಸಹ ನಿಗದಿಪಡಿಸುವುದು;

(ಡಿ) ಪರಿನಿಯಮಗಳು, ಆರ್ಡಿನೆನ್ಸ್‌ಗಳು ಅಥವಾ ವಿನಿಯಮಗಳ ಮೂಲಕ ನಿಯಮಿಸಲಾದ ರೀತಿಯಲ್ಲಿ ಪರೀಕ್ಷೆಗಳನ್ನು ನಡೆಸುವುದಕ್ಕಾಗಿ ವ್ಯವಸ್ಥೆಗಳನ್ನು ಮಾಡುವುದು;

(ಇ) ವಿಶ್ವವಿದ್ಯಾನಿಲಯದ ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಸ್ವೀಕರಿಸುವುದು, ಆರ್ಜಿಸುವುದು, ಧಾರಣ ಮಾಡುವುದು, ನಿಯಂತ್ರಿಸುವುದು ಮತ್ತು ಆಡಳಿತ ನಡೆಸುವುದು ಮತ್ತು ವಿಶ್ವ ವಿದ್ಯಾನಿಲಯದ ನಿಧಿಗಳನ್ನು ಸೂಕ್ತ ಯೋಜನೆಗಳಲ್ಲಿ ವಿವೇಕಯುತವಾಗಿ ತೊಡಗಿಸುವುದು;

(ಎಫ್) ವಿಶ್ವವಿದ್ಯಾನಿಲಯದ ನಿಧಿಗಳು ಮತ್ತು ಸ್ವತ್ತುಗಳಿಗೆ ಸಂಬಂಧಿಸಿದ ಸರಿಯಾದ ಲೆಕ್ಕಪತ್ರಗಳನ್ನು ಇಡುವಂತೆ ಮಾಡುವುದು;

(ಜಿ) ಈ ಮುಂದಿನವುಗಳಿಗಾಗಿ ಫೀಜುಗಳನ್ನು ವಿಧಿಸುವುದು ಮತ್ತು ವಸೂಲಿ ಮಾಡುವುದು;

(i) ಪಾಠ ಮತ್ತು ಸಂಶೋಧನೆ;

(ii) ಪರೀಕ್ಷೆಗಳು ಮತ್ತು ಘಟಿಕೋತ್ಸವಗಳಿಗೆ ಪ್ರವೇಶ;

(iii) ವಿಶ್ವವಿದ್ಯಾನಿಲಯವು ಕೈಗೊಳ್ಳಬಹುದಾದಂತೆ ಅಂಥ ಇತರ ಸೇವೆಗಳು;

(iv) ಕಾಲೇಜುಗಳ ಸಂಯೋಜನೆ ಮತ್ತು ಪರಿವೀಕ್ಷಣೆ;

(v) ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥ ಇತರ ಉದ್ದೇಶಗಳು;

(ಹೆಚ್) ವಿಶ್ವವಿದ್ಯಾನಿಲಯದ ಹಣಕಾಸು ಅಂದಾಜುಗಳನ್ನು ತಯಾರಿಸುವುದು ಮತ್ತು ಅದನ್ನು ವಿದ್ಯಾವಿಷಯಕ ಪರಿಷತ್ತಿಗೆ ಒಪ್ಪಿಸುವುದು;

(ಐ) ವಿಶ್ವವಿದ್ಯಾನಿಲಯವು ಸ್ಥಾಪಿಸಿದ ಅಥವಾ ನಿರ್ವಹಿಸುತ್ತಿರುವ ಕಾಲೇಜುಗಳು, ವಿದ್ಯಾರ್ಥಿನಿಲಯಗಳು, ಗ್ರಂಥಾಲಯಗಳು, ಪ್ರಯೋಗ ಶಾಲೆಗಳು, ವಸ್ತು ಸಂಗ್ರಹಾಲಯಗಳು ಮತ್ತು ಇತರ ಸಂಸ್ಥೆಗಳ ಆಡಳಿತ ಮತ್ತು ನಿಯಂತ್ರಣ ಕೈಗೊಳ್ಳುವುದು;

(ಜೆ) ಕಾಲೇಜುಗಳ ಸಂಯೋಜನೆಯ ಸಂಬಂಧದಲ್ಲಿ ಪ್ರವೇಶ ನೀಡುವುದಕ್ಕಾಗಿ ಶಿಫಾರಸ್ಸುಗಳನ್ನು ಮಾಡುವುದು;

(ಕೆ) ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಇಲ್ಲದಿರುವ ವಿದ್ಯಾರ್ಥಿನಿಲಯಗಳನ್ನು ಮನ್ನಣೆ ನೀಡುವುದು ಮತ್ತು ಅಂಥ ಮನ್ನಣೆಯನ್ನು ಅಮಾನತ್ತುಗೊಳಿಸುವುದು ಅಥವಾ ಹಿಂತೆಗೆದುಕೊಳ್ಳುವುದು;

(ಎಲ್) ಕ್ಯಾಂಪಸ್ ಮತ್ತು ಅದರ ಅನೆಕ್ಸ್‌ಗಳೊಳಗೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ನಿವಾಸ ಮತ್ತು ಶಿಸ್ತಿನ ಮೇಲ್ವಿಚಾರಣೆ ಮತ್ತು ನಿಯಂತ್ರಣ ಹಾಗೂ ಅವರ ಆರೋಗ್ಯ ಮತ್ತು ಯೋಗಕ್ಷೇಮವನ್ನು ವೃದ್ಧಿಗೊಳಿಸಲು ವ್ಯವಸ್ಥೆ ಮಾಡುವುದು;

(ಎಮ್) ಉದ್ಯೋಗ ವಿಭಾಗ (ಬ್ಯೂರೋ) ಮತ್ತು ವಾರ್ತಾ ವಿಭಾಗವನ್ನು ರಚಿಸುವುದು, ಮತ್ತು ಅವುಗಳ ಕಾರ್ಯನಿರ್ವಹಣೆಯ ನಿಯಂತ್ರಣ ಮಾಡುವುದು;

(ಎನ್) ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಅಂಥ ತನ್ನ ಪ್ರಕಾರ್ಯಗಳನ್ನು ಕುಲಪತಿಗೆ ಪ್ರತಿಯೋಜಿಸುವುದು;

(ಓ) ವಿಶ್ವವಿದ್ಯಾನಿಲಯಕ್ಕಾಗಿ ಸಾಮಾನ್ಯ ಮುದ್ರೆಯನ್ನು ಆಯ್ಕೆ ಮಾಡುವುದು ಮತ್ತು ಅದರ ಅಭಿರಕ್ಷೆ ಮತ್ತು ಉಪಯೋಗಕ್ಕಾಗಿ ಉಪಬಂಧಿಸುವುದು;

(ಪಿ) ವಿಶ್ವವಿದ್ಯಾನಿಲಯದಿಂದ ಅಥವಾ ಅದರ ವಿರುದ್ಧ ಕಾನೂನು ವ್ಯವಹರಣೆ ನಡೆಸಲು ವ್ಯವಸ್ಥೆ ಮಾಡುವುದು;

(ಕ್ಯೂ) ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ವಿಶ್ವವಿದ್ಯಾನಿಲಯವು ಅಗತ್ಯ ಪಡಿಸಿದ ಪ್ರಾಧ್ಯಾಪಕರ, ಉಪನ್ಯಾಸಕರ ಅಥವಾ ಶಿಕ್ಷಕರ ಯಾವುವೇ ಇತರ ಹುದ್ದೆಗಳನ್ನು ಸ್ಥಾಪಿಸುವುದು;

(ಆರ್) ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಫೆಲೋಶಿಪ್‌ಗಳು, ಸಂಚಾರಿ ಫೆಲೋಶಿಪ್‌ಗಳು, ವಿದ್ಯಾರ್ಥಿ ವೇತನಗಳು, ಶಿಷ್ಯವೇತನಗಳು, ಪ್ರವೇತನಗಳು, ಪದಕಗಳು ಮತ್ತು ಪಾರಿತೋಷಕಗಳನ್ನು ಸ್ಥಾಪಿಸುವುದು;

(ಎಸ್) ವಿದ್ಯಾವಿಷಯಕ ಪರಿಷತ್ತಿನ ಶಿಫಾರಸಿನ ಮೇಲೆ ಗೌರವ ಪದವಿಗಳು, ಬಿರುದುಗಳು ಅಥವಾ ಇತರೆ ವಿದ್ಯಾವಿಷಯಕ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

(ಟಿ) ಪರಿನಿಯಮಗಳನ್ನು ರಚಿಸುವುದು, ಅವುಗಳ ತಿದ್ದುಪಡಿ ಮಾಡುವುದು ಮತ್ತು ನಿರಸನಗೊಳಿಸುವುದು;

(ಯು) ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಪ್ರೊಫೆಸರ್ ಇಮೆರಿಟಿಸ್ (ವಿಶ್ರಾಂತ ಮಹೋಪಾಧ್ಯಾಯ) ಬಿರುದನ್ನು ಪ್ರದಾನ ಮಾಡುವುದು;

(ವಿ) ಹುದ್ದೆಗಳ ಸೃಜನೆಗಾಗಿ ಪರಿನಿಯಮಗಳನ್ನು ಮಾಡುವುದು;

(ಡಬ್ಲ್ಯೂ) ಈ ಅಧಿನಿಯಮ, ಪರಿನಿಯಮಗಳು, ಆರ್ಡಿನೆನ್ಸ್‌ಗಳು ಅಥವಾ ವಿನಿಯಮಗಳ ಮೂಲಕ ತನಗೆ ಪ್ರದಾನ ಮಾಡಬಹುದಾದ ಅಥವಾ ವಿಧಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂಥ ಇತರ ಕರ್ತವ್ಯಗಳನ್ನು ನಿರ್ವಹಿಸುವುದು.

(3) (2)ನೇ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ನೌಕರರ ವೇತನ ಶ್ರೇಣಿಗಳನ್ನು ಪರಿಷ್ಕರಿಸುವ ಅಥವಾ ಅವರಿಗೆ ಯಾವುವೇ ಭತ್ಯೆಗಳನ್ನು ಅಥವಾ ಉಪಲಬ್ಧಿಗಳನ್ನು ನೀಡುವ ಅಧಿಕಾರವನ್ನು ಸಿಂಡಿಕೇಟಿಗೆ ಪ್ರದಾನ ಮಾಡಿರುವುದಾಗಿ ಭಾವಿಸತಕ್ಕದ್ದಲ್ಲ.

**30. ವಿದ್ಯಾವಿಷಯಕ ಪರಿಷತ್ತು.-** (1) ವಿದ್ಯಾವಿಷಯಕ ಪರಿಷತ್ತು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(i) ಕುಲಪತಿ;

(ii) ಕಾಲೇಜು ಶಿಕ್ಷಣ ಕಮಿಷನರ್ ಅಥವಾ ಜಂಟಿ ನಿರ್ದೇಶಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅವರ ನಾಮ ನಿರ್ದೇಶಿತರು;

(iii) ತಾಂತ್ರಿಕ ಶಿಕ್ಷಣದ ನಿರ್ದೇಶಕರು ಅಥವಾ ಜಂಟಿ ನಿರ್ದೇಶಕನ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಅವರ ನಾಮ ನಿರ್ದೇಶಿತರು;

(iv) ವಿಶ್ವವಿದ್ಯಾನಿಲಯದ ಪ್ರದೇಶ ವ್ಯಾಪ್ತಿಯೊಳಗೆ ಬರುವ ಪ್ರತಿಯೊಂದು ಜಿಲ್ಲೆಗೆ ಸಂಬಂಧಪಟ್ಟಂತೆ ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರು ನಾಮನಿರ್ದೇಶನ ಮಾಡಿದ ಒಬ್ಬ ಕರ್ನಾಟಕ ವಿಧಾನ ಸಭಾ ಸದಸ್ಯ;

(v) ಕರ್ನಾಟಕ ವಿಧಾನಪರಿಷತ್ತಿನ ಸಭಾಪತಿಯವರು ನಾಮನಿರ್ದೇಶನ ಮಾಡಿದ ಇಬ್ಬರು ಕರ್ನಾಟಕ ವಿಧಾನ ಪರಿಷತ್ ಸದಸ್ಯರು;

(vi) ಎರಡು ವರ್ಷಗಳ ಅವಧಿಗಾಗಿ, ಜ್ಯೇಷ್ಠತೆಗೆ ಅನುಸಾರವಾಗಿ ಸರದಿಯ ಮೇಲೆ, ಕುಲಪತಿಯವರಿಂದ ನಾಮನಿರ್ದೇಶಿತರಾದ ಸಂಯೋಜಿತ ಕಾಲೇಜುಗಳ ಹತ್ತು ಜನ ಪ್ರಾಂಶುಪಾಲರು;

(vii) ಮೂರು ವರ್ಷಗಳನ್ನು ಮೀರದ ಅವಧಿಗಾಗಿ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾದ, ಕೈಗಾರಿಕೆ, ವಾಣಿಜ್ಯ, ಬ್ಯಾಂಕಿಂಗ್ ಅಥವಾ ಇತರ ಯಾವುದೇ ವೃತ್ತಿಯನ್ನು (ವಿಶ್ವವಿದ್ಯಾನಿಲಯದ ಅಧಿಕಾರ ವ್ಯಾಪ್ತಿಯೊಳಗೆ ಬರುವ) ಪ್ರತಿನಿಧಿಸುವ ಮೂವರು ಸುಪ್ರಸಿದ್ಧ ವ್ಯಕ್ತಿಗಳು;

(viii) ಕುಲಪತಿಯವರು, ಜ್ಯೇಷ್ಠತೆಗನುಸಾರವಾಗಿ, ಸರದಿಯ ಮೇಲೆ ಎರಡು ವರ್ಷಗಳ ಅವಧಿಗಾಗಿ ನಾಮನಿರ್ದೇಶನ ಮಾಡಿದ ವಿಶ್ವವಿದ್ಯಾನಿಲಯದ ವಿಭಾಗದ ಐವರು ಪ್ರಾಧ್ಯಾಪಕರು;

(ix) ಕುಲಪತಿಯವರು, ಜ್ಯೇಷ್ಠತೆಗನುಸಾರವಾಗಿ, ಎರಡು ವರ್ಷಗಳ ಅವಧಿಗಾಗಿ ಸರದಿಯ ಮೇಲೆ ನಾಮನಿರ್ದೇಶನ ಮಾಡಿದ ವ್ಯಾಸಂಗ ವಿಭಾಗಗಳ ಐವರು ಡೀನರುಗಳು;

(x) ಎರಡು ವರ್ಷಗಳ ಅವಧಿಗಾಗಿ ಕುಲಪತಿಯವರಿಂದ ನಾಮ ನಿರ್ದೇಶನ ಮಾಡಲಾಗುವ ಆರು ವಿದ್ಯಾರ್ಥಿಗಳು, ಅವರ ಪೈಕಿ, ಪದವಿ ವ್ಯಾಸಂಗದ ಒಬ್ಬ ವಿದ್ಯಾರ್ಥಿ, ಸ್ನಾತಕೋತ್ತರ ಪದವಿಯ ಒಬ್ಬ ವಿದ್ಯಾರ್ಥಿ, ವೃತ್ತಿಪರ ವ್ಯಾಸಂಗದ ಒಬ್ಬ ವಿದ್ಯಾರ್ಥಿ, ನ್ಯಾಷನಲ್ ಕೆಡೆಟ್ ಕೋರ್‌ನ ಒಬ್ಬ ಅಭ್ಯರ್ಥಿ, ನ್ಯಾಷನಲ್ ಸೋಷಿಯಲ್ ಸರ್ವಿಸ್‌ನ ಒಬ್ಬ ಅಭ್ಯರ್ಥಿ, ಅರ್ಹತೆಯ ಆಧಾರದ ಮೇಲೆ ಒಬ್ಬ ಕ್ರೀಡಾಪಟು, ಮತ್ತು ಅವರಲ್ಲಿ ಕನಿಷ್ಠ ಪಕ್ಷ ಒಬ್ಬ ಮಹಿಳೆ ಇರತಕ್ಕದ್ದು, ಮತ್ತು ಒಬ್ಬ ಸಂಶೋಧನಾ ವಿದ್ಯಾರ್ಥಿ ಇರತಕ್ಕದ್ದು:

ಪರಂತು, ಯಾವೊಬ್ಬ ವಿದ್ಯಾರ್ಥಿಯು,-

(ಎ) ವಿಶ್ವವಿದ್ಯಾನಿಲಯದ ಅಥವಾ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜಿನ ಹಾಜರಿಪಟ್ಟಿಯಲ್ಲಿ ಅವನ ಹೆಸರು ಕಂಡು ಬರದಿದ್ದ ಹೊರತು,

(ಬಿ) ಒಂದು ಪದವಿ ಅಥವಾ ಸ್ನಾತಕೋತ್ತರ ಪದವಿ ಅಥವಾ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಡಿಪ್ಲೋಮಾಕ್ಕೆ ಅವಕಾಶ ಕೊಡುವ ವಿಶ್ವವಿದ್ಯಾನಿಲಯದಲ್ಲಿ ಅಥವಾ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜಿನಲ್ಲಿ ವ್ಯಾಸಂಗ ಕ್ರಮವನ್ನು ನಡೆಸುತ್ತಿದ್ದ ಹೊರತು,

(ಸಿ) ಬೆಳಗಿನ ಕಾಲೇಜಿನಲ್ಲಿ ಅಥವಾ ಸಂಜೆ ಕಾಲೇಜಿನಲ್ಲಿ ಅಥವಾ ಬಾಹ್ಯ ಅಭ್ಯರ್ಥಿಯಾಗಿ ಅಥವಾ ಅಂಚೆ ತೆರಪಿನ ಶಿಕ್ಷಣದ ಮೂಲಕ ಪರೀಕ್ಷೆಯನ್ನು ತೆಗೆದುಕೊಳ್ಳುತ್ತಿದ್ದರೆ,

(ಡಿ) ಅವನು ಆರು ವರ್ಷಗಳಲ್ಲಿ ವ್ಯಾಸಂಗ ಕ್ರಮವನ್ನು ಪೂರ್ಣಗೊಳಿಸಲು ತಪ್ಪಿದರೆ,

-ಅವನು ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದಲ್ಲ.

(xi) ಮೂರು ವರ್ಷಗಳ ಅವಧಿಗಾಗಿ, ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಆರು ಜನ ಸುಪ್ರಸಿದ್ಧ ಶಿಕ್ಷಣ ತಜ್ಞರು, ಅವರ ಪೈಕಿ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಒಬ್ಬರು, ಇತರ

ಹಿಂದುಳಿದ ವರ್ಗಗಳಿಗೆ ಸೇರಿದ ಒಬ್ಬರು, ಮಹಿಳೆಯರನ್ನು ಪ್ರತಿನಿಧಿಸುವ ಒಬ್ಬರು, ಧಾರ್ಮಿಕ ಅಲ್ಪಸಂಖ್ಯಾತರನ್ನು ಪ್ರತಿನಿಧಿಸುವ ಒಬ್ಬರು ಮತ್ತು ಇತರರನ್ನು ಪ್ರತಿನಿಧಿಸುವ ಇಬ್ಬರು;

(xii) ಗ್ರಂಥಪಾಲರು;

(xiii) ವಿದ್ಯಾರ್ಥಿ ಕಲ್ಯಾಣದ ನಿರ್ದೇಶಕರು;

(xiv) ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಲಿಯ ನಿರ್ದೇಶಕರು;

(xv) ಕಾಲೇಜು ಅಭಿವೃದ್ಧಿ ಪರಿಷತ್ತಿನ ನಿರ್ದೇಶಕರು;

(xvi) ಶಾರೀರಿಕ ಶಿಕ್ಷಣದ ನಿರ್ದೇಶಕರು;

(xvii) ರಿಜಿಸ್ಟ್ರಾರ್ (ಮೌಲ್ಯಮಾಪನ);

(xviii) ರಿಜಿಸ್ಟ್ರಾರ್-ಸದಸ್ಯ ಕಾರ್ಯದರ್ಶಿ;

ಪರಂತು, ಸಂಯೋಜಿತ ಕಾಲೇಜಿನಲ್ಲಿ ಅಥವಾ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಸಾಮರ್ಥ್ಯದಲ್ಲಿ ನಿಯೋಜಿತನಾದ ಯಾವೊಬ್ಬ ವ್ಯಕ್ತಿಯು ನಾಮನಿರ್ದೇಶಿತನಾಗಲು ಅರ್ಹನಾಗತಕ್ಕದ್ದಲ್ಲ.

(2) ವಿದ್ಯಾವಿಷಯಕ ಪರಿಷತ್ತು, ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ನಾಲ್ಕು ಬಾರಿಯಾದರೂ ಸಭೆ ಸೇರತಕ್ಕದ್ದು. ಆದಾಗ್ಯೂ, ಎರಡು ನಿರಂತರ ಸಭೆಗಳ ನಡುವಣ ಅವಧಿಯು ಮೂರು ತಿಂಗಳುಗಳನ್ನು ಮೀರತಕ್ಕದ್ದಲ್ಲ.

**31. ವಿದ್ಯಾವಿಷಯಕ ಪರಿಷತ್ತಿನ ಅಧಿಕಾರಗಳು.-** (1) ವಿದ್ಯಾವಿಷಯಕ ಪರಿಷತ್ತು, ವಿಶ್ವವಿದ್ಯಾನಿಲಯದ ವಿದ್ಯಾವಿಷಯದ ನಿಕಾಯವಾಗಿರತಕ್ಕದ್ದು ಮತ್ತು ಈ ಅಧಿನಿಯಮದ, ಪರಿನಿಯಮಗಳ, ಆರ್ಡಿನೆನ್ಸ್‌ಗಳ, ವಿನಿಯಮಗಳ ಉಪಬಂಧಗಳಿಗೊಳಪಟ್ಟು, ವಿಶ್ವವಿದ್ಯಾನಿಲಯದ ಶಿಕ್ಷಣ, ವಿದ್ಯಾಭ್ಯಾಸ ಮತ್ತು ಪರೀಕ್ಷೆಗಳ ನಿಯಂತ್ರಣ ಹಾಗೂ ಸಾಮಾನ್ಯ ವಿನಿಯಮವನ್ನು ಹೊಂದಿರತಕ್ಕದ್ದು ಮತ್ತು ಅವುಗಳ ಗುಣಮಟ್ಟಗಳನ್ನು ಕಾಪಾಡುವ ಜವಾಬ್ದಾರಿ ಹೊಂದಿರತಕ್ಕದ್ದು.

(2) ಹಿಂದೆ ಹೇಳಿದವುಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಹಾಗೂ ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ವಿದ್ಯಾವಿಷಯಕ ಪರಿಷತ್ತು ಈ ಮುಂದಿನ ಅಧಿಕಾರಗಳನ್ನು ಚಲಾಯಿಸತಕ್ಕದ್ದು, ಎಂದರೆ:-

(i) ವಿದ್ಯಾವಿಷಯಕ ವಿಷಯಗಳಿಗೆ ಸಂಬಂಧಿಸಿದಂತೆ ಆರ್ಡಿನೆನ್ಸ್‌ಗಳನ್ನು ಹೊರಡಿಸಲು ಪ್ರಸ್ತಾವನೆಗಳನ್ನು ಮಾಡುವುದು;

(ii) ಆರ್ಡಿನೆನ್ಸ್‌ನಲ್ಲಿ ಒಳಗೊಂಡಿರದಷ್ಟರಮಟ್ಟಿಗೆ ಅಧ್ಯಯನ ಕ್ರಮಗಳಿಗೆ ಸಂಬಂಧಿಸಿದಂತೆ ವಿನಿಯಮಗಳನ್ನು ರಚಿಸುವುದು;

(iii) ಪರೀಕ್ಷೆಗಳ ಸ್ಕೀಂಗಳಿಗೆ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ಪರೀಕ್ಷೆಗಳು, ಪದವಿಗಳು, ಡಿಪ್ಲೊಮಾಗಳು, ಪ್ರಮಾಣ ಪತ್ರಗಳು ಅಥವಾ ಇತರ ವಿದ್ಯಾವಿಷಯಕ ಪ್ರಶಸ್ತಿಗಳಿಗೆ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡತಕ್ಕದ್ದೋ, ಅಂಥ ಷರತ್ತುಗಳಿಗೆ ಸಂಬಂಧಿಸಿದಂತೆ ವಿನಿಯಮಗಳನ್ನು ರಚಿಸುವುದು;

(iv) ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳ ಫಲಿತಾಂಶಗಳನ್ನು ಘೋಷಿಸುವುದಕ್ಕಾಗಿ ವಿನಿಯಮಗಳನ್ನು ರಚಿಸುವುದು;

(v) ಕಾಲೇಜುಗಳಲ್ಲಿ ಮತ್ತು ಮನ್ನಣೆ ಪಡೆದ ಸಂಸ್ಥೆಗಳಲ್ಲಿ, ಅಧ್ಯಯನ ಹಾಗೂ ಬೋಧನೆಯ ಸಮನ್ವಯತೆಗಾಗಿ ವ್ಯವಸ್ಥೆ ಮಾಡುವುದು;

(vi) ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆಯನ್ನು ವೃದ್ಧಿಪಡಿಸುವುದಕ್ಕಾಗಿ ಅಥವಾ ಇತರ ವಿಶೇಷ ಅಧ್ಯಯನಗಳನ್ನು ವೃದ್ಧಿಪಡಿಸುವುದಕ್ಕಾಗಿ ಸ್ಕೀಂಗಳನ್ನು ರೂಪಿಸುವುದು;

(vii) ವ್ಯಾಸಂಗ ವಿಭಾಗಗಳಿಗೆ ವಿಷಯಗಳನ್ನು ಹಂಚಿಕೆ ಮಾಡಲು ಮತ್ತು ವ್ಯಾಸಂಗ ವಿಭಾಗಗಳಿಗೆ ತನ್ನದೇ ಆದ ಸದಸ್ಯರುಗಳನ್ನು ನೇಮಿಸುವುದಕ್ಕೆ ಪ್ರಸ್ತಾವನೆಗಳನ್ನು ಮಾಡುವುದು;

(viii) ಪರೀಕ್ಷೆಗಳಿಗೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಸಂಬಂಧಪಟ್ಟಂತೆ ವಿನಾಯತಿಗಳ ನೀಡಿಕೆಗಾಗಿ ಮಾನದಂಡಗಳನ್ನು ನಿಗದಿಪಡಿಸುವುದು;

(ix) ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ಪ್ರಾಧ್ಯಾಪಕರುಗಳ, ರೀಡರುಗಳ, ಉಪನ್ಯಾಸಕರ ಮತ್ತು ಇತರ ಅಧ್ಯಾಪಕರ ಹುದ್ದೆಗಳನ್ನು ಸ್ಥಾಪನೆ ಮಾಡುವುದಕ್ಕಾಗಿ ಮತ್ತು ಅಂಥ ಹುದ್ದೆಗಳ ಕರ್ತವ್ಯಗಳನ್ನು ನಿಯಮಿಸುವುದಕ್ಕಾಗಿ ಪ್ರಸ್ತಾವನೆಗಳನ್ನು ಮಾಡುವುದು;

(x) ಫೆಲೋಷಿಪ್‌ಗಳು, ಸಂಚಾರಿ ಫೆಲೋಷಿಪ್‌ಗಳು, ವಿದ್ಯಾರ್ಥಿ ವೇತನ, ಶಿಷ್ಯ ವೇತನ, ಪ್ರವೇತನಗಳನ್ನು ಸ್ಥಾಪಿಸಿಸುವುದಕ್ಕಾಗಿ ಮತ್ತು ಅವುಗಳನ್ನು ನೀಡುವುದಕ್ಕಾಗಿ ಪ್ರಸ್ತಾವನೆಗಳನ್ನು ಮಾಡುವುದು;

(xi) ಪರೀಕ್ಷೆಗಳ ಸಮಾನತೆಯನ್ನು ನಿಯಮಿಸಲು ವಿನಿಯಮಗಳನ್ನು ರಚಿಸುವುದು;

(xii) ಪದವಿಗಳು, ಡಿಪ್ಲೊಮಾಗಳು ಮತ್ತು ಇತರ ವಿದ್ಯಾವಿಷಯಕ ಪ್ರಶಸ್ತಿಗಳಿಗೆ ಅರ್ಹತೆ ಪಡೆಯುವುದಕ್ಕೆ ಸಂಬಂಧಿಸಿದಂತೆ; ವಿಶ್ವವಿದ್ಯಾನಿಲಯದಲ್ಲಿ

ಅಥವಾ ಸಂಯೋಜನೆಗೊಂಡ ಕಾಲೇಜುಗಳಲ್ಲಿ ನಡೆಯುವ ಅನುಮೋದಿತ ಅಧ್ಯಯನ ಕ್ರಮಗಳಿಂದ ವಿನಾಯತಿಗಳನ್ನು ನೀಡುವುದಕ್ಕಾಗಿ ವಿನಿಯಮಗಳನ್ನು ರಚಿಸುವುದು;

(xiii) ಸಂಶೋಧನೆ ಮತ್ತು ಕಲಿಕೆಯ ಪ್ರಗತಿಗಾಗಿ ಮತ್ತು ಪ್ರಸಾರಕ್ಕಾಗಿ ಸೂಕ್ತವೆಂದು ಭಾವಿಸಬಹುದಾದಂಥ ಕಲಿಕೆ ಮತ್ತು ಅಧ್ಯಯನ ಕ್ರಮಗಳ ಅಂಥ ವಿಭಾಗಗಳಲ್ಲಿ ಶಿಕ್ಷಣ, ಬೋಧನೆ ಮತ್ತು ತರಬೇತಿಗಾಗಿ ಅವಕಾಶ ಕಲ್ಪಿಸುವುದು;

(xiv) ವಿಶೇಷ ಅಧ್ಯಯನಗಳನ್ನು ಕೈಗೊಳ್ಳುವುದಕ್ಕೆ, ಸಂಯೋಜನೆಗೊಂಡ ಕಾಲೇಜುಗಳು ಮತ್ತು ಮನ್ನಣೆ ಪಡೆದ ಸಂಸ್ಥೆಗಳನ್ನು ಸಮರ್ಥಗೊಳಿಸುವಂತೆ ಮಾಡಲು ಅಂಥ ಉಪಬಂಧಗಳನ್ನು ರಚಿಸುವುದು;

(xv) ವಾರ್ಷಿಕ ಹಣಕಾಸು ಅಂದಾಜುಗಳನ್ನು ಪರಿಗಣಿಸುವುದು;

(xvi) ಯಾವುದೇ ವಿನಿಯಮವನ್ನು ತಿದ್ದುಪಡಿ ಮಾಡುವುದು ಅಥವಾ ನಿರಸನಗೊಳಿಸುವುದು;

(xvii) ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳಿಗೆ ಸದಸ್ಯರುಗಳನ್ನು ನಾಮನಿರ್ದೇಶಿಸುವುದು;

(xviii) ಈ ಅಧಿನಿಯಮ, ಅಥವಾ ಅದರ ಅಡಿಯಲ್ಲಿ ರಚಿಸಿದ ಪರಿನಿಯಮಗಳು, ಆರ್ಡಿನೆನ್ಸ್‌ಗಳು ಅಥವಾ ವಿನಿಯಮಗಳಿಂದ ಅದಕ್ಕೆ ಪ್ರದಾನ ಮಾಡಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅದರ ಮೇಲೆ ವಿಧಿಸಬಹುದಾದಂಥ ಇತರ ಕರ್ತವ್ಯಗಳನ್ನು ನೆರವೇರಿಸುವುದು;

(xix) ಸಂಶೋಧನಾ ಮತ್ತು ವಿಶೇಷ ಅಧ್ಯಯನಗಳ ವಿಭಾಗಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು; ಮತ್ತು

(xx) ಸಾಮಾನ್ಯವಾಗಿ ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆ ವಿಶ್ವವಿದ್ಯಾನಿಲಯಕ್ಕೆ ಸಲಹೆ ನೀಡುವುದು.

**32. ಹಣಕಾಸು ಸಮಿತಿ:-** (1) ಈ ಮುಂದಿನ ಸದಸ್ಯರನ್ನು ಒಳಗೊಂಡ ಹಣಕಾಸು ಸಮಿತಿಯೊಂದು ಇರತಕ್ಕದ್ದು, ಎಂದರೆ:-

(i) ಕುಲಪತಿ;

(ii) ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ; ಅಥವಾ ಉಪಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಅವನ ನಾಮನಿರ್ದೇಶಿತ;

(iii) ಉನ್ನತ ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಉಪಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಅವನ ನಾಮನಿರ್ದೇಶಿತ;

(iv) ಯೋಜನಾ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಉಪಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಅವನ ನಾಮನಿರ್ದೇಶಿತ;

(v) ಸಿಂಡಿಕೇಟ್‌ನಿಂದ ನಾಮನಿರ್ದೇಶಿತನಾದ ಒಬ್ಬ ಸದಸ್ಯ;

(vi) ವಿದ್ಯಾವಿಷಯಕ ಪರಿಷತ್ತಿನಿಂದ ನಾಮನಿರ್ದೇಶಿತನಾದ ಒಬ್ಬ ಸದಸ್ಯ;

(vii) ರಿಜಿಸ್ಟ್ರಾರ್;

(viii) ರಿಜಿಸ್ಟ್ರಾರ್ (ಮೌಲ್ಯಮಾಪನ);

(ix) ಹಣಕಾಸು ಅಧಿಕಾರಿ, ಸದಸ್ಯ - ಕಾರ್ಯದರ್ಶಿ;

(2) ಹಣಕಾಸು ಸಮಿತಿಯು ಕನಿಷ್ಠ ಮೂರು ತಿಂಗಳಿಗೆ ಒಂದು ಬಾರಿಯಾದರೂ ಸಭೆ ಸೇರತಕ್ಕದ್ದು.

(3) ಹಣಕಾಸು ಸಮಿತಿಯು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:-

(i) ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳ ಸಾಮಾನ್ಯ ಪರಿಶೀಲನೆಗಳನ್ನು ನಡೆಸುವುದು, ವಾರ್ಷಿಕ ಲೆಕ್ಕ ಪರಿಶೋಧನೆಯ ವರದಿಗಳನ್ನು ಪುನರಾವಲೋಕಿಸುವುದು ಮತ್ತು ಆದರ ಮೇಲೆ ತನ್ನ ಶಿಫಾರಸುಗಳನ್ನು ಮಾಡುವುದು;

(ii) ವಾರ್ಷಿಕ ಬಜೆಟ್ ಅಂದಾಜುಗಳನ್ನು ಪರಿಶೀಲಿಸುವುದು ಮತ್ತು ವಿದ್ಯಾವಿಷಯಕ ಪರಿಷತ್ತು ಮತ್ತು ಸಿಂಡಿಕೇಟ್‌ಗೆ ಅದರ ಶಿಫಾರಸ್ಸುಗಳನ್ನು ಮಾಡುವುದು;

(iii) ಬಜೆಟ್ಟಿನಲ್ಲಿ ಒದಗಿಸಿಲ್ಲದ ವೆಚ್ಚವನ್ನು ಒಳಗೊಂಡ ಅಥವಾ ವಿಶ್ವವಿದ್ಯಾನಿಲಯದಲ್ಲಿ ಹುದ್ದೆಗಳ ಸೃಜನೆ, ಮೇಲ್ದರ್ಜೆಗೇರಿಸುವುದು ಮತ್ತು ರದ್ದಿಯಾತಿಯೂ ಒಳಗೊಂಡಂತೆ ಬಜೆಟ್ಟಿನಲ್ಲಿ ಒದಗಿಸಿದ ಮೊಬಲಗಿಗಿಂತ ಹೆಚ್ಚುವರಿ ವೆಚ್ಚವನ್ನು ಒಳಗೊಂಡ ವಿಶ್ವವಿದ್ಯಾನಿಲಯದ ಎಲ್ಲ ಪ್ರಸ್ತಾವಗಳನ್ನು ಪರಿಶೀಲಿಸುವುದು;

(iv) ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳು.

(4) (3)ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಕುಲಪತಿಯು, ತುರ್ತು ಸಂದರ್ಭಗಳಲ್ಲಿ ಮತ್ತು ಲಿಖಿತದಲ್ಲಿ ಕಾರಣಗಳನ್ನು ದಾಖಲ್ಮಾಡಿ, ಹಣಕಾಸು ಸಮಿತಿಯ ಒಪ್ಪಿಗೆ ಇಲ್ಲದೆ, ಬಜೆಟ್ಟಿನಲ್ಲಿ ಹಣ ಒದಗಿಸಿಲ್ಲದ ಅಥವಾ ಬಜೆಟ್ಟಿನಲ್ಲಿ ಒದಗಿಸಿದ ಹಣಕ್ಕಿಂತ ಹೆಚ್ಚುವರಿಯಾದ ಯಾವುದೇ ಒಂದು ಸಂದರ್ಭದಲ್ಲಿ, ಐವತ್ತು ಸಾವಿರ ರೂಪಾಯಿಗಳಿಗೆ ಮೀರದ ಯಾವುದೇ ವೆಚ್ಚವನ್ನು ವಹಿಸಬಹುದು:

ಪರಂತು, ಅಂಥ ವೆಚ್ಚವನ್ನು ಸ್ಥಿರೀಕರಣಕ್ಕಾಗಿ ಹಣಕಾಸು ಸಮಿತಿಯ, ಮುಂದಿನ ನಿಕಟ ತರುವಾಯದ ತ್ರೈಮಾಸಿಕ ಸಭೆಯಲ್ಲಿ ಮಂಡಿಸತಕ್ಕದ್ದು:

ಮತ್ತು ಪರಂತು, ಕುಲಪತಿಯುವರ ಮೂಲಕ ವೆಚ್ಚದ ಭರಿಸುವಿಕೆಯು ತೃಪ್ತಿಕರವಾಗಿಲ್ಲದಿದ್ದಲ್ಲಿ, ಹಣಕಾಸು ಸಮಿತಿಯು ಅದನ್ನು ಕುಲಾಧಿಪತಿಯುವರಿಗೆ ಉಲ್ಲೇಖಿಸಬಹುದು, ಈ ವಿಷಯದಲ್ಲಿ ಅವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

(5) ಹಣಕಾಸು ಸಮಿತಿಯು ಪರಿಗಣಿಸಿದ, ಯಾವುದೇ ವಿಷಯದ ಸಂದರ್ಭದಲ್ಲಿ ಮತಗಳು ಸಮಾನವಾಗಿ ವಿಭಾಗವಾಗಿರುವಲ್ಲಿ ಕುಲಪತಿಯವರು ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

**33. ಅಧ್ಯಯನ ಮಂಡಲಿ:–** (1) ಆರ್ಡಿನೆನ್ಸ್‍ಗಳ ಮೂಲಕ ನಿಯಮಿಸ ಬಹುದಾದಂತೆ ಪ್ರತಿಯೊಂದು ವಿಷಯಕ್ಕೆ ಅಥವಾ ವಿಷಯಗಳ ಸಮೂಹಕ್ಕೆ ಒಂದು ಅಧ್ಯಯನ ಮಂಡಲಿ ಇರತಕ್ಕದ್ದು:

ಪರಂತು, ಸಿಂಡಿಕೇಟ್, ಪದವಿಪೂರ್ವ ಅಧ್ಯಯನಗಳಿಗಾಗಿ ಮತ್ತು ಸ್ನಾತಕೋತ್ತರ ಅಧ್ಯಯನಗಳಿಗಾಗಿ ಪ್ರತ್ಯೇಕ ಅಧ್ಯಯನ ಮಂಡಳಿಯನ್ನು ರಚಿಸಬಹುದು.

(2) (1)ನೇ ಉಪ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಅಧ್ಯಯನ ಮಂಡಲಿಯ ರಚನೆ, ಪ್ರಕಾರ್ಯಗಳು ಮತ್ತು ಅಧಿಕಾರಗಳು ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

**34. ವ್ಯಾಸಂಗ ವಿಭಾಗಗಳು:–** (1) ವಿಶ್ವವಿದ್ಯಾನಿಲಯವು ಕಲೆ, ವಾಣಿಜ್ಯ, ಶಿಕ್ಷಣ, ಇಂಜಿನಿಯರಿಂಗ್, ಕಾನೂನು, ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಕಾಲಕಾಲಕ್ಕೆ ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥ ಇತರ ವ್ಯಾಸಂಗ ವಿಭಾಗಗಳನ್ನು ಹೊಂದಿರತಕ್ಕದ್ದು.

(2) ಪ್ರತಿಯೊಂದು ವ್ಯಾಸಂಗ ವಿಭಾಗವು ಆರ್ಡಿನೆನ್ಸ್ ಮೂಲಕ ಅದಕ್ಕೆ ವಹಿಸಿಕೊಡಬಹುದಾದ ಅಂಥ ಸಂಖ್ಯೆಯ ಅಧ್ಯಯನ ವಿಭಾಗಳನ್ನು ಒಳಗೊಂಡಿರತಕ್ಕದ್ದು.

(3) ಪ್ರತಿಯೊಂದು ವ್ಯಾಸಂಗ ವಿಭಾಗದಲ್ಲಿಯ ಅಧ್ಯಯನ ವಿಭಾಗವು, ಈ ಮುಂದಿನ ಸದಸ್ಯರನ್ನೂ ಒಳಗೊಂಡಿರತಕ್ಕದ್ದು, ಎಂದರೆ:-

(i) ವ್ಯಾಸಂಗ ವಿಭಾಗದ ಡೀನ್;

(ii) ರಿಜಿಸ್ಟ್ರಾರ್ (ಮೌಲ್ಯಮಾಪನ);

(iii) ವಿಭಾಗದ ಅಧ್ಯಾಪಕರು;

(iv) ವಿಭಾಗಕ್ಕೆ ಸಂಬಂಧಪಟ್ಟ ಗೌರವ ಪ್ರಾಧ್ಯಾಪಕರು, ಯಾರಾದರೂ ಇದ್ದರೆ;

(v) ವಿಭಾಗದಲ್ಲಿ ಸಂಶೋಧನೆಗಳನ್ನು ನಡೆಸಲು ನೇಮಿಸಲಾದ ವ್ಯಕ್ತಿಗಳು;

(vi) ಆರ್ಡಿನೆನ್ಸಿನ ಮೂಲಕ ನಿಯಮಿಸಬಹುದಾದಂತೆ ವಿಭಾಗದ ಸದಸ್ಯರಾಗಿರುವ ಅಂಥ ಇತರ ವ್ಯಕ್ತಿಗಳು;

(4) ಯಾವುದೇ ಅಧ್ಯಯನ ವಿಭಾಗವನ್ನು ಪರಿನಿಯಮಗಳ ಮೂಲಕ ಸ್ಥಾಪಿಸಬಹುದು ಅಥವಾ ರದ್ದುಗೊಳಿಸಬಹುದು.

(5) ಪ್ರತಿಯೊಂದು ಅಧ್ಯಯನ ವಿಭಾಗವು ಒಬ್ಬ ಅಧ್ಯಕ್ಷನನ್ನು ಹೊಂದಿರತಕ್ಕದ್ದು ಹಾಗೂ ಅವನು ವಿಭಾಗೀಯ ಪರಿಷತ್ತಿನ ಅಧ್ಯಕ್ಷನೂ ಕೂಡ ಆಗಿರತಕ್ಕದ್ದು.

(6) ಪ್ರತಿಯೊಂದು ಅಧ್ಯಯನ ವಿಭಾಗವು ಈ ಮುಂದಿನವರನ್ನು ಒಳಗೊಂಡ ಒಂದು ವಿಭಾಗೀಯ ಪರಿಷತ್ತು ಹೊಂದಿರತಕ್ಕದ್ದು,-

(ಎ) ಎಲ್ಲಾ ಪ್ರಾಧ್ಯಾಪಕರು ಮತ್ತು ರೀಡರುಗಳು;

(ಬಿ) ರಿಜಿಸ್ಟ್ರಾರ್ (ಮೌಲ್ಯಮಾಪನ);

(ಸಿ) ವಿಭಾಗದಲ್ಲಿನ ಇಬ್ಬರು ಅತ್ಯಂತ ಹಿರಿಯ ಉಪನ್ಯಾಸಕರು;

(7) ಅಧ್ಯಕ್ಷನು, ಸಿಂಡೀಕೇಟಿನ ಮೂಲಕ ಎರಡು ವರ್ಷಗಳ ಅವಧಿಗಾಗಿ ಅಥವಾ ಕಾಲಕಾಲಕ್ಕೆ ಸಿಂಡಿಕೇಟು ನಿರ್ಧರಿಸಬಹುದಾದಂತೆ ಅಂಥ ಇತರ ಅವಧಿಗಾಗಿ ನೇಮಕನಾಗತಕ್ಕದ್ದು;

(8) ಅಧ್ಯಕ್ಷನು, ವಿಭಾಗದ ಆಡಳಿತದ ಪ್ರಭಾರವನ್ನು ವಹಿಸತಕ್ಕದ್ದು. ವಿಭಾಗದ ಪರಿಷತ್ತಿನ ಮತ್ತು ಅಧ್ಯಕ್ಷನ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳು, ಪರಿನಿಯಮಗಳ ಮೂಲಕ ನಿಯಮಿಸಿದಂತೆ ಇರತಕ್ಕದ್ದು.

(9) ಪ್ರತಿಯೊಂದು ವ್ಯಾಸಂಗ ವಿಭಾಗವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(i) ವ್ಯಾಸಂಗ ವಿಭಾಗದ ಡೀನ್;

(ii) ರಿಜಿಸ್ಟ್ರಾರ್ (ಮೌಲ್ಯಮಾಪನ);

(iii) ವ್ಯಾಸಂಗ ವಿಭಾಗದಲ್ಲಿನ ಅಧ್ಯಯನ ವಿಭಾಗಗಳ ಅಧ್ಯಕ್ಷರು;

(iv) ಎಲ್ಲಾ ಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರ ಗೈರು ಹಾಜರಿಯಲ್ಲಿ ಪ್ರತಿಯೊಂದು ವ್ಯಾಸಂಗ ವಿಭಾಗದಿಂದ, ವ್ಯಾಸಂಗ ವಿಭಾಗದಲ್ಲಿನ ರೀಡರುಗಳು;

(v) ಕುಲಪತಿಯು ಎರಡು ವರ್ಷಗಳ ಅವಧಿಗಾಗಿ ಸೇವಾ ಜ್ಯೇಷ್ಠತೆಗೆ ಅನುಸಾರವಾಗಿ ಸರದಿಯ ಮೇಲೆ ಪ್ರತಿಯೊಂದು ಅಧ್ಯಯನ ವಿಭಾಗದಿಂದ ನಾಮನಿರ್ದೇಶನ ಮಾಡಿದ ಒಬ್ಬ ರೀಡರು ಮತ್ತು ಒಬ್ಬ ಉಪನ್ಯಾಸಕ;

(vi) ಎರಡು ವರ್ಷಗಳ ಅವಧಿಗಾಗಿ, ಕುಲಪತಿಯು ನಾಮನಿರ್ದೇಶನ ಮಾಡಿದ ರಾಜ್ಯದಲ್ಲಿನ ಇತರ ವಿಶ್ವವಿದ್ಯಾನಿಲಯಗಳ ಕಾಲೇಜಿನ ಐವರು ಅಧ್ಯಾಪಕರು ಮತ್ತು ಇಬ್ಬರು ತಜ್ಞರು;

(vii) ಪರಿನಿಯಮಗಳ ಮೂಲಕ ಗೊತ್ತುಪಡಿಸಬಹುದಾದಂತೆ ಅಂಥ ಇತರ ವ್ಯಕ್ತಿಗಳು;

(10) ವ್ಯಾಸಂಗ ವಿಭಾಗಗಳು, ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂತಹ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

**35. ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಲಿ:-** (1) ಶೈಕ್ಷಣಿಕ ವ್ಯಾಸಂಗ ಕ್ರಮಗಳ, ಸಂಶೋಧನಾ ಕಾರ್ಯಕ್ರಮಗಳ, ಆಂತರಿಕ ಶಿಸ್ತುಕಾರ್ಯ ಚಟುವಟಿಕೆಗಳ, ತರಬೇತಿ, ವಿಸ್ತರಣೆ ಮತ್ತು ಸಂಶೋಧನೆಗಾಗಿ ಬಾಹ್ಯ ಏಜೆನ್ಸಿಗಳೊಂದಿಗೆ ಸಂವಾದ ಚಟುವಟಿಕೆ ನಡೆಸುವುದಕ್ಕಾಗಿ ಮತ್ತು ಅದರಿಂದ ರೂಪಿಸಲಾದ ಕಾರ್ಯಕ್ರಮಗಳು ಮತ್ತು ಕಾರ್ಯಚಟುವಟಿಕೆಗಳನ್ನು ಕಾಲಕಾಲಕ್ಕೆ ಜಾರಿಗೊಳಿಸುವುದರ ಮೇಲ್ವಿಚಾರಣೆ ಮಾಡುವುದಕ್ಕಾಗಿ ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ ಇರತಕ್ಕದ್ದು.

(2) ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಲಿಯು ಈ ಮುಂದಿನ ಸದಸ್ಯರನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ಕುಲಪತಿಯವರು ಅಧ್ಯಕ್ಷರಾಗಿರತಕ್ಕದ್ದು;

(ಬಿ) ರಿಜಿಸ್ಟ್ರಾರ್;

(ಸಿ) ರಿಜಿಸ್ಟ್ರಾರ್ (ಮೌಲ್ಯಮಾಪನ);

(ಡಿ) ಸರದಿಯ ಮೇಲೆ, ಒಂದು ವರ್ಷದ ಅವಧಿಗೆ ಕುಲಪತಿಯವರ ಶಿಫಾರಸ್ಸಿನಂತೆ ವ್ಯಾಸಂಗ ವಿಭಾಗದ ಇಬ್ಬರು ಅತ್ಯಂತ ಹಿರಿಯ ಡೀನ್‌ಗಳು;

(ಇ) ಎರಡು ವರ್ಷಗಳ ಅವಧಿಗಾಗಿ, ಕುಲಪತಿಯವರಿಂದ ನಾಮ ನಿರ್ದೇಶಿತರಾದ ಇಬ್ಬರು ಅತ್ಯಂತ ಹಿರಿಯ ಪ್ರಾಧ್ಯಾಪಕರು, ಅವರಲ್ಲಿ ಒಬ್ಬರು ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಇನ್ನೊಬ್ಬರು ಮಾನವಿಕ ಮತ್ತು ಸಾಮಾಜಿಕ ವಿಜ್ಞಾನಗಳ ಪ್ರಾಧ್ಯಾಪಕರಾಗಿರತಕ್ಕದ್ದು;

(ಎಫ್) ಎರಡು ವರ್ಷಗಳ ಅವಧಿಗಾಗಿ ರಾಜ್ಯಸರ್ಕಾರದಿಂದ ನಾಮನಿರ್ದೇಶಿತರಾದ ಒಬ್ಬರು ಶಿಕ್ಷಣ ತಜ್ಞರು, ಅವರು ಬೋಧನೆ ಮತ್ತು ಸಂಶೋಧನೆಯಲ್ಲಿ ಮತ್ತು ಶೈಕ್ಷಣಿಕ ಆಡಳಿತದಲ್ಲಿ ಅಪಾರ ಅನುಭವ ಹೊಂದಿದ್ದವರಾಗಿರತಕ್ಕದ್ದು;

(ಜಿ) ರಾಜ್ಯಸರ್ಕಾರದಿಂದ ನಾಮನಿರ್ದೇಶಿತನಾದ ಯೋಜನಾ ಇಲಾಖೆಯ ಸರ್ಕಾರದ ಉಪಕಾರ್ಯದರ್ಶಿಯವರ ಅಥವಾ ಯೋಜನಾ ಜಂಟಿ ನಿರ್ದೇಶಕರ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ರಾಜ್ಯಸರ್ಕಾರದ ಒಬ್ಬ ಅಧಿಕಾರಿ;

(ಹೆಚ್) ಎರಡು ವರ್ಷಗಳ ಅವಧಿಗಾಗಿ ರಾಜ್ಯ ಸರ್ಕಾರದಿಂದ ನಾಮ ನಿರ್ದೇಶಿತರಾದ, ಸಾಮಾನ್ಯವಾಗಿ ವಿಶ್ವವಿದ್ಯಾನಿಲಯದ ಪ್ರದೇಶದೊಳಗೆ ವಾಸಿಸುತ್ತಿರುವ, ಕೈಗಾರಿಕೆ ಮತ್ತು ವ್ಯಾಪಾರ ಕ್ಷೇತ್ರದಿಂದ, ಇಬ್ಬರು ಪ್ರತಿನಿಧಿಗಳು.

(3) ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಲಿಯು, ಕನಿಷ್ಠ ಪಕ್ಷ ಮೂರು ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕದ್ದು. ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಲಿಯ ಪ್ರತಿಯೊಂದು ಠರಾವನ್ನು ಪರಿಗಣನೆಗಾಗಿ ಮತ್ತು ಅವುಗಳ ಬಗ್ಗೆ ಕ್ರಮಕೈಗೊಳ್ಳುವುದಕ್ಕಾಗಿ ವಿದ್ಯಾವಿಷಯಕ ಪರಿಷತ್ತು ಮತ್ತು ಸಿಂಡಿಕೇಟಿನ ಮುಂದೆ ಇಡತಕ್ಕದ್ದು.

**36. ಪರೀಕ್ಷಕರ ನೇಮಕಾತಿ ಮಂಡಲಿ.-** (1) ಪ್ರತಿಯೊಂದು ವ್ಯಾಸಂಗ ವಿಭಾಗಕ್ಕೆ, ಪ್ರತಿವರ್ಷಕ್ಕಾಗಿ ಪರೀಕ್ಷಕರ ಪಟ್ಟಿಯನ್ನು ತಯಾರಿಸುವ ಉದ್ದೇಶಕ್ಕಾಗಿ, ಪರೀಕ್ಷಕರ ನೇಮಕಾತಿ ಮಂಡಲಿಯನ್ನು ರಚಿಸತಕ್ಕದ್ದು.

(2) ಅಂಥ ಪ್ರತಿಯೊಂದು ಪರೀಕ್ಷಕರ ನೇಮಕಾತಿ ಮಂಡಲಿಯು, ಈ ಮುಂದಿನ ಸದಸ್ಯರನ್ನು ಹೊಂದಿರತಕ್ಕದ್ದು, ಎಂದರೆ:-

(i) ಕುಲಪತಿಯವರು - ಅಧ್ಯಕ್ಷರಾಗಿರತಕ್ಕದ್ದು.

(ii) ರಿಜಿಸ್ಟ್ರಾರ್ (ಮೌಲ್ಯಮಾಪನ);

(iii) ಸಂಬಂಧಪಟ್ಟ ವ್ಯಾಸಂಗ ವಿಭಾಗದ ಡೀನ್;

(iv) ನಿರ್ದಿಷ್ಟ ವಿಷಯದಲ್ಲಿನ ಅಧ್ಯಯನ ಮಂಡಲಿಯ ಅಧ್ಯಕ್ಷ;

(v) ಕುಲಪತಿಯವರು ನಾಮನಿರ್ದೇಶನ ಮಾಡಿದ, ವ್ಯಾಸಂಗ ವಿಭಾಗದಲ್ಲಿನ ಸಂಬಂಧಪಟ್ಟ ಅಧ್ಯಯನ ವಿಭಾಗದಲ್ಲಿರುವ ಪದವಿಪೂರ್ವ ವಿಷಯಗಳನ್ನು ಬೋಧಿಸುವ ಇಬ್ಬರು ಅಧ್ಯಾಪಕರು;

(vi) ಕುಲಪತಿಯವರು ನಾಮನಿರ್ದೇಶನದ ಮಾಡಿದ ವ್ಯಾಸಂಗ ವಿಭಾಗದಲ್ಲಿನ ಸಂಬಂಧಪಟ್ಟ ಅಧ್ಯಯನ ವಿಭಾಗದಲ್ಲಿರುವ ಸ್ನಾತಕೋತ್ತರ ಪದವಿಯ ವಿಷಯಗಳನ್ನು ಬೋಧಿಸುವ ಇಬ್ಬರು ಅಧ್ಯಾಪಕರು.

(3) ಪರೀಕ್ಷಕರ ನೇಮಕಾತಿ ಮಂಡಲಿಯು, ಅಧ್ಯಯನ ಮಂಡಲಿಯು ತಯಾರಿಸಬೇಕಾದ ಪಟ್ಟಿಗಳಲ್ಲಿ ಒಳಗೊಂಡ ವ್ಯಕ್ತಿಗಳ ಪೈಕಿಯಿಂದ ಪರೀಕ್ಷಕರ ಪಟ್ಟಿಗಳನ್ನು ಸಿದ್ದಪಡಿಸತಕ್ಕದ್ದು ಮತ್ತು ಅದನ್ನು ಸಿಂಡಿಕೇಟಿನ ಅನುಮೋದನೆಗೆ ಒಪ್ಪಿಸತಕ್ಕದ್ದು.

(4) ಯಾವ ಕಾರಣದ ಮೇಲೆ ಬದಲಾವಣೆಯನ್ನು ಸೂಚಿಸಲಾಗಿದೆಯೋ ಅಥವಾ ಮಾಡಲಾಗಿದೆಯೋ, ಆ ನಿರ್ದಿಷ್ಟ ಕಾರಣವನ್ನು ನಿರೂಪಿಸುವ ನಿರ್ಣಯವನ್ನು ಅಂಗೀಕರಿಸಿದ ಹೊರತು, ಸಿಂಡಿಕೇಟು ಆ ಪಟ್ಟಿಯಲ್ಲಿ ಯಾವುದೇ ಅಂಥ ಬದಲಾವಣೆಯನ್ನು ಸೂಚಿಸತಕ್ಕದ್ದಲ್ಲ ಅಥವಾ ಮಾಡತಕ್ಕದ್ದಲ್ಲ.

(5) ಸಿಂಡಿಕೇಟಿನಿಂದ ನೇಮಕಗೊಂಡ ಯಾವೊಬ್ಬ ಪರೀಕ್ಷಕನು, ಯಾವುದೇ ಕಾರಣಕ್ಕಾಗಿ, ಪರೀಕ್ಷಕನ ಕೆಲಸವನ್ನು ಅಂಗೀಕರಿಸಲು ಅಸಮರ್ಥನಾದಲ್ಲಿ ಮತ್ತು ಸಿಂಡಿಕೇಟು ಸಕಾಲದಲ್ಲಿ ಹೊಸ ನೇಮಕಾತಿಯನ್ನು ಮಾಡಲಾಗದಿದ್ದಲ್ಲಿ, ಕುಲಪತಿಯು ಬೇರೊಬ್ಬ ಪರೀಕ್ಷಕನನ್ನು ನೇಮಕ ಮಾಡತಕ್ಕದ್ದು ಮತ್ತು ಅಂತಹ ನೇಮಕಾತಿಯನ್ನು ಸಿಂಡಿಕೇಟಿಗೆ ವರದಿ ಮಾಡತಕ್ಕದ್ದು.

(6) ಹಾಜರಿದ್ದ ಮೂರನೇ ಎರಡರಷ್ಟು ಸದಸ್ಯರು ಸಿಂಡಿಕೇಟಿನ ನಿರ್ಣಯವನ್ನು ಅಂಗೀಕರಿಸಿದ ಹೊರತು; ಮಂಡಲಿಯ ಯಾವೊಬ್ಬ ಸದಸ್ಯನನ್ನು ಪರೀಕ್ಷಕನನ್ನಾಗಿ ನೇಮಕ ಮಾಡತಕ್ಕದ್ದಲ್ಲ.

**37. ಇತರೆ ಮಂಡಲಿಗಳು.** (1) ವಿಶ್ವವಿದ್ಯಾನಿಲಯವು, ಕಾಲಕಾಲಕ್ಕೆ ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಅಂಥ ಇತರ ಮಂಡಲಿಗಳನ್ನು ಸ್ಥಾಪಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಸ್ಥಾಪಿಸಲಾದ ಮಂಡಲಿಗಳ ರಚನೆ, ಪ್ರಕಾರ್ಯಗಳು, ಅಧಿಕಾರಗಳು ಮತ್ತು ಕರ್ತವ್ಯಗಳು ಪರಿನಿಯಮಗಳ ಮೂಲಕ ನಿಯಮಿಸಲಾದಂತೆ ಇರತಕ್ಕದ್ದು.

**38. ವಿದ್ಯಾವಿಷಯಕ ಪರಿಷತ್ತು ಮತ್ತು ಸಿಂಡಿಕೇಟಿನ ಸದಸ್ಯರ ಪದಾವಧಿ.-** (1) ಅನ್ಯಥಾ ಉಪಬಂಧಿಸಿದ್ದ ಹೊರತು, ವಿದ್ಯಾವಿಷಯಕ ಪರಿಷತ್ತಿನ ಮತ್ತು ಸಿಂಡಿಕೇಟಿನ ಪದನಿಮಿತ್ತ ಸದಸ್ಯರನ್ನು ಹೊರತು ಪಡಿಸಿ, ಉಳಿದ ಸದಸ್ಯರ ಪದಾವಧಿಯು, ಮೂರು ವರ್ಷಗಳು ಅಥವಾ ಪುನಾರಚನೆ ಇವುಗಳಲ್ಲಿ ಯಾವುದು ಮೊದಲೋ ಅದು ಆಗಿರತಕ್ಕದ್ದು.

(2) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ವಿದ್ಯಾವಿಷಯಕ ಪರಿಷತ್ತು ಮತ್ತು ಸಿಂಡಿಕೇಟು ಮೂರು ವರ್ಷಕ್ಕೊಮ್ಮೆ ಏಕಕಾಲದಲ್ಲಿ ಪುನಾರಚನೆಯಾಗತಕ್ಕದ್ದು.

**39. ಪ್ರಾಧಿಕಾರಗಳ ಸದಸ್ಯತ್ವ ಹೊಂದಲು ನಿರ್ಬಂಧ:** (1) ಈ ಅಧಿನಿಯಮದ ಅಡಿಯಲ್ಲಿ, ಯಾವುದೇ ಪ್ರಾಧಿಕಾರಕ್ಕೆ ನಾಮನಿರ್ದೇಶಿತನಾದ ಯಾವೊಬ್ಬ ಸದಸ್ಯನು, ಸಂಬಂಧಪಟ್ಟ ನಾಮನಿರ್ದೇಶನ ಪ್ರಾಧಿಕಾರದ ಇಷ್ಟಪರ್ಯಂತ ಪದ ಧಾರಣಮಾಡತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಪ್ರಾಧಿಕಾರಕ್ಕೆ ನಾಮನಿರ್ದೇಶಿತನಾದ ಯಾವೊಬ್ಬ ವ್ಯಕ್ತಿಯು, ಎರಡನೇ ಅವಧಿಗಾಗಿ ನಾಮನಿರ್ದೇಶಿತನಾಗಲು ಅರ್ಹನಾಗಿರತಕ್ಕದ್ದಲ್ಲ.

(3) ಯಾವುದೇ ಪ್ರಾಧಿಕಾರಕ್ಕೆ ಚುನಾಯಿತನಾದ ಅಥವಾ ನಾಮನಿರ್ದೇಶನಗೊಂಡ ಯಾವೊಬ್ಬ ವ್ಯಕ್ತಿಯನ್ನು, ಅವನ ದುರ್ವರ್ತನೆ, ದುರ್ನಡತೆಯ ಆಧಾರದ ಮೇಲೆ ಅಥವಾ ಅನ್ಯಥಾ ಆ ಬಗ್ಗೆ ವಿಚಾರಣೆ ನಡೆಸಿದ ತರುವಾಯ, ಕುಲಾಧಿಪತಿಯು, ಯಾವುದೇ ಸಮಯದಲ್ಲಿ ಅಂಥ ಸದಸ್ಯತ್ವದಿಂದ ಅವನನ್ನು ತೆಗೆದು ಹಾಕತಕ್ಕದು:

ಪರಂತು, ವಿದ್ಯಾವಿಷಯಕ ಪರಿಷತ್ತಿನ ಅಥವಾ ಸಿಂಡಿಕೇಟಿನ ಯಾವೊಬ್ಬ ಸದಸ್ಯನು, ವಯೋನಿವೃತ್ತಿ ಹೊಂದಿದ್ದರ ಮೇಲೆ ಸದಸ್ಯತ್ವ ಹೊಂದಿರುವುದು ನಿಂತುಹೋಗತಕ್ಕದ್ದು.

(4) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದ ಹೊರತು, ಯಾವೊಬ್ಬ ವ್ಯಕ್ತಿಯು ಕಾನೂನಿನ ಅಡಿಯಲ್ಲಿ ಸ್ಥಾಪಿತಗೊಂಡ ಯಾವುದೇ ವಿಶ್ವವಿದ್ಯಾನಿಲಯದ ಪದವೀಧರನಾಗಿರದ ಹೊರತು, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಪ್ರಾಧಿಕಾರದ ಒಬ್ಬ ಸದಸ್ಯನೆಂಬುದಾಗಿ ನಾಮನಿರ್ದೇಶಿತನಾಗಲು ಅರ್ಹನಾಗತಕ್ಕದ್ದಲ್ಲ.

(5) ಈ ಅಧಿನಿಯಮದಲ್ಲಿ ಒಳಗೊಂಡಿರುವುದಾವುದೂ, ಅನ್ಯಥಾ ಉಪಬಂಧಿಸಿದ ಹೊರತು, ವಿಶ್ವವಿದ್ಯಾನಿಲಯದ ಯಾವೊಬ್ಬ ನೌಕರನು, ಬೋಧನೆ ಮತ್ತು ಬೋಧಕೇತರ ಎರಡರಲ್ಲೂ ಅಥವಾ ಲಿಪಿಕ ಸಿಬ್ಬಂದಿ ಅಥವಾ ಸಂಯೋಜನೆಗೊಂಡ ಕಾಲೇಜಿನ ವ್ಯವಸ್ಥಾಪನೆಯಲ್ಲಿರುವ ಯಾವೊಬ್ಬ ವ್ಯಕ್ತಿಯು, ಅವನು ಯಾವುದೇ ಸಾಮರ್ಥ್ಯ ಹೊಂದಿರಲಿ ಅವನು ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಪ್ರಾಧಿಕಾರದ ಸದಸ್ಯನೆಂಬುದಾಗಿ ಚುನಾಯಿತನಾಗಲು ಅಥವಾ ನಾಮನಿರ್ದೇಶಿತನಾಗಲು ಅರ್ಹನಾಗಿರತಕ್ಕದ್ದಲ್ಲ.

## ಅಧ್ಯಾಯ - V

## ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳು

**40. ಪರಿನಿಯಮಗಳು.-** (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಪರಿನಿಯಮಗಳು ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯಗಳಿಗೆ ಉಪಬಂಧಿಸಬಹುದು, ಎಂದರೆ:-

(ಎ) ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಮತ್ತು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳೆಂದು ಕಾಲಕಾಲಕ್ಕೆ ಘೋಷಿಸಬಹುದಾದಂಥ ಇತರ ನಿಕಾಯಗಳ ರಚನೆ, ಪ್ರಕಾರ್ಯಗಳು ಮತ್ತು ಅಧಿಕಾರಗಳು;

(ಬಿ) ಮೊದಲಿನ ಸದಸ್ಯರು ಪದದಲ್ಲಿ ಮುಂದುವರಿಯುವುದು ಒಳಗೊಂಡಂತೆ ಸದರಿ ಪ್ರಾಧಿಕಾರಗಳ ಅಥವಾ ನಿಕಾಯಗಳ ಸದಸ್ಯರ ನೇಮಕ ಮತ್ತು ಅವರು ಪದದಲ್ಲಿ ಮುಂದುವರೆಯುವುದು ಮತ್ತು ಸದಸ್ಯರ ಖಾಲಿ ಸ್ಥಾನಗಳನ್ನು ತುಂಬುವುದು ಮತ್ತು ಪ್ರಾಧಿಕಾರಗಳಿಗೆ ಅಥವಾ ನಿಕಾಯಗಳಿಗೆ ಸಂಬಂಧಪಟ್ಟಂತೆ ಯಾವ ವಿಷಯಗಳಿಗೆ ಉಪಬಂಧಿಸುವುದು ಅವಶ್ಯವಾಗಬಹುದೋ ಅಥವಾ ಅಪೇಕ್ಷಣೀಯವಾಗಬಹುದೋ ಆ ಎಲ್ಲ ಇತರ ವಿಷಯಗಳ ಬಗ್ಗೆ ಉಪ ಬಂಧಿಸುವುದು;

(ಸಿ) ಗೌರವ ಪದವಿಗಳನ್ನು ಪ್ರದಾನ ಮಾಡುವುದು;

(ಡಿ) ಪದವಿ ಮತ್ತು ಡಿಪ್ಲೋಮಾಗಳನ್ನು ಪ್ರದಾನ ಮಾಡಲು ಘಟಿಕೋತ್ಸವಗಳನ್ನು ನಡೆಸುವುದು ಮತ್ತು ತುರ್ತು ಸಂದರ್ಭದಲ್ಲಿ ಘಟಿಕೋತ್ಸವಕ್ಕೆ ಮೊದಲು ಪದವಿ ಪ್ರಮಾಣ ಪತ್ರಗಳನ್ನು ನೀಡುವುದು;

(ಇ) ಪದವಿಗಳ, ಡಿಪ್ಲೋಮಾಗಳ, ಸರ್ಟಿಫಿಕೇಟ್‌ಗಳ ಹಾಗೂ ಇತರ ವಿದ್ಯಾವಿಷಯಕ ಪ್ರಶಸ್ತಿಗಳನ್ನು ಹಿಂತೆಗೆದುಕೊಳ್ಳುವುದು;

(ಎಫ್) ವ್ಯಾಸಂಗ ವಿಭಾಗಗಳು, ವಿಭಾಗಗಳು, ವಿದ್ಯಾರ್ಥಿ ನಿಲಯಗಳು, ಕಾಲೇಜುಗಳು ಮತ್ತು ಸಂಸ್ಥೆಗಳ ಸ್ಥಾಪನೆ, ನಿರ್ವಹಣೆ ಮತ್ತು ಅವುಗಳನ್ನು ರದ್ದುಪಡಿಸುವುದು;

(ಜಿ) ಕಾಲೇಜುಗಳನ್ನು ಸಂಯೋಜಿಸುವ ಮತ್ತು ಅಂಥ ಸಂಯೋಜನೆಯನ್ನು ಹಿಂತೆಗೆದು ಕೊಳ್ಳಬಹುದಾದ ಬಗೆಗಿನ ಷರತ್ತುಗಳು;

(ಹೆಚ್) ಫೆಲೋಶಿಪ್‌ಗಳು, ವಿದ್ಯಾರ್ಥಿ ವೇತನಗಳು, ಶಿಷ್ಯ ವೇತನಗಳು, ಪ್ರವೇತನಗಳು, ಪದಕಗಳು ಮತ್ತು ಪಾರಿತೋಷಕಗಳ ಸ್ಥಾಪನೆ;

(ಐ) ಪ್ರಾಧ್ಯಾಪಕರ, ರೀಡರುಗಳ, ಉಪನ್ಯಾಸಕರ, ಲಿಪಿಕ ಮತ್ತು ಬೋಧಕೇತರ ಹುದ್ದೆಗಳ ಸ್ಥಾಪನೆ, ಅಮಾನತ್ತು ಮತ್ತು ರದ್ದುಪಡಿಸುವುದು;

(ಜೆ) ಹುದ್ದೆಗಳ ಸೃಜನೆ;

(ಕೆ) ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಅಧ್ಯಾಪಕರ ನೇಮಕಾತಿಯ ವಿಧಾನ:

ಪರಂತು, ವಿಶ್ವವಿದ್ಯಾನಿಲಯ ಅನುದಾನ ಆಯೋಗದ ವೇತನ ಶ್ರೇಣಿಗಳನ್ನು ಪಡೆಯುತ್ತಿರುವವರನ್ನು ಹೊರತುಪಡಿಸಿ, ನೌಕರರ ವೇತನ ಶ್ರೇಣಿಗಳು, ರಾಜ್ಯ ಸರ್ಕಾರಿ ನೌಕರರಿಗೆ ಅನ್ವಯವಾಗುವ ವೇತನ ಶ್ರೇಣಿಗಳಿಗೆ ಅನುಗುಣವಾಗಿರತಕ್ಕದ್ದು.

(ಎಲ್) ಮರಣ ಶಾಸನ ಮೂಲಕದ ಸ್ವತ್ತಿನ, ದೇಣಿಗೆಗಳ ಮತ್ತು ದತ್ತಿಗಳ ಸ್ವೀಕಾರ ಮತ್ತು ನಿರ್ವಹಣೆ;

(ಎಮ್) ವಿಶ್ವವಿದ್ಯಾನಿಲಯದಲ್ಲಿ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ವ್ಯಾಸಂಗ ಕ್ರಮಗಳಿಗೆ ಮತ್ತು ವಿಶ್ವವಿದ್ಯಾನಿಲಯದ ಪರೀಕ್ಷೆಗಳು, ಪದವಿಗಳು ಮತ್ತು ಡಿಪ್ಲೋಮಾಗಳ ಪ್ರವೇಶಗಳಿಗಾಗಿ ವಿಧಿಸಬೇಕಾದ ಫೀಜುಗಳು;

(ಎನ್) ವಿಶ್ವವಿದ್ಯಾನಿಲಯವು ಸಲ್ಲಿಸಿದ ಸೇವೆಗಳಿಗಾಗಿ ವಿಧಿಸಬೇಕಾದ ಫೀಜುಗಳು;

(ಓ) ಉಪಲಬ್ಧಿಗಳನ್ನು ಒಳಗೊಂಡಂತೆ ನೌಕರರ ಸೇವಾ ಷರತ್ತುಗಳು ಮತ್ತು;

(ಪಿ) ಈ ಅಧಿನಿಯಮದ ಮೂಲಕ ಅಥವಾ ಪರಿನಿಯಮಗಳ ಮೂಲಕ ಉಪಬಂಧಿಸಬೇಕಾದ ಅಥವಾ ಉಪ ಬಂಧಿಸಬಹುದಾದ ಎಲ್ಲ ಇತರ ವಿಷಯಗಳು.

(2) ಪರಿನಿಯಮಗಳು, ಕುಲಾಧಿಪತಿಯವರ ಅನುಮೋದನೆಯ ದಿನಾಂಕದಿಂದ ಅಥವಾ ಕುಲಾಧಿಪತಿಯವರು ನಿರ್ದೇಶಿಸಬಹುದಾದ ಇತರ ಅಂಥ ದಿನಾಂಕದಿಂದ ಮಾತ್ರ ಜಾರಿಗೆ ಬರತಕ್ಕದ್ದು.

(3) ಉಪಲಬ್ಧಿಗಳು ಒಳಗೊಂಡಂತೆ ನೌಕರರ ಸೇವಾಷರತ್ತುಗಳನ್ನು ನಿಯಂತ್ರಿಸುವ ಒಳಪಡುವ ಪರಿನಿಯಮಗಳು ರಾಜ್ಯ ಸರ್ಕಾರದ ಕಾರ್ಯನೀತಿಗೆ ಸುಸಂಗತವಾಗಿರತಕ್ಕದ್ದು.

**41. ಪರಿನಿಯಮಗಳ ಅಧಿನಿಯಮಿತಿ ಮತ್ತು ಅವುಗಳ ರಚನೆ.-** (1) ಸಿಂಡಿಕೇಟ್ ಇದರಲ್ಲಿ ಇನ್ನು ಮುಂದೆ ಉಪಬಂಧಿಸಿದ ರೀತಿಯಲ್ಲಿ ಪರಿನಿಯಮಗಳನ್ನು ರಚಿಸತಕ್ಕದ್ದು, ತಿದ್ದುಪಡಿ ಮಾಡತಕ್ಕದ್ದು ಅಥವಾ ನಿರಸನಗೊಳಿಸತಕ್ಕದ್ದು.

(2) ಸಿಂಡಿಕೇಟ್ ತಾನಾಗಿಯೇ ಆಗಲಿ ಅಥವಾ ವಿದ್ಯಾವಿಷಯಕ ಪರಿಷತ್ತು ಮಾಡಿದ ಪ್ರಸ್ತಾವನೆಯ ಮೇಲಾಗಲಿ ಪರಿನಿಯಮದ ಕರಡನ್ನು ಪರಿಗಣನೆಗೆ ತೆಗೆದುಕೊಳ್ಳಬಹುದು. ವಿದ್ಯಾವಿಷಯಕ ಪರಿಷತ್ತು ಕರಡನ್ನು ಪ್ರಸ್ತಾವಿಸದೇ ಇದ್ದಲ್ಲಿ, ಸಿಂಡಿಕೇಟ್ ಅದನ್ನು ಪರಿಗಣಿಸುವುದಕ್ಕೆ ಮುಂಚೆ ವಿದ್ಯಾವಿಷಯಕ ಪರಿಷತ್ತಿನ ಅಭಿಪ್ರಾಯವನ್ನು ಪಡೆಯತಕ್ಕದ್ದು.

(3) ಸಿಂಡಿಕೇಟು, ಹಣಕಾಸಿನ ವಿಷಯಗಳು ಒಳಗೊಂಡಿದ್ದ ಪರಿನಿಯಮಗಳ ಸಂಬಂಧದಲ್ಲಿ ಹಣಕಾಸು ಸಮಿತಿಯ ಅಭಿಪ್ರಾಯವನ್ನು ಪಡೆಯತಕ್ಕದ್ದು.

(4) ಸಿಂಡಿಕೇಟು ತಾನು ಅವಶ್ಯವೆಂದು ಭಾವಿಸಿದರೆ, ಕರಡು ಪರಿನಿಯಮಗಳ ಸಂಬಂಧದಲ್ಲಿ ಸಿಂಡಿಕೇಟ್ ಅವುಗಳನ್ನು ಪರಿಗಣಿಸುವುದಕ್ಕೆ ಮುಂಚೆ ವಿಶ್ವವಿದ್ಯಾನಿಲಯದ

ಯಾರೇ ಅಧಿಕಾರಿಯ, ಪ್ರಾಧಿಕಾರದ ಅಥವಾ ನಿಕಾಯದ ಅಭಿಪ್ರಾಯವನ್ನು ಸಹ ಪಡೆಯಬಹುದು.

(5) ಸಿಂಡಿಕೇಟ್ ಅಂಗೀಕರಿಸಿದ ಪ್ರತಿಯೊಂದು ಪರಿನಿಯಮವನ್ನು, ತನ್ನ ನಿರ್ದಿಷ್ಟ ಶಿಫಾರಸ್ಸುಗಳೊಡನೆ ಅನುಮೋದನೆಗಾಗಿ ಕುಲಾಧಿಪತಿಯವರಿಗೆ ಒಪ್ಪಿಸುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(6) ರಾಜ್ಯ ಸರ್ಕಾರವು, ಕರಡು ಪರಿನಿಯಮಗಳನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳುಗಳೊಳಗೆ ಅಂಥ ಕರಡು ಪರಿನಿಯಮಗಳನ್ನು ತನ್ನ ಟೀಕೆ ಟಿಪ್ಪಣಿಗಳು ಮತ್ತು ನಿರ್ದಿಷ್ಟ ಶಿಫಾರಸ್ಸುಗಳೊಡನೆ, ಕುಲಾಧಿಪತಿಗೆ ಕಳುಹಿಸತಕ್ಕದ್ದು ಮತ್ತು ಕುಲಾಧಿಪತಿಯವರು, ರಾಜ್ಯ ಸರ್ಕಾರದಿಂದ ಕರಡು ಪರಿನಿಯಮಗಳನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳೊಳಗೆ ತನ್ನ ಅನುಮೋದನೆಯನ್ನು ನೀಡಬಹುದು ಅಥವಾ ತನ್ನ ಅನುಮೋದನೆಯನ್ನು ತಡೆಹಿಡಿಯಬಹುದು ಅಥವಾ ಅದನ್ನು ಮತ್ತಷ್ಟು ಪರಿಗಣನೆಗಾಗಿ ಸಿಂಡಿಕೇಟಿಗೆ ಕಳುಹಿಸಬಹುದು.

(7) ಸಿಂಡಿಕೇಟ್ ಅಂಗೀಕರಿಸಿದ ಪರಿನಿಯಮಗಳನ್ನು ಕುಲಾಧಿಪತಿಯವರ ಅನುಮೋದನೆ ಹೊರತು ಜಾರಿಗೊಳಿಸತಕ್ಕದ್ದಲ್ಲ.

**42. ಆರ್ಡಿನೆನ್ಸ್‌ಗಳು.-** (1) ಈ ಅಧಿನಿಯಮದ ಮತ್ತು ಪರಿನಿಯಮಗಳ ಉಪಬಂಧಗಳಿಗೊಳಪಟ್ಟು, ಆರ್ಡಿನೆನ್ಸ್‌ಗಳು ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ,-

(ಎ) ವಿಶ್ವವಿದ್ಯಾನಿಲಯಕ್ಕೆ ವಿದ್ಯಾರ್ಥಿಗಳ ಪ್ರವೇಶ ಮತ್ತು ಅವರನ್ನು ಹಾಗೆ ವಿದ್ಯಾರ್ಥಿಗಳ ಪಟ್ಟಿಗೆ ಸೇರಿಸುವುದು;

(ಬಿ) ವಿಶ್ವವಿದ್ಯಾನಿಲಯದ ಎಲ್ಲ ಪದವಿಗಳ, ಡಿಪ್ಲೊಮಾಗಳ ಮತ್ತು ಪ್ರಮಾಣ ಪತ್ರಗಳ ಬಗ್ಗೆ ವ್ಯಾಸಂಗ ಕ್ರಮಗಳು;

(ಸಿ) ಪದವಿಗಳು, ಡಿಪ್ಲೊಮಾಗಳು ಮತ್ತು ಪ್ರಮಾಣ ಪತ್ರಗಳು ಮತ್ತು ಅವುಗಳಿಗಾಗಿ ಇತರ ಅಗತ್ಯತೆಗಳು ಮತ್ತು ಅವುಗಳನ್ನು ನೀಡುವುದಕ್ಕೆ ಮತ್ತು ಪಡೆಯುವುದಕ್ಕೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ಕ್ರಮಗಳು;

(ಡಿ) ಫೆಲೋಶಿಪ್‌ಗಳು, ವಿದ್ಯಾರ್ಥಿ ವೇತನಗಳು, ಶಿಷ್ಯ ವೇತನಗಳು, ಪ್ರವೇತನಗಳು, ಪದಕಗಳು ಮತ್ತು ಪಾರಿತೋಷಕಗಳನ್ನು ನೀಡುವುದಕ್ಕೆ ಸಂಬಂಧಿಸಿದ ಷರತ್ತುಗಳು;

(ಇ) ಪರೀಕ್ಷಾ ನಿಕಾಯಗಳು, ಪರೀಕ್ಷಕರು, ಮತ್ತು ಮಾಡರೇಟರುಗಳ ಪದಾವಧಿ ಹಾಗೂ ಕರ್ತವ್ಯಗಳು ಸೇರಿದಂತೆ, ಪರೀಕ್ಷೆಗಳನ್ನು ನಡೆಸುವುದು;

(ಎಫ್) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ನಿವಾಸದ ಬಗ್ಗೆ ಷರತ್ತುಗಳು;

(ಜಿ) ವಿದ್ಯಾರ್ಥಿನಿಯರ ನಿವಾಸ, ಶಿಸ್ತು ಮತ್ತು ಬೋಧನೆಗೆ ಸಂಬಂಧಿಸಿದಂತೆ ಮಾಡಬಹುದಾದ ವಿಶೇಷ ವ್ಯವಸ್ಥೆಗಳು ಏನಾದರೂ ಇದ್ದರೆ ಅವುಗಳನ್ನು ಮತ್ತು ಅವಶ್ಯವಿರುವಲ್ಲಿ ಅವರಿಗಾಗಿ ವಿಶೇಷ ವ್ಯಾಸಂಗ ಕ್ರಮಗಳನ್ನು ನಿಯಮಿಸುವುದು;

(ಹೆಚ್) ಧಾರ್ಮಿಕ ಶಿಕ್ಷಣ ಕೊಡುವುದನ್ನು ನಿಯಂತ್ರಿಸುವುದು;

(ಐ) ವಿಶ್ವವಿದ್ಯಾನಿಲಯವು ಸ್ಥಾಪಿಸಿದ ಅಥವಾ ನಿರ್ವಹಿಸುತ್ತಿರುವ ಕಾಲೇಜುಗಳು ಮತ್ತು ಇತರ ಸಂಸ್ಥೆಗಳ ವ್ಯವಸ್ಥಾಪನೆ;

(ಜೆ) ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡ ಕಾಲೇಜುಗಳ ಮತ್ತು ಇತರ ಸಂಸ್ಥೆಗಳ ಮೇಲ್ವಿಚಾರಣೆ ಮತ್ತು ಪರಿವೀಕ್ಷಣೆ;

(ಕೆ) ವಿಶ್ವವಿದ್ಯಾನಿಲಯವು ನಿರ್ವಹಿಸದೆ ಇರುವ ವಿದ್ಯಾರ್ಥಿನಿಲಯಗಳ ಮನ್ನಣೆಗಾಗಿ ಷರತ್ತುಗಳು;

(ಎಲ್) ವಿಶ್ವವಿದ್ಯಾನಿಲಯದಲ್ಲಿ ಮತ್ತು ಸಂಯೋಜನೆಗೊಂಡ ಕಾಲೇಜುಗಳಲ್ಲಿ ಹಾಗೂ ಇತರ ಸಂಸ್ಥೆಗಳಲ್ಲಿ ಇರುವ ವಿದ್ಯಾರ್ಥಿಗಳ ಆರೋಗ್ಯ ಮತ್ತು ಶಿಸ್ತು ಮತ್ತು ಅವರ ವಿರುದ್ಧ ಶಿಸ್ತು ವ್ಯವಹರಣೆಗಳು;

(ಎಮ್) ವಿದ್ಯಾರ್ಥಿಗಳ ವರ್ಗಾವಣೆಗೆ ಸಂಬಂಧಿಸಿದಂತೆ ಕಾಲೇಜುಗಳು ಮತ್ತು ಮನ್ನಣೆ ಪಡೆದ ಸಂಸ್ಥೆಗಳು ಅನುಸರಿಸಬೇಕಾದ ಮತ್ತು ಜಾರಿಗೊಳಿಸಬೇಕಾದ ನಿಯಮಗಳು; ಮತ್ತು

(ಎನ್) ಈ ಅಧಿನಿಯಮದ ಅಥವಾ ಪರಿನಿಯಮಗಳ ಮೂಲಕ, ಆರ್ಡಿನೆನ್ಸ್‌ಗಳಿಂದ ಉಪಬಂಧಿಸಬೇಕಾದ ಅಥವಾ ಉಪಬಂಧಿಸಬಹುದಾದ ಇತರ ಎಲ್ಲ ವಿಷಯಗಳು;

(2) ಜಾರಿಯಲ್ಲಿರುವ ವಿನಿಯಮಗಳ ಅಥವಾ ಪರಿನಿಯಮಗಳ ತಿದ್ದುಪಡಿಗಾಗಿ ಯಾವುದೇ ಆರ್ಡಿನೆನ್ಸನ್ನು ರಚಿಸತಕ್ಕದ್ದಲ್ಲ.

**43. ಆರ್ಡಿನೆನ್ಸ್‌ಗಳ ರಚನೆಯ ಕಾರ್ಯವಿಧಾನ.-** (1) ಸಿಂಡಿಕೇಟು, ಇದರಲ್ಲಿ ಇನ್ನು ಮುಂದೆ ಉಪಬಂಧಿಸಿದ ರೀತಿಯಲ್ಲಿ ಆರ್ಡಿನೆನ್ಸ್‌ಗಳನ್ನು ರಚಿಸಬಹುದು.

(2) ಆರ್ಡಿನೆನ್ಸುಗಳನ್ನು ರಚಿಸುವಲ್ಲಿ ಸಿಂಡಿಕೇಟು,-

(ಎ) ಪರೀಕ್ಷಕರ ಕರ್ತವ್ಯಗಳ ಮೇಲೆ ಅಂಥ ಆರ್ಡಿನೆನ್ಸುಗಳು ಪರಿಣಾಮ ಬೀರುವಲ್ಲಿ, ಸಂಬಂಧಪಟ್ಟ ವ್ಯಾಸಂಗ ಮಂಡಲಿ ಅಥವಾ ಮಂಡಲಿಗಳೊಡನೆ; ಮತ್ತು

(ಬಿ) ವ್ಯಾಸಂಗ ಕ್ರಮಗಳು ಪರೀಕ್ಷೆಗಳನ್ನು ನಡೆಸುವುದು ಅಥವಾ ಅವುಗಳ ಗುಣಮಟ್ಟ ಅಥವಾ ವಿದ್ಯಾರ್ಥಿಗಳ ನಿವಾಸದ ಷರತ್ತುಗಳ ಮೇಲೆ ಅಂಥ ಆರ್ಡಿನೆನ್ಸ್‌ಗಳು ಪರಿಣಾಮ ಬೀರುವಲ್ಲಿ ವಿದ್ಯಾ ವಿಷಯಕ ಪರಿಷತ್ತಿನೊಡನೆ,

- ಸಮಾಲೋಚಿಸತಕ್ಕದ್ದು.

(3) ವಿದ್ಯಾವಿಷಯಕ ಪರಿಷತ್ತು ಪ್ರಸ್ತಾಪಿಸಿದ ಯಾವುದೇ ಆರ್ಡಿನೆನ್ಸಿನ ಕರಡನ್ನು ತಿದ್ದುಪಡಿ ಮಾಡಲು ಸಿಂಡಿಕೇಟಿಗೆ ಅಧಿಕಾರವಿರತಕ್ಕದ್ದಲ್ಲ. ಆದರೆ, ಅದು ಪ್ರಸ್ತಾವವನ್ನು ತಿರಸ್ಕರಿಸಬಹುದು ಅಥವಾ ಸಿಂಡಿಕೇಟು ಸೂಚಿಸಬಹುದಾದ ಅಂಥ ತಿದ್ದುಪಡಿಗಳೊಂದಿಗೆ, ಸಂಪೂರ್ಣವಾಗಿ ಅಥವಾ ಭಾಗಶಃ ಮರುಪರಿಶೀಲನೆಗಾಗಿ ಕರಡನ್ನು ವಿದ್ಯಾವಿಷಯಕ ಪರಿಷತ್ತಿಗೆ ಹಿಂದಿರುಗಿಸಬಹುದು.

(4) ಸಿಂಡಿಕೇಟು ರಚಿಸಿದ ಎಲ್ಲಾ ಆರ್ಡಿನೆನ್ಸ್‌ಗಳು, ಅದು ನಿರ್ದೇಶಿಸಬಹುದಾದ ಅಂಥ ದಿನಾಂಕದಿಂದ ಪರಿಣಾಮಕಾರಿಯಾಗಿರತಕ್ಕದ್ದು. ಆದರೆ ಪ್ರತಿಯೊಂದು ಆರ್ಡಿನೆನ್ಸನ್ನು ಅದನ್ನು ರಚಿಸಿದ ದಿನದಿಂದ ಎರಡು ವಾರಗಳೊಳಗಾಗಿ, ಕುಲಾಧಿಪತಿಯವರಿಗೆ ಅವರ ಅನುಮೋದನೆಗಾಗಿ ಒಪ್ಪಿಸತಕ್ಕದ್ದು. ಕುಲಾಧಿಪತಿ ಯವರು ಆರ್ಡಿನೆನ್ಸನ್ನು ಸ್ವೀಕರಿಸಿದ ನಾಲ್ಕು ವಾರಗಳೊಳಗಾಗಿ, ಯಾವುದೇ ಆರ್ಡಿನೆನ್ಸಿನ ಪ್ರವರ್ತನೆಯು ಅಮಾನತ್ತಿನಲ್ಲಿರತಕ್ಕುದೆಂದು ಆದೇಶದ ಮೂಲಕ ನಿರ್ದೇಶಿಸಬಹುದು ಮತ್ತು ಅದಕ್ಕೆ ತಮ್ಮ ಆಕ್ಷೇಪಣೆಯನ್ನು ಸಾಧ್ಯವಾದಷ್ಟು ಬೇಗನೆ ಸಿಂಡಿಕೇಟಿಗೆ ತಿಳಿಸತಕ್ಕದ್ದು. ಸಿಂಡಿಕೇಟಿನ ಟೀಕೆಟಿಪ್ಪಣಿಗಳನ್ನು ಅವನು ಸ್ವೀಕರಿಸಿದ ತರುವಾಯ, ಅಮಾನತ್ತಿನ ಆದೇಶವನ್ನು ಹಿಂತೆಗೆದುಕೊಳ್ಳಬಹುದು ಅಥವಾ ಆರ್ಡಿನೆನ್ಸನ್ನು ಅಂಗೀಕರಿಸದಿರಬಹುದು, ಅವರ ನಿರ್ಣಯವು ಅಂತಿಮವಾಗಿರತಕ್ಕದ್ದು:

ಪರಂತು, ರಾಜ್ಯ ಸಂಚಿತನಿಧಿಯಿಂದ ವೆಚ್ಚಕ್ಕೆ ಸಂಬಂಧಿಸಿದ ವೆಚ್ಚವನ್ನು ಒಳಗೊಂಡ ಆರ್ಡಿನೆನ್ಸ್ ಸಂಬಂಧದಲ್ಲಿ, ಕುಲಾಧಿಪತಿಯವರು ತಮ್ಮ ಅನುಮೋದನೆ ನೀಡುವ ಮೊದಲು ರಾಜ್ಯಸರ್ಕಾರದೊಡನೆ ಸಮಾಲೋಚಿಸತಕ್ಕದ್ದು.

(5) ವಿದ್ಯಾ ವಿಷಯಕ ಪರಿಷತ್ತು ಪ್ರಸ್ತಾವಿಸಿದ ಆರ್ಡಿನೆನ್ಸಿನ ಕರಡನ್ನು ಸಿಂಡಿಕೇಟು ತಿರಸ್ಕರಿಸಿದಲ್ಲಿ, ವಿದ್ಯಾವಿಷಯಕ ಪರಿಷತ್ತು, ಕುಲಾಧಿಪತಿಯವರಿಗೆ ಮೇಲ್ಮನವಿ ಮಾಡಿಕೊಳ್ಳಬಹುದು.

(6) ಕುಲಾಧಿಪತಿಯವರು, ಸಿಂಡಿಕೇಟಿನ ಟೀಕೆಟಿಪ್ಪಣಿಗಳನ್ನು ಪಡೆದ ತರುವಾಯ ಮೇಲ್ಮನವಿಯನ್ನು ತಿರಸ್ಕರಿಸಬಹುದು ಇಲ್ಲವೇ ವಿದ್ಯಾವಿಷಯಕ ಪರಿಷತ್ತು ಪ್ರಸ್ತಾವಿಸಿದಂತೆ ಆರ್ಡಿನೆನ್ಸನ್ನು ಅನುಮೋದಿಸಬಹುದು. ಅನಂತರ ಆರ್ಡಿನೆನ್ಸನ್ನು ಸಿಂಡಿಕೇಟು ರಚಿಸಿದ್ದರೆ ಹೇಗೋ ಹಾಗೆ ಅದು ಪರಿಣಾಮಕಾರಿಯಾಗಿರತಕ್ಕದ್ದು.

**44. ವಿನಿಯಮಗಳು.-** (1) ವಿದ್ಯಾವಿಷಯಕ ಪರಿಷತ್ತು 31ನೇ ಪ್ರಕರಣದಲ್ಲಿ ನಮೂದಿಸಲಾದ ಎಲ್ಲಾ ಅಥವಾ ಯಾವುವೇ ಅಧಿಕಾರಗಳನ್ನು ಚಲಾಯಿಸಲು

ಉಪಬಂಧಿಸುವುದಕ್ಕಾಗಿ ಮತ್ತು ವಿಶೇಷವಾಗಿ ಈ ಮುಂದಿನ ವಿಷಯಗಳ ಬಗ್ಗೆ ಈ ಅಧಿನಿಯಮ, ಪರಿನಿಯಮಗಳಿಗೆ ಮತ್ತು ಆರ್ಡಿನೆನ್ಸ್‍ಗಳಿಗೆ ಸುಸಂಗತವಾಗಿರುವ ವಿನಿಯಮಗಳನ್ನು ರಚಿಸಬಹುದು, ಎಂದರೆ,-

(ಎ) ವಿಶ್ವವಿದ್ಯಾನಿಲಯಕ್ಕೆ ವಿದ್ಯಾರ್ಥಿಗಳ ಪ್ರವೇಶ;

(ಬಿ) ಇತರ ವಿಶ್ವವಿದ್ಯಾನಿಲಯಗಳ ಪರೀಕ್ಷೆಗಳು ಮತ್ತು ಪದವಿಗಳನ್ನು ವಿಶ್ವವಿದ್ಯಾನಿಲಯದ ಪರೀಕ್ಷೆ ಮತ್ತು ಪದವಿಗಳಿಗೆ ಸಮನಾದುವೆಂದು ಮನ್ನಣೆ ನೀಡುವುದು;

(ಸಿ) ವಿಶ್ವವಿದ್ಯಾನಿಲಯದ ವ್ಯಾಸಂಗ ಕ್ರಮಗಳು ಮತ್ತು ಪರೀಕ್ಷೆಗಳು ಮತ್ತು ವಿಶ್ವವಿದ್ಯಾನಿಲಯದ ಅಥವಾ ಸಂಯೋಜನೆಗೊಂಡ ಕಾಲೇಜುಗಳ ಅಥವಾ ಇತರ ವಿಶ್ವವಿದ್ಯಾನಿಲಯಗಳ ಸಂಸ್ಥೆಗಳ ವಿದ್ಯಾರ್ಥಿಗಳನ್ನು ಯಾವ ಷರತ್ತುಗಳ ಮೇಲೆ ವಿಶ್ವವಿದ್ಯಾನಿಲಯದ ಪರೀಕ್ಷೆಗಳು ಅಥವಾ ಪದವಿಗಳು ಇತರ ಡಿಪ್ಲೊಮೋಗಳು ಮತ್ತು ಸರ್ಟಿಫಿಕೇಟುಗಳಿಗೆ ಸೇರಿಸಿಕೊಳ್ಳತಕ್ಕದ್ದೋ ಆ ಷರತ್ತುಗಳು;

(ಡಿ) ವಿನಾಯಿತಿಗಳನ್ನು ನೀಡುವುದು;

(2) ವಿದ್ಯಾವಿಷಯಕ ಪರಿಷತ್ತು ಅಂಗೀಕರಿಸಿದ ಪ್ರತಿಯೊಂದು ವಿನಿಯಮವನ್ನು, ಕುಲಾಧಿಪತಿಯವರ ಅನುಮೋದನೆಗಾಗಿ ಒಪ್ಪಿಸಲು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು. ರಾಜ್ಯ ಸರ್ಕಾರವು, ವಿಶ್ವವಿದ್ಯಾನಿಲಯದಿಂದ ಸ್ವೀಕರಿಸಿದ ವಿನಿಯಮಗಳನ್ನು ಅವುಗಳನ್ನು ಸ್ವೀಕರಿಸಿದ ದಿನದಿಂದ ಎರಡು ತಿಂಗಳೊಳಗೆ ತನ್ನ ಟೀಕೆ ಟಿಪ್ಪಣಿಗಳೊಡನೆ ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು. ಕುಲಾಧಿಪತಿಯವರು, ರಾಜ್ಯ ಸರ್ಕಾರದಿಂದ ಈ ವಿನಿಯಮಗಳನ್ನು ಸ್ವೀಕರಿಸಿದ ದಿನದಿಂದ ಒಂದು ತಿಂಗಳೊಳಗೆ ಅವುಗಳನ್ನು ಅನುಮೋದಿಸಬಹುದು ಅಥವಾ ಮರು ಪರಿಶೀಲನೆಗಾಗಿ ಅವುಗಳನ್ನು ವಿದ್ಯಾವಿಷಯಕ ಪರಿಷತ್ತಿಗೆ ಹಿಂದಿರುಗಿಸಬಹುದು.

(3) ಪ್ರತಿಯೊಂದು ವಿನಿಯಮಗಳು, ಕುಲಾಧಿಪತಿಯವರು ಅವುಗಳನ್ನು ಅನುಮೋದಿಸಿದ ದಿನಾಂಕದಿಂದ ಅಥವಾ ಕುಲಾಧಿಪತಿಯವರು ನಿರ್ದೇಶಿಸಬಹುದಾದ ಅಂಥ ಇತರ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**45. ನಿಯಮಗಳು.-** (1) ಸಿಂಡಿಕೇಟು, ಈ ಅಧಿನಿಯಮ, ಪರಿನಿಯಮಗಳು ಆರ್ಡಿನೆನ್ಸುಗಳು ಮತ್ತು ವಿನಿಯಮಗಳಿಗೆ ಸುಸಂಗತವಾದ ನಿಯಮಗಳನ್ನು ರಚಿಸಬಹುದು.

(2) ನಿಯಮಗಳು,-

(ಎ) ಪ್ರತಿಯೊಂದು ಪ್ರಾಧಿಕಾರದ ಅಥವಾ ಮಂಡಲಿಯ ಸದಸ್ಯರಿಗೆ, ಸಭೆಗಳ ದಿನಾಂಕ ಮತ್ತು ಆ ಸಭೆಗಳಲ್ಲಿ ನಡೆಸಬೇಕಾದ ವ್ಯವಹಾರದ ಬಗ್ಗೆ

ನೋಟೀಸನ್ನು ಕೊಡುವುದು ಮತ್ತು ಆ ಸಭೆಗಳ ನಡವಳಿಗಳ ದಾಖಲೆಯನ್ನು ಇಡುವುದು;

(ಬಿ) ಸಭೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ ಮತ್ತು ಸಭೆಗಳ ಕೋರಂಗಾಗಿ ಅಗತ್ಯವಿರುವ ಸದಸ್ಯರ ಸಂಖ್ಯೆ: ಮತ್ತು

(ಸಿ) ಅಂಥ ಪ್ರಾಧಿಕಾರ ಅಥವಾ ಮಂಡಲಿಗೆ ಮಾತ್ರವೇ ಸಂಬಂಧಿಸಿದ ಮತ್ತು ಈ ಅಧಿನಿಯಮ, ಪರಿನಿಯಮಗಳು, ಆರ್ಡಿನೆನ್ಸ್‌ಗಳು ಅಥವಾ ವಿನಿಯಮಗಳ ಮೂಲಕ ಉಪಬಂಧಿಸದೆ ಇರುವ ಎಲ್ಲ ವಿಷಯಗಳು;

\- ಇವುಗಳಿಗಾಗಿ ಉಪಬಂಧಿಸಬಹುದು.

(3) ಈ ಪ್ರಕರಣದ ಮೇರೆಗೆ ರಚಿತವಾದ ಪ್ರತಿಯೊಂದು ನಿಯಮವು, ಸಿಂಡಿಕೇಟಿನ ಅನುಮೋದನೆ ಪಡೆದ ದಿನಾಂಕದಂದು ಜಾರಿಗೆ ಬರತಕ್ಕದ್ದು.

## ಅಧ್ಯಾಯ - VI

## ಹಣಕಾಸು ಮತ್ತು ಲೆಕ್ಕಪತ್ರಗಳು

**46. ವಿಶ್ವವಿದ್ಯಾನಿಲಯದ ನಿಧಿಗಳು.-** (1) ಈ ಕೆಳಕಂಡ ಯಾವುವೇ ಮೂಲಗಳಿಂದ ಸ್ವೀಕರಿಸಿದ ಮೊಬಲಗುಗಳು ವಿಶ್ವವಿದ್ಯಾನಿಲಯದ ನಿಧಿಯ ಭಾಗವಾಗಿರತಕ್ಕದ್ದು;

(ಎ) ವಿಶ್ವವಿದ್ಯಾನಿಲಯದ ಅನುದಾನ ಆಯೋಗವು ಅಥವಾ ಕೇಂದ್ರ ಸರ್ಕಾರವು ನೀಡಿದ ಯಾವುದೇ ವಂತಿಗೆ ಅಥವಾ ಅನುದಾನ;

(ಬಿ) ರಾಜ್ಯ ಸರ್ಕಾರವು ನೀಡಿದ ಯಾವುದೇ ವಂತಿಗೆ ಅಥವಾ ಅನುದಾನ;

(ಸಿ) ಖಾಸಗಿ ವ್ಯಕ್ತಿಗಳು ಅಥವಾ ಸಂಸ್ಥೆಗಳು ನೀಡಿದ ಯಾವುದೇ ಮರಣ ಶಾಸನ ಮೂಲಕವಾಗಿ ದೊರೆತ ಸ್ವತ್ತು, ದೇಣಿಗೆ, ದತ್ತಿಗಳು ಅಥವಾ ಇತರ ಅನುದಾನಗಳು.

(ಡಿ) ಫೀಜು ಮತ್ತು ಚಾರ್ಜುಗಳ ಮೂಲಕ ವಿಶ್ವವಿದ್ಯಾನಿಲಯವು ಸ್ವೀಕರಿಸಿದ ಆದಾಯ;

(ಇ) ಕೈಗಾರಿಕೆಗಳು, ವ್ಯಾಪಾರಿಗಳು ಅಥವಾ ಉದ್ದಿಮೆದಾರರಿಂದ ಯಾವುದೇ ವಂತಿಗೆ ಅಥವಾ ಮರಣ ಶಾಸನ ಮೂಲಕವಾಗಿ ದೊರೆತ ಸ್ವತ್ತು;

(ಎಫ್) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿಗೆ ಒಳಪಟ್ಟು ವಿದೇಶಿ ಸರ್ಕಾರಗಳಿಂದ ಅಥವಾ ಯಾವುದೇ ವಿದೇಶಿ ಸಂಸ್ಥೆಗಳಿಂದ ಅಥವಾ ಕಂಪನಿಗಳಿಂದ ಯಾವುದೇ ವಂತಿಗೆ ಅಥವಾ ದತ್ತಿಗಳು, ಮತ್ತು

(ಜಿ) ಯಾವುದೇ ಇತರ ಮೂಲದಿಂದ ಸ್ವೀಕರಿಸಿದ ಮೊಬಲಗುಗಳು.

(2) ಸದರಿ ನಿಧಿಯನ್ನು, ಭಾರತದ ರಿಜರ್ವ್ ಬ್ಯಾಂಕ್ ಅಧಿನಿಯಮ, 1934ರಲ್ಲಿ ಪರಿಭಾಷಿಸಿದಂತೆ ಅನುಸೂಚಿತ ಬ್ಯಾಂಕಿನಲ್ಲಿ ಅಥವಾ ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970ರ ಮೇರೆಗೆ ರಚಿತವಾದ ಹೊಸ ಸಂವಾದಿ ಬ್ಯಾಂಕಿನಲ್ಲಿ ಇಡತಕ್ಕದ್ದು ಅಥವಾ ಸಿಂಡಿಕೇಟು ತೀರ್ಮಾನಿಸಬಹುದಾದಂತೆ, ಭಾರತ ನ್ಯಾಸ ಅಧಿನಿಯಮ, 1882ರ ಮೂಲಕ ಪ್ರಾಧಿಕೃತವಾದ ಭದ್ರತೆಗಳಲ್ಲಿ ಹೂಡಬಹುದು.

(3) ಪರಿನಿಯಮಗಳ ಮೂಲಕ ನಿಯಮಿಸಬಹುದಾದ ರೀತಿಯಲ್ಲಿ ವಿಶ್ವವಿದ್ಯಾನಿಲಯದ ಯಾವುದೇ ಉದ್ದೇಶಗಳಿಗಾಗಿ ಸದರಿ ನಿಧಿಯನ್ನು ವಿನಿಯೋಗಿಸಬಹುದು.

**47. ವಾರ್ಷಿಕ ಲೆಕ್ಕ ಪತ್ರಗಳು ಮತ್ತು ಲೆಕ್ಕ ಪರಿಶೋಧನೆ.-** (1) ಸಿಂಡಿಕೇಟಿನ ನಿರ್ದೇಶನದ ಮೇರೆಗೆ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳನ್ನು ತಯಾರಿಸತಕ್ಕದ್ದು.

(2) ಹಾಗೆ ತಯಾರಿಸಿದ ವಾರ್ಷಿಕ ಲೆಕ್ಕ ಪತ್ರಗಳನ್ನು ವಿದ್ಯಾವಿಷಯಕ ಪರಿಷತ್ತು ತನ್ನ ಮುಂದಿನ ನಿಕಟ ಸಭೆಯಲ್ಲಿ ಪರಿಗಣಿಸತಕ್ಕದ್ದು. ವಿದ್ಯಾವಿಷಯಕ ಪರಿಷತ್ತು ಆ ಸಂಬಂಧವಾಗಿ ಒಂದು ನಡವಳಿಯನ್ನು ಅಂಗೀಕರಿಸಬಹುದು ಮತ್ತು ಅದನ್ನು ಸಿಂಡಿಕೇಟಿಗೆ ತಿಳಿಸತಕ್ಕದ್ದು. ವಿದ್ಯಾವಿಷಯಕ ಪರಿಷತ್ತು ಮಾಡಿದ ಸಲಹೆಗಳನ್ನು ಸಿಂಡಿಕೇಟು ಪರಿಗಣಿಸತಕ್ಕದ್ದು ಮತ್ತು ಅದರ ಮೇಲೆ ತಾನು ಸೂಕ್ತವೆಂದು ಭಾವಿಸುವಂಥ ರೀತಿಯಲ್ಲಿ ಕ್ರಮ ಕೈಗೊಳ್ಳತಕ್ಕದ್ದು ಮತ್ತು ತಾನು ಕೈಗೊಂಡ ಕ್ರಮದ ಬಗ್ಗೆ ಅಥವಾ ಕ್ರಮ ಕೈಗೊಳ್ಳದಿರಲು ಇರುವ ಕಾರಣಗಳನ್ನು ತನ್ನ ಮುಂದಿನ ಸಭೆಯಲ್ಲಿ ವಿದ್ಯಾವಿಷಯಕ ಪರಿಷತ್ತಿಗೆ ತಿಳಿಸತಕ್ಕದ್ದು,

(3) ವರ್ಷಕ್ಕೊಮ್ಮೆ ಏಪ್ರಿಲ್ ತಿಂಗಳಲ್ಲಿ ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳನ್ನು ರಾಜ್ಯ ಲೆಕ್ಕಪತ್ರ ನಿಯಂತ್ರಕನು ಪರಿಶೋಧಿಸತಕ್ಕದ್ದು.

(4) ಹಾಗೆ ಪರಿಶೋಧಿಸಿದ ಲೆಕ್ಕ ಪತ್ರಗಳನ್ನು ವಿದ್ಯಾವಿಷಯಕ ಪರಿಷತ್ತಿನ ಮುಂದೆ ಮತ್ತು ಸಿಂಡಿಕೇಟಿನ ಮುಂದೆ ಮಂಡಿಸತಕ್ಕದ್ದು ಹಾಗೂ ತದನಂತರ ಪ್ರತಿ ವರ್ಷ ಸೆಪ್ಟೆಂಬರ್ ಕೊನೆಯೊಳಗೆ ತನ್ನ ಆಕ್ಷೇಪಗಳೊಡನೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು. ರಾಜ್ಯ ಸರ್ಕಾರವು ಅದನ್ನು ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಶೀಘ್ರದಲ್ಲಿ ಬರುವ ಮುಂದಿನ ಅಧಿವೇಶನದಲ್ಲಿ ಮಂಡಿಸತಕ್ಕದ್ದು.

**48. ಹಣಕಾಸಿನ ಅಂದಾಜುಗಳು.-** (1)ಸಿಂಡಿಕೇಟು, ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ದಿನಾಂಕಕ್ಕೆ ಮೊದಲು ಮುಂಬರುವ ವರ್ಷದ ಹಣಕಾಸು ಅಂದಾಜುಗಳನ್ನು ಹಣಕಾಸು ಅಧಿಕಾರಿಯ ನೆರವಿನೊಡನೆ ತಯಾರಿಸತಕ್ಕದ್ದು ಮತ್ತು ಅವುಗಳನ್ನು ಹಣಕಾಸು ಸಮಿತಿಯಿಂದ ಪರಿಶೋಧಿಸುವಂತೆ ಮಾಡತಕ್ಕದ್ದು ಹಾಗೂ ಅವುಗಳನ್ನು ವಿದ್ಯಾ ವಿಷಯಕ ಪರಿಷತ್ತಿನ ಮುಂದೆ ಇಡತಕ್ಕದ್ದು.

(2) ಸಿಂಡಿಕೇಟು, ಬಜೆಟ್ಟಿನಲ್ಲಿ ಒದಗಿಸಲಾದ ಮೊಬಲಗಿಗಿಂತ ಹೆಚ್ಚಿನ ಖರ್ಚನ್ನು ವಹಿಸಬೇಕಾಗಿರುವಲ್ಲಿ ಅಥವಾ ಜರೂರು ಸಂದರ್ಭದಲ್ಲಿ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೊಳಪಟ್ಟು ವೆಚ್ಚವನ್ನು ವಹಿಸಬಹುದು. ಅಂಥ ಹೆಚ್ಚಿನ ವೆಚ್ಚಕ್ಕೆ ಸಂಬಂಧಿಸಿದಂತೆ, ಬಜೆಟ್ಟಿನಲ್ಲಿ ಯಾವುದೇ ಅವಕಾಶವನ್ನು ಮಾಡಿಲ್ಲದಿದ್ದರೆ, ವಿದ್ಯಾ ವಿಷಯಕ ಪರಿಷತ್ತಿಗೆ ಅದರ ಮುಂದಿನ ಸಭೆಯಲ್ಲಿ ವರದಿಯನ್ನು ಮಾಡತಕ್ಕದ್ದು.

(3) ವಿಶ್ವವಿದ್ಯಾನಿಲಯದ ಬಜೆಟ್ ಅಂದಾಜನ್ನು, ತನ್ನ ಸಂಪನ್ಮೂಲಗಳ ಸಂಗ್ರಹಣೆ ಮಾಡುವುದೂ ಒಳಗೊಂಡಂತೆ ರಾಜ್ಯ ಸರ್ಕಾರ ಮತ್ತು ಇತರ ಮೂಲಗಳಿಲಂದ ನಿರೀಕ್ಷಿಸಲಾದ ಅನುದಾನಗಳನ್ನು ಗಮನದಲ್ಲಿಟ್ಟು ತಯಾರಿಸತಕ್ಕದ್ದು. ಆದಾಗ್ಯೂ ಪೂರಕ ಬಜೆಟನ್ನು ಹೆಚ್ಚಿನ ಅನುದಾನಗಳ ನಿರೀಕ್ಷೆಯಿಂದ ಅಕ್ಟೋಬರ್‌ನಲ್ಲಿ ಸಿಂಡಿಕೇಟಿನ ಮುಂದೆ ಇಡಬಹುದು, ಆದರೆ ಈ ಬಗ್ಗೆ ಯಾವುದೇ ವೆಚ್ಚವನ್ನು, ಅಂಥ ಹೆಚ್ಚಿನ ಅನುದಾನ ಸ್ವೀಕರಿಸಿದ ಹೊರತು ಭರಿಸತಕ್ಕದ್ದಲ್ಲ.

(4) ವಿಶ್ವವಿದ್ಯಾನಿಲಯವು, ಸರ್ಕಾರದ ಪೂರ್ವಾನುಮೋದನೆಯಿಲ್ಲದೆ, ಮೀಸಲಿಟ್ಟ ನಿಧಿಗಳನ್ನು ಇತರ ಉದ್ದೇಶಗಳಿಗಾಗಿ ಪಲ್ಲಟ ಮಾಡತಕ್ಕದ್ದಲ್ಲ ಅಥವಾ ಅದರ ಸಿಬ್ಬಂದಿ ವರ್ಗದ ವೇತನ ಶ್ರೇಣಿಗಳನ್ನು ಪರಿಷ್ಕರಿಸತಕ್ಕದ್ದಲ್ಲ ಅಥವಾ ರಾಜ್ಯ ಸರ್ಕಾರದಿಂದ ಯಾವುದೇ ಸರಿಸಮಾನ ವಂತಿಕೆಗಳನ್ನು ಒಳಗೊಳ್ಳುವಂಥ ಯಾವುವೇ ಯೋಜನೆಗಳನ್ನು ಅಥವಾ ಪುರಸ್ಕರಣ ಪ್ರಾಧಿಕಾರಿಗಳಿಂದ ಸಹಾಯವು ನಿಂತುಹೋದ ತರುವಾಯ ರಾಜ್ಯ ಸರ್ಕಾರದ ಮೇಲೆ ಆವರ್ತಕ ಹೊಣೆಗಾರಿಕೆಯನ್ನು ವಿಧಿಸುವಂಥ ಯಾವುದೇ ಯೋಜನೆಯನ್ನು ಕಾರ್ಯಗತಗೊಳಿಸತಕ್ಕದ್ದಲ್ಲ:

ಪರಂತು, ವಿಶ್ವವಿದ್ಯಾಲಯದ ಮೇಲೆ ಆವರ್ತಕ ಹೊಣೆಗಾರಿಕೆಯನ್ನು ವಿಧಿಸುವ ಯೋಜನೆ ಅಥವಾ ಕಾರ್ಯಕ್ರಮಕ್ಕೆ, ಆದರೆ, ವಿಶ್ವವಿದ್ಯಾನಿಲಯದ ಅನುದಾನ ಆಯೋಗದಿಂದ, ಕೇಂದ್ರ ಸರ್ಕಾರದಿಂದ ಅಥವಾ ಸಂಸ್ಥೆಗಳಿಂದ ಪ್ರಾಪ್ತವಾದ ಬಡ್ಡಿಯಿಂದ ಅಥವಾ ವಂತಿಗೆಯಿಂದ ಅಥವಾ ದೇಣಿಗೆಗಳಿಂದ ಅಥವಾ ವ್ಯಕ್ತಿಗಳಿಂದ ಅಥವಾ ವೈಯಕ್ತಿಕ ಅಥವಾ ಸಂಸ್ಥೆಗಳಿಂದ ದತ್ತಿಯಾಗಿ ಬಂದ ಮೊಬಲಗಿಗೆ ಪೂರ್ವಾನುಮೋದನೆಯ ಅವಶ್ಯಕತೆ ಇರುವುದಿಲ್ಲ ಮತ್ತು ಅಂಥ ಆವರ್ತಕ ಹೊಣೆಗಾರಿಕೆಯು ರಾಜ್ಯ ಸರ್ಕಾರದ ಮೇಲೆ ಯಾವುದೇ ಹೊರೆಯಾಗುವುದಿಲ್ಲ ಮತ್ತು ಆ ಸಂಬಂಧದ ಸಂಪೂರ್ಣ ವೆಚ್ಚವನ್ನು ವಿಶ್ವವಿದ್ಯಾನಿಲಯದ ನಿಧಿಯಿಂದ ಭರಿಸತಕ್ಕದ್ದು.

**49. ಲೆಕ್ಕಪರಿಶೋಧನೆಗೆ ನಿರ್ದೇಶಿಸಲು ಸರ್ಕಾರದ ಅಧಿಕಾರ.-** (1) ವಿಶ್ವವಿದ್ಯಾನಿಲಯವು ನಿರ್ವಹಿಸುತ್ತಿರುವ ಸಂಸ್ಥೆಗಳೂ ಒಳಗೊಂಡಂತೆ ವಿಶ್ವವಿದ್ಯಾನಿಲಯದ ಲೆಕ್ಕ ಪತ್ರಗಳ ಪರಿಶೋಧನೆ ಅವಶ್ಯವೆಂದು ಭಾವಿಸಿದಾಗಲೆಲ್ಲಾ ಅದು ನಿರ್ದಿಷ್ಟಪಡಿಸಬಹುದಾದಂತೆ ಅಂಥ ಲೆಕ್ಕ ಪರಿಶೋಧಕರಿಂದ ಲೆಕ್ಕ ಪರಿಶೋಧನೆಯಾಗಬೇಕೆಂದು ನಿರ್ದೇಶಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿರತಕ್ಕದ್ದು

(2) ಮಹಾಲೇಖಪಾಲರಿಂದ ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳ ಪರಿಶೋಧನೆಯಾದಾಗ ಮತ್ತು ಆಕ್ಷೇಪಗಳೊಡನೆ ವರದಿಯನ್ನು ಅಥವಾ ಸ್ಪಷ್ಟೀಕರಣಗಳಿಗಾಗಿ

ತಡೆಹಿಡಿದ ಬಾಬುಗಳ ಸಂಬಂಧದಲ್ಲಿ ಹೆಚ್ಚಿನ ಟೀಕೆಟಿಪ್ಪಣಿಗಳು ಅಥವಾ ಷರಾಗಳಿಗಾಗಿ ವಿಶ್ವವಿದ್ಯಾನಿಲಯಕ್ಕೆ ಲಭ್ಯವಾಗುವಂತೆ ಮಾಡತಕ್ಕದ್ದು. ವಿಶ್ವವಿದ್ಯಾನಿಲಯವು ಅಂಥ ವರದಿಯನ್ನು ಸ್ವೀಕರಿಸಿದ ದಿನದಿಂದ ಮೂವತ್ತು ದಿನಗಳ ಒಳಗಾಗಿ ತನ್ನ ಟೀಕೆಟಿಪ್ಪಣಿಗಳನ್ನು ಅಥವಾ ಷರಾಗಳನ್ನು ರಾಜ್ಯ ಸರ್ಕಾರದ ಮೂಲಕ ಮಹಾಲೇಖಪಾಲರಿಗೆ ಕಳುಹಿಸತಕ್ಕದ್ದು.

**50. ವಾರ್ಷಿಕ ವರದಿ.-** (1) ಸಿಂಡಿಕೇಟು, ಪ್ರತಿ ಹಣಕಾಸು ವರ್ಷಕ್ಕೆ, ವಿಶ್ವವಿದ್ಯಾನಿಲಯದ ಚಟುವಟಿಕೆಗಳು, ಗುರಿ ಮತ್ತು ಸಾಧನೆಗಳನ್ನು ಸ್ಪಷ್ಟವಾಗಿ ವಿವರಿಸುವ ಎಲ್ಲಾ ವಿವರಗಳನ್ನು ಒಳಗೊಂಡ ಒಂದು ವಾರ್ಷಿಕ ವರದಿಯನ್ನು ತಯಾರಿಸತಕ್ಕದ್ದು ಮತ್ತು ಜೂನ್ 30ನೇ ದಿನಾಂಕದೊಳಗೆ ವಿದ್ಯಾ ವಿಷಯಕ ಪರಿಷತ್ತಿಗೆ ಸಲ್ಲಿಸತಕ್ಕದ್ದು. ವಿದ್ಯಾ ವಿಷಯಕ ಪರಿಷತ್ತು ಅದರ ಮೇಲೆ ಗೊತ್ತುವಳಿಯನ್ನು ಅಂಗೀಕರಿಸಬಹುದು ಮತ್ತು ಅದರ ಪಾಲನೆಗಾಗಿ ವಾರ್ಷಿಕ ವರದಿಯನ್ನು ಸಿಂಡಿಕೇಟಿಗೆ ಹಿಂದಿರುಗಿಸತಕ್ಕದ್ದು. ಸಿಂಡಿಕೇಟು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು. ಅದರ ಮೇಲೆ ಕೈಗೊಂಡ ಕ್ರಮದ ಬಗ್ಗೆ ವಿದ್ಯಾ ವಿಷಯಕ ಪರಿಷತ್ತಿಗೆ, ಶೀಘ್ರದಲ್ಲಿ ಬರುವ ಅದರ ಮುಂಬರುವ ಸಭೆಯಲ್ಲಿ ತಿಳಿಸತಕ್ಕದ್ದು.

(2) ವಿದ್ಯಾ ವಿಷಯಕ ಪರಿಷತ್ತಿನ ಗೊತ್ತುವಳಿಗಳನ್ನು ಅಳವಡಿಸಿದ ವಾರ್ಷಿಕ ವರದಿಯ ಪ್ರತಿಗಳನ್ನು ಪ್ರತಿ ವರ್ಷದ ಸೆಪ್ಟೆಂಬರ್ 30ನೇ ದಿನಾಂಕಕ್ಕೆ ಮೊದಲು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ರಾಜ್ಯ ಸರ್ಕಾರವು, ಅದನ್ನು ರಾಜ್ಯ ವಿಧಾನಮಂಡಲದ ಎರಡೂ ಸದನಗಳ ಮುಂದೆ, ಅವುಗಳ ಮುಂಬರುವ ಅಧಿವೇಶನದಲ್ಲಿ ಮಂಡಿಸತಕ್ಕದ್ದು.

## ಅಧ್ಯಾಯ - VII

## ಪ್ರಾಧಿಕಾರಗಳಲ್ಲಿ ಖಾಲಿ ಸ್ಥಾನಗಳು

**51. ಪದವನ್ನು ತೆರವುಗೊಳಿಸುವುದು.-** (1) ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಪದನಿಮಿತ್ತ ಸದಸ್ಯರಲ್ಲದ ಯಾರೇ ಸದಸ್ಯರು ತಮ್ಮ ಪದಕ್ಕೆ ರಾಜೀನಾಮೆ ನೀಡಬಹುದು. ಸದಸ್ಯರು ತಮ್ಮ ಹಸ್ತಾಕ್ಷರದಲ್ಲಿ ಬರೆದ ರಾಜೀನಾಮೆ ಪತ್ರವನ್ನು ಕುಲಪತಿಗೆ ಕಳುಹಿಸತಕ್ಕದ್ದು. ಅಂಥ ರಾಜೀನಾಮೆಯನ್ನು ಅಂಗೀಕರಿಸಿದ ಕೂಡಲೇ ಅದು ಜಾರಿಗೆ ಬರತಕ್ಕದ್ದು ಮತ್ತು ಸಂಬಂಧಪಟ್ಟವರಿಗೆ ಅದನ್ನು ತಿಳಿಸತಕ್ಕದ್ದು.

(2) ಒಂದು ನಿರ್ದಿಷ್ಟ ನಿಕಾಯದ ಸದಸ್ಯನ ಅಥವಾ ಅಧ್ಯಾಪಕನ ಅಥವಾ ಒಂದು ನಿರ್ದಿಷ್ಟ ನೇಮಕದ ಧಾರಕನೆಂದು ಸ್ಪಷ್ಟವಾಗಿ ತಿಳಿಸಿದ್ದರೆ ಅಂಥ ಧಾರಕನ ಸಾಮರ್ಥ್ಯದಲ್ಲಿ ನಾಮನಿರ್ದೇಶನಗೊಂಡ ವಿಶ್ವವಿದ್ಯಾನಿಲಯದ ಪ್ರಾಧಿಕಾರದ ಅಥವಾ ನಿಕಾಯದ ಯಾರೇ ಸದಸ್ಯನು ನಿರ್ದಿಷ್ಟ ನಿಕಾಯದ ಸದಸ್ಯನಾಗಿ ಅಥವಾ ಅಧ್ಯಾಪಕನಾಗಿ ಅಥವಾ ಆ ನಿರ್ದಿಷ್ಟ ನೇಮಕದ ಧಾರಕನಾಗಿ ಮುಂದುವರಿಯತಕ್ಕದ್ದಲ್ಲ:

ಪರಂತು, ವಯೋನಿವೃತ್ತಿ ಹೊಂದಿದ ನಂತರ ಶೈಕ್ಷಣಿಕ ವರ್ಷದ ಅಂತ್ಯದವರೆಗೂ ಮರು ನೇಮಕಾತಿ ಆಧಾರದ ಮೇಲೆ ಮುಂದುವರಿದಂಥ ಶಿಕ್ಷಕರು ವಯೋನಿವೃತ್ತಿ ನಂತರ ಅಂಥ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯರಾಗಿರುವುದು ನಿಂತುಹೋಗತಕ್ಕದ್ದು.

(3) ವಿಶ್ವ ವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಒಬ್ಬ ಸದಸ್ಯನು, ನೈತಿಕ ಅಧಃಪತನ ಒಳಗೊಂಡ ಯಾವುದೇ ಅಪರಾಧಕ್ಕಾಗಿ ನ್ಯಾಯಾಲಯದಿಂದ ಅಪರಾಧ ನಿರ್ಣೀತವಾದ ಮೇಲೆ, ಅವನು ಸದಸ್ಯನಾಗಿರುವುದು ನಿಂತುಹೋಗತಕ್ಕದ್ದು.

**52. ಖಾಲಿ ಸ್ಥಾನಗಳನ್ನು ಭರ್ತಿ ಮಾಡುವುದು.-** ನಿಧನ, ರಾಜಿನಾಮೆ, ವಜಾ ಅಥವಾ ಅನ್ಯಥಾ ಕಾರಣದಿಂದ ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ನಿಕಾಯದ ಪದನಿಮಿತ್ತ ಸದಸ್ಯರಲ್ಲದ ಸದಸ್ಯರ ಪದದಲ್ಲಿ ಉಂಟಾದ ಎಲ್ಲಾ ಖಾಲಿಸ್ಥಾನಗಳನ್ನು, ಖಾಲಿಯಾದ ಸ್ಥಾನದ ಸದಸ್ಯನನ್ನು ನಾಮನಿರ್ದೇಶನ ಮಾಡಿದ ವ್ಯಕ್ತಿ ಅಥವಾ ನಿಕಾಯದಿಂದ ಆದಷ್ಟು ಶೀಘ್ರವಾಗಿ ಭರ್ತಿ ಮಾಡತಕ್ಕದ್ದು ಮತ್ತು ಹಾಗೆ ನಾಮನಿರ್ದೇಶನಗೊಂಡ ವ್ಯಕ್ತಿಯು, ಅಂಥ ಪ್ರಾಧಿಕಾರ ಅಥವಾ ನಿಕಾಯದಲ್ಲಿ ಯಾವ ಸದಸ್ಯನ ಸ್ಥಾನಕ್ಕೆ ನಾಮನಿರ್ದೇಶನ ಗೊಂಡಿರುವನೋ ಅಂಥ ಸದಸ್ಯನು ಆ ಪದದಲ್ಲಿ ಮುಂದುವರಿಯುತ್ತಿದ್ದಿರಬಹುದಾದಂಥ ಉಳಿದ ಅವಧಿಗೆ ಸದಸ್ಯನಾಗಿರತಕ್ಕದ್ದು:

ಪರಂತು, ಮೇಲೆ ಹೇಳಿದ ರೀತಿಯಲ್ಲಿ ಯಾವೊಬ್ಬ ವ್ಯಕ್ತಿಯನ್ನು ನಾಮನಿರ್ದೇಶನವನ್ನು ಮಾಡಿ ಯಾವುದೇ ಅಂಥ ಖಾಲಿ ಸ್ಥಾನವನ್ನು ಭರ್ತಿ ಮಾಡುವವರೆಗೆ ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅಂಥ ಖಾಲಿ ಸ್ಥಾನದ ಭರ್ತಿಗೆ ಅರ್ಹನಾದಂಥ ವ್ಯಕ್ತಿಯನ್ನು ನಾಮನಿರ್ದೇಶನ ಮಾಡುವ ವ್ಯಕ್ತಿ ಅಥವ ನಿಕಾಯವು, ನಾಮನಿರ್ದೇಶನ ಮಾಡುವ ಮೂಲಕ ಆ ಖಾಲಿ ಸ್ಥಾನವನ್ನು ಭರ್ತಿ ಮಾಡಬಹುದು ಮತ್ತು ಹಾಗೆ ನಾಮನಿರ್ದೇಶನಗೊಂಡ ವ್ಯಕ್ತಿಯು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಬೇರೊಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡುವವರೆಗೆ ಅಂಥ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯನಾಗಿ ಪದಧಾರಣ ಮಾಡತಕ್ಕದ್ದು.

## ಅಧ್ಯಾಯ - VIII

## ವಿಶ್ವವಿದ್ಯಾನಿಲಯದ ಅಧ್ಯಾಪಕರು ಮತ್ತು ಇತರ ನೌಕರರ ನೇಮಕಾತಿ

**53. ಅಧ್ಯಾಪಕರ ಮತ್ತು ಗ್ರಂಥಪಾಲರ ನೇಮಕಾತಿ.-** (1) ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರು ಮತ್ತು ಗ್ರಂಥಪಾಲರಾಗಿ ನೇಮಕ ಮಾಡಿಕೊಳ್ಳಲು ವ್ಯಕ್ತಿಗಳ ಆಯ್ಕೆಗಾಗಿ ಒಂದು ನೇಮಕಾತಿ ಮಂಡಳಿ ಇರತಕ್ಕದ್ದು.

(2) ಅಂಥ ಪ್ರತಿಯೊಂದು ಆಯ್ಕೆ ಮಂಡಳಿಯು,-

(ಎ) ಪ್ರಾಧ್ಯಾಪಕರು, ರೀಡರುಗಳು, ಸಹಾಯಕ ಪ್ರಾಧ್ಯಾಪಕರು ಮತ್ತು ಗ್ರಂಥಪಾಲರ ಆಯ್ಕೆಗಾಗಿ ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(i) ಕುಲಪತಿ - ಪದನಿಮಿತ್ತ ಅಧ್ಯಕ್ಷರು

(ii) ಪ್ರಾಧ್ಯಾಪಕರಾಗಿದ್ದರೆ, ಸಂಬಂಧಪಟ್ಟ ಇಲಾಖಾ ಪರಿಷತ್ತಿನ ಅಧ್ಯಕ್ಷರು ಮತ್ತು ಅವರು ಪ್ರಾಧ್ಯಾಪಕರಾಗಿರದಿದ್ದರೆ ಅದೇ ವಿಭಾಗದಿಂದ ಒಬ್ಬ ಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರು ಇರದಿದ್ದರೆ ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇಲೆ ಕುಲಾಧಿಪತಿಯವರು ನಾಮನಿರ್ದೇಶನ ಮಾಡಿದಂಥ ರಾಜ್ಯದಲ್ಲಿನ ಯಾವುದೇ ಇತರ ವಿಶ್ವವಿದ್ಯಾನಿಲಯದಿಂದ ಅದೇ ವಿಭಾಗದ ಒಬ್ಬ ಪ್ರಾಧ್ಯಾಪಕರು:

ಪರಂತು, ರಾಜ್ಯದಲ್ಲಿನ ಯಾವುದೇ ವಿಶ್ವವಿದ್ಯಾನಿಲಯಗಳಲ್ಲಿ ಅಂಥ ಪ್ರಾಧ್ಯಾಪಕರು ಲಭ್ಯವಿರದಿದ್ದರೆ, ರಾಜ್ಯದೊಳಗಿನ ಕೇಂದ್ರ ಸಂಸ್ಥೆಯ ಅಥವಾ ಯಾವುದೇ ಇತರ ರಾಜ್ಯದ ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ವಿಭಾಗದಲ್ಲಿನ ಅಂಥ ಪ್ರಾಧ್ಯಾಪಕರೊಬ್ಬರನ್ನು ನಾಮನಿರ್ದೇಶಿಸತಕ್ಕದ್ದು.

(iii) ರಾಜ್ಯದ ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಅಥವಾ ರಾಜ್ಯ ಸರ್ಕಾರದಿಂದ ಮನ್ನಣೆ ಪಡೆದ ಯಾವುದೇ ಇತರ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳಿಂದ ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇಲೆ ಕುಲಾಧಿಪತಿಯವರು ನಾಮನಿರ್ದೇಶನ ಮಾಡುವ ನಾಲ್ವರು ತಜ್ಞರು. ಇವರಲ್ಲಿ ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿದ ಒಬ್ಬ ವ್ಯಕ್ತಿ ಮತ್ತು ಇತರೆ ಹಿಂದುಳಿದ ವರ್ಗಕ್ಕೆ ಸೇರಿದ ಮತ್ತೊಬ್ಬ ವ್ಯಕ್ತಿ ಇರತಕ್ಕದ್ದು:

ಪರಂತು, ರಾಜ್ಯದಲ್ಲಿನ ಯಾವುವೇ ವಿಶ್ವವಿದ್ಯಾನಿಲಯಗಳಲ್ಲಿ ಅಂಥ ವ್ಯಕ್ತಿಗಳು ಲಭ್ಯವಿರದಿದ್ದರೆ ಭಾರತದಲ್ಲಿನ ಯಾವುದೇ ಇತರೇ ವಿಶ್ವವಿದ್ಯಾನಿಲಯಗಳಲ್ಲಿ ಸೇವೆಸಲ್ಲಿಸುವ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡತಕ್ಕದ್ದು.

(ಬಿ) ಉಪನ್ಯಾಸಕರುಗಳ ಹುದ್ದೆಯ ಆಯ್ಕೆಗಾಗಿ ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(i) ಕುಲಪತಿ- ಪದನಿಮಿತ್ತ ಅಧ್ಯಕ್ಷರು.

(ii) ವಿಶ್ವವಿದ್ಯಾನಿಲಯ ಅನುದಾನ ಆಯೋಗದ ಪಟ್ಟಿಯಿಂದ ರಾಜ್ಯಸರ್ಕಾರವು ನಾಮನಿರ್ದೇಶಿಸುವಂಥ ಮೂವರು ತಜ್ಞರು, ಇವರಲ್ಲಿ ಜಾತಿಗಳು ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಒಬ್ಬ ವ್ಯಕ್ತಿ ಮತ್ತು ಇತರ ಹಿಂದುಳಿದ ವರ್ಗಕ್ಕೆ ಸೇರಿದ ಮತ್ತೊಬ್ಬ ವ್ಯಕ್ತಿ ಇರತಕ್ಕದ್ದು.

(iii) ಪ್ರಾಧ್ಯಾಪಕರಾಗಿದ್ದರೆ, ಸಂಬಂಧಪಟ್ಟ ಇಲಾಖಾ ಪರಿಷತ್ತಿನ ಅಧ್ಯಕ್ಷರು ಮತ್ತು ಅವರು ಪ್ರಾಧ್ಯಾಪಕರಾಗಿಲ್ಲದಿದ್ದರೆ, ಅದೇ ವಿಭಾಗದ ಒಬ್ಬ ಪ್ರಾಧ್ಯಾಪಕರು, ವಿಭಾಗದಲ್ಲಿ ಪ್ರಾಧ್ಯಾಪಕರು ಇರದಿದ್ದರೆ ರಾಜ್ಯದಲ್ಲಿ ಯಾವುದೇ ಇತರೆ ವಿಶ್ವವಿದ್ಯಾನಿಲಯದ ಅದೇ ವಿಭಾಗದ ರಾಜ್ಯಸರ್ಕಾರದಿಂದ ನಾಮನಿರ್ದೇಶಿಸಲಾಗುವ ಒಬ್ಬರು ಪ್ರಾಧ್ಯಾಪಕರು ಮತ್ತು ರಾಜ್ಯದಲ್ಲಿ ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಅಂಥ ಪ್ರಾಧ್ಯಾಪಕರು ಲಭ್ಯವಿರದಿದ್ದರೆ, ರಾಜ್ಯದೊಳಗಿನ ಕೇಂದ್ರ ಸಂಸ್ಥೆಯ ಅಥವಾ ಯಾವುದೇ ರಾಜ್ಯದ ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ಇಲಾಖೆಯ ರಾಜ್ಯಸರ್ಕಾರವು ನಾಮನಿರ್ದೇಶಿಸುವ ಒಬ್ಬರು ಪ್ರಾಧ್ಯಾಪಕರು.

(iv) ರಾಜ್ಯಸರ್ಕಾರದ ಶಿಫಾರಸ್ಸಿನ ಮೇಲೆ ಕುಲಾಧಿಪತಿಯವರಿಂದ ನಾಮನಿರ್ದೇಶಿಸಲಾಗುವ ರಾಜ್ಯದಲ್ಲಿನ ಯಾವುದೇ ಇತರ ವಿಶ್ವವಿದ್ಯಾನಿಲಯದಿಂದ ಒಬ್ಬ ಪ್ರಾಧ್ಯಾಪಕರು.

(3) ರಿಜಿಸ್ಟ್ರಾರ್ ಅವರು ಮಂಡಳಿಯ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

(4) ಆಯ್ಕೆಯ ಮೂಲಕ ಭರ್ತಿ ಮಾಡಬೇಕಾದ ಪ್ರಾಧ್ಯಾಪಕ, ಸಹಾಯಕ ಪ್ರಾಧ್ಯಾಪಕ, ಗ್ರಂಥಪಾಲ, ರೀಡರ್ ಅಥವಾ ಉಪನ್ಯಾಸಕರ ಪ್ರತಿಯೊಂದು ಹುದ್ದೆಯನ್ನು, ಕನಿಷ್ಠ ಮತ್ತು ಇತರ ವಿದ್ಯಾರ್ಹತೆಗಳು, ಅನುಭವ, ವೇತನಶ್ರೇಣಿ, ಹುದ್ದೆಗಳ ಸಂಖ್ಯೆ, ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಖಾಲಿ ಸ್ಥಾನಗಳನ್ನು ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ವರ್ಗೀಕರಣ, ಇವುಗಳೊಂದಿಗೆ ವ್ಯಾಪಕವಾಗಿ ಜಾಹಿರಾತು ಮಾಡತಕ್ಕದ್ದು:

ಪರಂತು, ಈಗಾಗಲೇ ವಿಶ್ವವಿದ್ಯಾನಿಲಯದ ಸೇವೆಗಳಲ್ಲಿರುವ, ಕನಿಷ್ಠ ವಿದ್ಯಾರ್ಹತೆ ಹೊಂದಿರುವ ಮತ್ತು ಜಾಹೀರಾತುಗಳಲ್ಲಿ ನಿರ್ದಿಷ್ಟಪಡಿಸಿರುವ ಇತರ ಅಗತ್ಯತೆಗಳನ್ನು ಪೂರೈಸಿರುವಂಥ ಅಧ್ಯಾಪಕರನ್ನು ಕೂಡ ಸಂದರ್ಶನಕ್ಕೆ ಕರೆಯತಕ್ಕದ್ದು ಮತ್ತು ಅವರ ಪ್ರಕರಣಗಳನ್ನು ಇತರ ಅರ್ಜಿದಾರರಿಗೆ ಸಮಾನವಾಗಿ ಪರಿಗಣಿಸತಕ್ಕದ್ದು.

(5) ಮಂಡಳಿಯ ಸಭೆಗೆ ಕೋರಂ ನಾಲ್ಕು ಆಗಿರತಕ್ಕದ್ದು, ಅವರ ಪೈಕಿ ಪ್ರಾಧ್ಯಾಪಕರುಗಳ, ಸಹಾಯಕ ಪ್ರಾಧ್ಯಾಪಕರ, ಗ್ರಂಥಪಾಲರ ಮತ್ತು ರೀಡರ್‌ಗಳ ಹುದ್ದೆಗಳ ಆಯ್ಕೆಯ ಸಂದರ್ಭದಲ್ಲಿ ಕನಿಷ್ಟಪಕ್ಷ ಇಬ್ಬರು ತಜ್ಞರಿರತಕ್ಕದ್ದು ಮತ್ತು ಇತರ ಹುದ್ದೆಗಳ ಆಯ್ಕೆಯ ಸಂದರ್ಭದಲ್ಲಿ ಕನಿಷ್ಟ ಪಕ್ಷ ಒಬ್ಬ ತಜ್ಞರು ಇರತಕ್ಕದ್ದು.

(6) ಮಂಡಳಿಯು ಸಂದರ್ಶನವನ್ನು ನಡೆಸತಕ್ಕದ್ದು ಜಾಹಿರಾತು ಮಾಡಿದ ಅರ್ಹತೆಗಳನ್ನು ಹೊಂದಿರುವುದರ ಮತ್ತು ಸಂದರ್ಶನದಲ್ಲಿ ನಿರ್ವಹಣೆಯ ಅನುಸಾರವಾಗಿ

ಪ್ರತಿಯೊಬ್ಬ ಅಭ್ಯರ್ಥಿಯ ಅರ್ಹತೆಯನ್ನು ನಿರ್ಣಯಿಸತಕ್ಕದ್ದು ಸಂದರ್ಶನದ ರೀತಿಯು ಪರಿನಿಯಮಗಳು ನಿಯಮಿಸಿದಂತೆ ಇರತಕ್ಕದ್ದು;

(7) ಮಂಡಳಿಯು ಆಯ್ಕೆಯಾದ ವ್ಯಕ್ತಿಗಳ ಪಟ್ಟಿಯನ್ನು ತಯಾರಿಸತಕ್ಕದ್ದು ಮತ್ತು ಅವರು ಅರ್ಹತಾದಾಯಕ ಪರೀಕ್ಷೆಗಳಲ್ಲಿ ಪಡೆದ ಅಂಕಗಳ ಶೇಕಡವಾರಿನ, ಹೆಚ್ಚಿನ ವಿದ್ಯಾರ್ಹತೆಗಾಗಿ ನೀಡಲಾದ ವೈಟೇಜಿನ ಮತ್ತು ಸಂದರ್ಶನದಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ನಿರ್ಧರಿಸಲಾದಂತೆ ಆದ್ಯತಾನುಕ್ರಮದಲ್ಲಿ ನಮೂದಿಸತಕ್ಕದ್ದು. ಆಯ್ಕೆ ಪಟ್ಟಿಯನ್ನು ಸಿಂಡಿಕೇಟಿಗೆ ಕಳುಹಿಸತಕ್ಕದ್ದು, ನಂತರ ಸಿಂಡಿಕೇಟ್ ಅದನ್ನು ಪರಿಗಣಿಸಿ ಅನುಮೋದಿಸತಕ್ಕದ್ದು. ನಂತರ ಸಿಂಡಿಕೇಟ್ ಆಯ್ಕೆ ಪಟ್ಟಿಯನ್ನು ಕಾರ್ಯಚರಣೆಗೊಳಿಸುವ ಮೂಲಕ ಆಯ್ಕೆಯಾದ ಮತ್ತು ಆದ್ಯತಾನುಕ್ರಮದಲ್ಲಿ ನಮೂದಿಸಲಾದ ಅಭ್ಯರ್ಥಿಗಳ ಪೈಕಿಯಿಂದ ನೇಮಕಾತಿಗಳನ್ನು ಮಾಡತಕ್ಕದ್ದು:

ಪರಂತು, ಸಿಂಡಿಕೇಟ್ ಮತ್ತು ನೇಮಕಾತಿ ಮಂಡಳಿಯ ನಡುವೆ ಅಭಿಪ್ರಾಯ ಭೇದ ಉಂಟಾದ ಸಂದರ್ಭದಲ್ಲಿ ಮತ್ತು ಆಯ್ಕೆ ಪಟ್ಟಿಯು ಅಧಿನಿಯಮದ ಅಥವಾ ಪರಿನಿಯಮಗಳ ಉಪಬಂಧಗಳಿಗೆ ಅಥವಾ ವಿಶ್ವವಿದ್ಯಾನಿಲಯದ ಅನುದಾನ ಆಯೋಗ ಅಥವಾ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಥವಾ ಶಿಕ್ಷಕ ಶಿಕ್ಷಣದ ರಾಷ್ಟ್ರೀಯ ಪರಿಷತ್ತು ಅಥವಾ ಅದೇ ತರಹದ ಶಾಸನ ಬದ್ಧ ಪ್ರಾಧಿಕಾರಗಳು ಕಾಲಕಾಲಕ್ಕೆ ಹೊರಡಿಸಿದ ಮಾರ್ಗದರ್ಶಿ ಸೂತ್ರಗಳಿಗೆ ಅನುಗುಣವಾಗಿಲ್ಲವೆಂದು ಅದು ಅಭಿಪ್ರಾಯಪಟ್ಟರೆ, ಅದು ಹೊಸ ಸಂದರ್ಶನ ಮತ್ತು ಆಯ್ಕೆಗಾಗಿ ವಿಷಯವನ್ನು ಮಂಡಳಿಗಳಿಗೆ ವಾಪಸು ಕಳುಹಿಸತಕ್ಕದ್ದು.

ಮತ್ತು ಪರಂತು, ರಾಜ್ಯಸರ್ಕಾರವು ಮಂಡಳಿ ಮತ್ತು ಸಿಂಡಿಕೇಟ್ ನಡುವೆ ಉಂಟಾದ ಅಭಿಪ್ರಾಯ ಭೇದವನ್ನು ತಾನಾಗಿಯೇ ತಿಳಿದುಕೊಂಡು ನಿರ್ಧರಿಸತಕ್ಕದ್ದು ಮತ್ತು ಅದು ಅಂತಿಮವಾಗಿರತಕ್ಕದ್ದು.

(8) ಉಪ-ಪ್ರಕರಣ (7)ರ ಅಡಿಯಲ್ಲಿ ಪಟ್ಟಿಯನ್ನು ತಯಾರಿಸುವಾಗ ನೇಮಕಾತಿ ಮಂಡಳಿಯು, ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳ ನೇಮಕಾತಿ ಮತ್ತು ಹುದ್ದೆಗಳ ಮೀಸಲಾತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಆದೇಶಗಳನ್ನು ಪಾಲಿಸತಕ್ಕದ್ದು.

(9) ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಹೊಸ ವಿಷಯವನ್ನು ಪ್ರಾರಂಭಿಸಿದಾಗ ಅಥವಾ ಯಾವುದೇ ಹೊಸ ವಿಭಾಗವನ್ನು ತೆರೆದಾಗಲೆಲ್ಲ, ಅಂಥ ವಿಷಯದಲ್ಲಿ ಅಥವಾ ಸಂದರ್ಭಾನುಸಾರ ಅಂಥ ವಿಭಾಗದಲ್ಲಿ ಪ್ರಾಧ್ಯಾಪಕರು, ರೀಡರ್‌ಗಳು ಸಹಾಯಕ ಪ್ರಧ್ಯಾಪಕರು ಮತ್ತು ಉಪನ್ಯಾಸಕರುಗಳ ನೇಮಕವನ್ನು ಈ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಮಾಡತಕ್ಕದ್ದು.

(10) ಹಿಂದಿನ ಉಪಪ್ರಕರಣಗಳಲ್ಲಿ ಏನೇ ಇದ್ದರೂ ಸಿಂಡಿಕೇಟು, ಕುಲಪತಿಯ ಶಿಫಾರಸ್ಸಿನ ಮೇಲೆ ಉನ್ನತ ಶೈಕ್ಷಣಿಕ ಅರ್ಹತೆ ಮತ್ತು ವೃತ್ತಿ ಸಾಧನೆಗಳನ್ನು ಪಡೆದಿರುವ ವ್ಯಕ್ತಿಯನ್ನು

ವಿಶ್ವವಿದ್ಯಾನಿಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕ ಹುದ್ದೆಯನ್ನು ಸ್ವೀಕರಿಸಲು ಪರಸ್ಪರ ಒಪ್ಪಬಹುದಾದ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಆಹ್ವಾನಿಸಲು ಸಕ್ಷಮವಾಗಿರತಕ್ಕದ್ದು, ಒಂದು ನಿಗದಿತ ಅವಧಿಯಲ್ಲಿ ಅಂಥ ಸಂದರ್ಶಕ ಪ್ರಾಧ್ಯಾಪಕರುಗಳು ಹತ್ತಕ್ಕಿಂತ ಹೆಚ್ಚಿಗೆ ಇರತಕ್ಕದ್ದಲ್ಲ.

**54. ಬಡ್ತಿ ಯೋಜನೆಗಳಿಗನುಸಾರ ನೇಮಕಾತಿ.-** (1) ಪ್ರಕರಣ 53 ರಲ್ಲಿ ಏನೇ ಇದ್ದರೂ ಆದರೆ, ಸಂವಿಧಾನದ ಅನುಚ್ಛೇದ 16(4) ಮತ್ತು 16(4ಎ) ಅಡಿಯಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳ ನೇಮಕ ಮತ್ತು ಹುದ್ದೆಗಳಿಗೆ ಸಂಬಂಧಿಸಿದ ಮೀಸಲಾತಿ ಬಗ್ಗೆ ಕಾಲಕಾಲಕ್ಕೆ ಹೊರಡಿಸಲಾದ ರಾಜ್ಯಸರ್ಕಾರದ ನಿಯಮಗಳು ಮತ್ತು ಆದೇಶಗಳಿಗೆ ಒಳಪಟ್ಟು, ಘಟಕ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರಾಧ್ಯಾಪಕರು ಮತ್ತು ರೀಡರುಗಳು, ಪ್ರಾಂಶುಪಾಲರು ಮತ್ತು ಸಹಾಯಕ ಪ್ರಾಧ್ಯಾಪಕರುಗಳ ಹಾಗೂ ಘಟಕ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರಾಂಶುಪಾಲ ದರ್ಜೆ I, ಪ್ರಾಂಶುಪಾಲ ದರ್ಜೆ II, ಉಪನ್ಯಾಸಕ (ಆಯ್ಕೆ ಶ್ರೇಣಿ) ಉಪನ್ಯಾಸಕರ (ಹಿರಿಯ ಶ್ರೇಣಿ) ಹುದ್ದೆಗೆ ನೇಮಕವನ್ನು ಸಿಂಡಿಕೇಟು ವಿಶ್ವವಿದ್ಯಾನಿಲಯ ಅನುದಾನ ಆಯೋಗ ಅಥವಾ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ರೂಪಿಸಿದ ಯೋಜನೆಗಳನ್ನು ಅಳವಡಿಸಿಕೊಳ್ಳಲಾಗಿರುವ ಪರಿನಿಯಮಗಳ ಮೂಲಕ ನಿಯಮಿಸಲಾದಂತೆ ಬಡ್ತಿಗಳಿಗೆ ಸಂಬಂಧಿಸಿದ ಯೋಜನೆಯ ಪ್ರಕಾರ ಮಾಡತಕ್ಕದ್ದು.

(2) ಆಯ್ಕೆಯು ಪರಿನಿಯಮಗಳ ಮೂಲಕ ನಿಯಮಿಸಿದಂತೆ ಮತ್ತು ವಿಶ್ವವಿದ್ಯಾನಿಲಯ ಅನುದಾನ ಆಯೋಗ ಅಥವಾ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ ವಿಧಿ ವಿಧಾನ ಮತ್ತು ಮಾರ್ಗದರ್ಶಿ ಸೂತ್ರಗಳಿಗೊಳಪಟ್ಟು ಇರತಕ್ಕದ್ದು.

**55. ಅರೆಕಾಲಿಕ ಹುದ್ದೆಗಳ ನೇಮಕಾತಿ:-** (1) ವಿಶ್ವವಿದ್ಯಾನಿಲಯದಲ್ಲಿ ಅರೆಕಾಲಿಕ ಉಪನ್ಯಾಸಕರು, ಸಹಾಯಕ ಪ್ರಾಧ್ಯಾಪಕರು, ರೀಡರುಗಳು ಮತ್ತು ಪ್ರಾಧ್ಯಾಪಕರ ನೇಮಕಾತಿಗೆ, ವ್ಯಕ್ತಿಗಳ ಆಯ್ಕೆಗಾಗಿ ಒಂದು ನೇಮಕಾತಿ ಮಂಡಳಿ ಇರತಕ್ಕದ್ದು. ಮಂಡಳಿಯು ಈ ಮುಂದಿನವರುಗಳನ್ನು ಒಳಗೊಂಡಿರತಕ್ಕದ್ದು.

(i) ಕುಲಪತಿ-ಪದನಿಮಿತ್ತ ಅಧ್ಯಕ್ಷರು;

(ii) ಕುಲಾಧಿಪತಿಯವರು ನಾಮನಿರ್ದೇಶಿಸುವ ಇಬ್ಬರು ತಜ್ಞರು;

(iii) ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು;

(iv) ಉನ್ನತ ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಉಪಕಾರ್ಯದರ್ಶಿಯ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಅವರ ನಾಮನಿರ್ದೇಶಿತ;

(v) ರಿಜಿಸ್ಟ್ರಾರ್ - ಇವರು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು;

(vi) ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರು ಅಥವಾ ಉಪನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ಅವರ ನಾಮನಿರ್ದೇಶಿತರು;

(vii) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ನಿರ್ದೇಶಕರು ಅಥವಾ ಉಪನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಅವರ ನಾಮನಿರ್ದೇಶಿತರು;

(viii) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಅಥವಾ ಉಪನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ಅವರ ನಾಮನಿರ್ದೇಶಿತರು.

ಪರಂತು, ಕಾನೂನು ಕಾಲೇಜುಗಳ ಯಾವುದೇ ಹುದ್ದೆಯ ನೇಮಕಾತಿಗೆ ಮಂಡಳಿಯ ಇಬ್ಬರು ತಜ್ಞರಾಗಿ, ಕರ್ನಾಟಕದ ಅಡ್ವೋಕೇಟ್ ಜನರಲ್ ಮತ್ತು ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ, ಇವರು ಇರತಕ್ಕದ್ದು.

(2) ಪ್ರತಿಯೊಂದು ಅರೆಕಾಲಿಕ ಹುದ್ದೆಗೆ ಎಲ್ಲಾ ಅಗತ್ಯ ವಿವರಗಳೊಂದಿಗೆ ವ್ಯಾಪಕ ಜಾಹೀರಾತನ್ನು ನೀಡತಕ್ಕದ್ದು ಮತ್ತು ಅದನ್ನು ಅಭ್ಯರ್ಥಿಗಳನ್ನು ಸಂದರ್ಶಿಸುವ ಮೂಲಕ ಆಯ್ಕೆ ಮಾಡತಕ್ಕದ್ದು;

(3) ಮಂಡಳಿ ಸಭೆಯ ಕೋರಂ ಮೂರು ಇರತಕ್ಕದ್ದು;

(4) ಮಂಡಳಿಯು ಆಯ್ಕೆ ಮಾಡಿದ ವ್ಯಕ್ತಿಗಳ ಪಟ್ಟಿಯನ್ನು ತಯಾರಿಸತಕ್ಕದ್ದು ಮತ್ತು ನೇಮಕ ಮಾಡತಕ್ಕ ಸಿಂಡಿಕೇಟಿಗೆ ಆ ಪಟ್ಟಿಯನ್ನು ಕಳುಹಿಸತಕ್ಕದ್ದು.

(5) ಯಾವುದೇ ಅರೆಕಾಲಿಕ ನೇಮಕವನ್ನು ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಮಾಡತಕ್ಕದ್ದಲ್ಲ.

**56. ತಾತ್ಕಾಲಿಕ ನೇಮಕ.-** (1) 53,54,55, ಮತ್ತು 57ನೇ ಪ್ರಕರಣಗಳಲ್ಲಿ ಏನೇ ಇದ್ದರೂ ಕುಲಪತಿಯವರು ಅಂಥ ಹುದ್ದೆಗಳನ್ನು ತಾತ್ಕಾಲಿಕವಾಗಿಯಾಗಲೀ ಅಥವಾ ಅಂಥ ಹುದ್ದೆಗಳ ನೇಮಕಾತಿಗಳನ್ನಾಗಲೀ 53,54,55, ಮತ್ತು 57ನೇ ಪ್ರಕರಣಗಳ ಪ್ರಕಾರ ಮಾಡಕೂಡದೆಂದು ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಉಪನ್ಯಾಸಕರು ಮತ್ತು ಬೋಧಕೇತರ ಸಿಬ್ಬಂದಿ ಹುದ್ದೆಗಳಿಗೆ ಒಂದು ವರ್ಷಕ್ಕೆ ಹೆಚ್ಚಾಗದಂಥ ಅವಧಿಗೆ ವಿಳಂಬವಿಲ್ಲದೆ ತಾತ್ಕಾಲಿಕ ನೇಮಕಾತಿಗಳನ್ನು ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ನೇಮಕಾತಿಗಳನ್ನು ಮಂಜೂರಾದ ಹುದ್ದೆಗಳಿಗೆ ಮಾತ್ರ ಮತ್ತುಪರಿನಿಯಮಗಳ ಮೂಲಕ ನಿಯಮಿಸಲಾದ ವಿಧಾನದಲ್ಲಿ ಮಾಡತಕ್ಕದ್ದು;

**57. ಬೋಧಕೇತರ, ಲಿಪಿಕ ಮತ್ತು ಇತರೆ ಸಿಬ್ಬಂದಿಯ ನೇಮಕ.-** (1) ವಿಶ್ವವಿದ್ಯಾನಿಲಯದಲ್ಲಿ ಬೋಧಕೇತರ, ಲಿಪಿಕ ಮತ್ತು ಇತರ ಹುದ್ದೆಗಳ ನೇಮಕಾತಿಗೆ ಅಭ್ಯರ್ಥಿಗಳ ಆಯ್ಕೆಗೆ ಒಂದು ನೇಮಕಾತಿ ಮಂಡಳಿಯನ್ನು ರಚಿಸತಕ್ಕದ್ದು.

(2) ಮಂಡಳಿಯು -

(i) ಕುಲಪತಿ-ಪದನಿಮಿತ್ತ ಅಧ್ಯಕ್ಷರು;

(ii) ಉನ್ನತ ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಸರ್ಕಾರದ ಉಪ ಕಾರ್ಯದರ್ಶಿಯ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಅವರ ನಾಮನಿರ್ದೇಶಿತ;

(iii) ಇಲಾಖಾ ಪರಿಷತ್ತಿನ ಅಧ್ಯಕ್ಷರು;

(iv) ಕುಲಪತಿಯವರು ನಾಮನಿರ್ದೇಶಿಸಿದ ಒಬ್ಬ ತಜ್ಞರು;

(v) ರಿಜಿಸ್ಟ್ರಾರ್;

(vi) ಸಮಾಜ ಕಲ್ಯಾಣ ಇಲಾಖೆ ನಿರ್ದೇಶಕರು ಅಥವಾ ಉಪನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ಅವರ ನಾಮನಿರ್ದೇಶಿತರು.

(vii) ಹಿಂದುಳಿದ ವರ್ಗಗಳು ಮತ್ತು ಅಲ್ಪಾಸಂಖ್ಯಾತ ಇಲಾಖೆಯ ನಿರ್ದೇಶಕರು ಅಥವಾ ಉಪನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ, ಅವರ ನಾಮನಿರ್ದೇಶಿತರು.

(viii) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಅಥವಾ ಉಪನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ಅವರ ನಾಮನಿರ್ದೇಶಿತರು.

(3) ಮಂಡಳಿಯು, ನೇರನೇಮಕಾತಿಯ ಖಾಲಿಸ್ಥಾನಗಳ ನೇಮಕಾತಿಗೆ ಅಭ್ಯರ್ಥಿಗಳ ಪಟ್ಟಿಯನ್ನು ಅಭ್ಯರ್ಥಿಗಳು ಅರ್ಹತಾ ಪರೀಕ್ಷೆಯಲ್ಲಿ ಪಡೆದ ಶೇಕಡವಾರು ಅಂಕಗಳು ಮತ್ತು ಸಂದರ್ಶನದಲ್ಲಿ ನೀಡಲಾದ ಅಂಕಗಳ ಆಧಾರದ ಮೇಲೆ ನಿರ್ಧರಿಸಿದಂತೆ ಆಧರಿಸಿ, ಆಯ್ಕೆಗಾಗಿ ಮೆರಿಟ್ ಕ್ರಮದಲ್ಲಿ ಹೆಸರುಗಳನ್ನು ಜೋಡಿಸಿ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು;

(4) (3)ನೇ ಉಪ ಪ್ರಕರಣದ ಅಡಿಯಲ್ಲಿ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸುವಾಗ, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ ನೇಮಕಾತಿಗಳು ಅಥವಾ ಹುದ್ದೆಗಳನ್ನು ಮೀಸಲಿಡುವ ವಿಷಯದಲ್ಲಿ ಕಾಲಕಾಲಕ್ಕೆ ರಾಜ್ಯಸರ್ಕಾರವು ಸಂವಿಧಾನದ 16(4)ನ್ನು ಅನುಚ್ಛೇದದಡಿಯಲ್ಲಿ ಹೊರಡಿಸಬಹುದಾದಂಥ ನಿಯಮಗಳನ್ನು ಅಥವಾ ಆದೇಶಗಳನ್ನು ಮಂಡಲಿಯು ಅನುಸರಿಸತಕ್ಕದ್ದು.

(5) ಹೆಸರುಗಳನ್ನು ಮೆರಿಟ್ ಕ್ರಮದಲ್ಲಿ ಮಂಡಳಿಯು ಸಿದ್ಧಪಡಿಸಿದ ಆಯ್ಕೆ ಪಟ್ಟಿಯನ್ನು ಅನುಸರಿಸುವ ಮೂಲಕ, ಸಿಂಡಿಕೇಟು ಎಲ್ಲಾ ನೇಮಕಾತಿಗಳನ್ನು ಮಾಡತಕ್ಕದ್ದು. ಮಂಡಳಿ ಮತ್ತು ಸಿಂಡಿಕೇಟ್‌ನ ನಡುವೆ ಯಾವುದೇ ಭಿನ್ನಾಭಿಪ್ರಾಯ ಉಂಟಾದರೆ ಆ ವಿಷಯವನ್ನು ಸರ್ಕಾರದ ಶಿಕ್ಷಣ ಇಲಾಖೆಯ ಮೂಲಕ ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು. ಕುಲಾಧಿಪತಿಯವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

(6) ಸಭೆಯ ಕೋರಂ ನಾಲ್ಕು ಆಗಿರತಕ್ಕದ್ದು.

## ಅಧ್ಯಾಯ - IX

## ನೌಕರರ ಅಂತರ - ವಿಶ್ವವಿದ್ಯಾನಿಲಯ ವರ್ಗಾವಣೆ

**58. ನೌಕರರ ವರ್ಗಾವಣೆಗಳು:-** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕರಾರು, ಒಪ್ಪಂದ ಅಥವಾ ಯಾವುದೇ ಇತರ ಕಾನೂನಿನಲ್ಲಿ ಮತ್ತು ವಿಶ್ವವಿದ್ಯಾನಿಲಯದ ನೌಕರರಿಗೆ ಅನ್ವಯವಾಗುವ ಸೇವಾ ಷರತ್ತುಗಳಲ್ಲಿ ಏನೇ ಇದ್ದಾಗ್ಯೂ, ಕುಲಾಧಿಪತಿಯು, ರಾಜ್ಯಸರ್ಕಾರದೊಡನೆ ಸಮಾಲೋಚಿಸಿ, ಆಡಳಿತಾತ್ಮಕ ಕಾರಣಗಳಿಗಾಗಿ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಹುದ್ದೆಯನ್ನು ಧಾರಣ ಮಾಡಿರುವ ಯಾವನೇ ವ್ಯಕ್ತಿಯನ್ನು, ಈ ಅಧಿನಿಯಮದ ತತ್ಕಾಲದಲ್ಲಿ ಜಾರಿಯಲ್ಲಿರುವ ರಾಜ್ಯ ವಿಧಾನಮಂಡಲವು ರಚಿಸಿದ ಯಾವುದೇ ಕಾನೂನಿನ ಅಡಿಯಲ್ಲಿ ಸ್ಥಾಪಿಸಲಾದ ಯಾವುದೇ ಇತರ ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಬಹುದು ಮತ್ತು ಹಾಗೆ ವರ್ಗಾಯಿತನಾದ ವ್ಯಕ್ತಿಯು, ಯಾವ ವಿಶ್ವವಿದ್ಯಾನಿಲಯಕ್ಕೆ ಅವನನ್ನು ವರ್ಗಾಯಿಸಲಾಗಿದೆಯೋ ಆ ವಿಶ್ವವಿದ್ಯಾಲಯಕ್ಕೆ, ವರ್ಗಾವಣೆಯ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸೇವಾ ಷರತ್ತುಗಳೊಂದಿಗೆ ಹೋಗತಕ್ಕದ್ದು. ವರ್ಗಾವಣೆಯಾದ ಮೇಲೆ ಅಂಥ ವ್ಯಕ್ತಿಯು ಅವನು ವರ್ಗಾವಣೆಯಾದ ವಿಶ್ವವಿದ್ಯಾನಿಲಯದ ಸಕ್ಷಮ ಪ್ರಾಧಿಕಾರದಿಂದ ನೇಮಕಗೊಂಡಿರುವುದಾಗಿ ಭಾವಿಸತಕ್ಕದ್ದು:

ಪರಂತು ಹಾಗೆ ವರ್ಗಾಯಿತನಾದ ನೌಕರನು, ತಾನು ಪ್ರಾರಂಭದಲ್ಲಿ ನೇಮಕಗೊಂಡಿದ್ದ ವಿಶ್ವವಿದ್ಯಾನಿಲಯದಲ್ಲಿ ತನ್ನ ಹುದ್ದೆಯ ಧಾರಣಾಧಿಕಾರವನ್ನು ಉಳಿಸಿಕೊಳ್ಳುವ ಅಥವಾ ತಾನು ವರ್ಗಾಯಿತನಾದ ವಿಶ್ವವಿದ್ಯಾನಿಲಯದಲ್ಲಿ ವಿಲೀನಗೊಳ್ಳುವ ಆಯ್ಕೆಯ ಸ್ವಾತಂತ್ರ್ಯವನ್ನು ಹೊಂದಿರತಕ್ಕದ್ದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ನೌಕರರ ಅಂಥ ವರ್ಗಾವಣೆಗೆ ಆದೇಶ ನೀಡುವ ಉದ್ದೇಶಕ್ಕಾಗಿ, ಹಾಗೆ ವರ್ಗಾಯಿಸಲಾದ ನೌಕರರು ಧಾರಣ ಮಾಡಿದ್ದ ಹುದ್ದೆಗಳ ಸಂಬಂಧದಲ್ಲಿ ಕುಲಾಧಿಪತಿಯವರನ್ನು ನೇಮಕ ಪ್ರಾಧಿಕಾರ ಎಂದು ಭಾವಿಸತಕ್ಕದ್ದು.

(3) ಹಾಗೆ ವರ್ಗಾವಣೆಯಾದ ನೌಕರರು, ರಾಜ್ಯ ಸಿವಿಲ್ ಸೇವೆಗಳ ಸಂವಾದಿ ಹುದ್ದೆಗಳಿಗೆ ಅನ್ವಯವಾಗುವ ಶ್ರೇಣಿಗಳಲ್ಲಿ ಅನುಮತಿಸಬಹುದಾದ ಪ್ರಯಾಣ ಭತ್ಯೆ, ವರ್ಗಾವಣೆ ಅನುದಾನಗಳು ಮತ್ತು ಸ್ವಂತ ಸಾಮಗ್ರಿಗಳ ಸಾಗಣೆಯ ವೆಚ್ಚಕ್ಕೆ ಅರ್ಹರಾಗಿರತಕ್ಕದ್ದು.

(4) ಸಾರ್ವಜನಿಕ ಹಿತಾಸಕ್ತಿಯಿಂದ ಹಾಗೆ ವರ್ಗಾವಣೆ ಮಾಡಲಾದ ಮತ್ತು ಅವನು ನೇಮಕಗೊಂಡ ವಿಶ್ವವಿದ್ಯಾನಿಲಯದಲ್ಲಿ ತನ್ನ ಧಾರಣಾಧಿಕಾರವನ್ನು ಉಳಿಸಿಕೊಳ್ಳಲು ಆಯ್ಕೆ ಮಾಡಿಕೊಳ್ಳದ ಒಬ್ಬ ನೌಕರನ ಜ್ಯೇಷ್ಠತೆಯನ್ನು ಆಯಾ ಉದ್ಯೋಗಿ ವೃಂದ ಅಥವಾ ಹುದ್ದೆಯಲ್ಲಿ ಅವನ ಪ್ರಾರಂಭಿಕ ನೇಮಕಾತಿಯ ದಿನಾಂಕಕ್ಕೆ ಸಂಬಂಧಿಸಿದಂತೆ ನಿರ್ಧರಿಸತಕ್ಕದ್ದು.

## ಅಧ್ಯಾಯ - X

## ಕಾಲೇಜುಗಳ ಸಂಯೋಜನೆ ಮತ್ತು ಸಂಸ್ಥೆಗಳಿಗೆ ಮನ್ನಣೆ

**59. ಕಾಲೇಜುಗಳ ಸಂಯೋಜನೆ:-** (1) ವಿಶ್ವವಿದ್ಯಾನಿಲಯದ ಪ್ರದೇಶದಲ್ಲಿರುವ ಕಾಲೇಜುಗಳನ್ನು ಈ ಪ್ರಕರಣದಲ್ಲಿ ನಿರ್ದಿಷ್ಟ ಪಡಿಸಿದ ಷರತ್ತುಗಳನ್ನು ಪೂರೈಸಿದ ತರುವಾಯ, ರಾಜ್ಯಸರ್ಕಾರವು ಮಾಡಿದ ಶಿಫಾರಸುಗಳ ಮೇಲೆ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಾಗಿ ಸಂಯೋಜಿಸತಕ್ಕದ್ದು.

(2) ರಿಜಿಸ್ಟ್ರಾರನು, ಹೊಸ ಕಾಲೇಜುಗಳ ಸಂಯೋಜನೆಯ ಬಗ್ಗೆ ಅಸ್ತಿತ್ವದಲ್ಲಿರುವ ಸಂಯೋಜಿತ ಕಾಲೇಜುಗಳಲ್ಲಿ ಹೊಸ ವ್ಯಾಸಂಗ ಕ್ರಮಗಳು, ಸಂಯೋಜಿತ ಕಾಲೇಜುಗಳಲ್ಲಿ ಹೊಸ ವಿಷಯಗಳು ಮತ್ತು ಮಂಜೂರಾದ ಪ್ರವೇಶಾವಕಾಶದಲ್ಲಿನ ಬದಲಾವಣೆಯ ಬಗ್ಗೆ ಅರ್ಜಿಗಳ ಸ್ವೀಕೃತಿಗೆ ಕೊನೆಯ ದಿನಾಂಕವನ್ನು ನಿಗದಿಪಡಿಸಿ, ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ ಕಡೆಯಪಕ್ಷ ಎರಡು ಪ್ರಮುಖ ವೃತ್ತ ಪತ್ರಿಕೆಗಳಲ್ಲಿ ಅಧಿಸೂಚಿಸತಕ್ಕದ್ದು. ಜಾಹೀರಾತು, ವಿಶ್ವವಿದ್ಯಾನಿಲಯವು ಅಗತ್ಯಪಡಿಸಬಹುದಾದ ಅಂಥ ಇತರ ವಿವರಗಳನ್ನು ಒಳಗೊಂಡಿರತಕ್ಕದ್ದು ಮತ್ತು ಕಾಲೇಜುಗಳು ಅಖಿಲಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು, ಬಾರ್‌ಕೌನ್ಸಿಲ್ ಆಫ್ ಇಂಡಿಯ, ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ತು ಅಥವಾ ಅಂಥ ಇತರ ಪ್ರಾಧಿಕಾರಗಳ ಅನುಮೋದನೆ ಅಥವಾ ಮನ್ನಣೆಯನ್ನು ಪಡೆಯಬೇಕೆಂಬುದನ್ನು ಅಗತ್ಯ ಪಡಿಸಿದಲ್ಲಿ, ಆ ಬಗ್ಗೆ ನಿರ್ದಿಷ್ಟ ಸೂಚನೆಯೊಡನೆ ಸಂಯೋಜನೆಗಾಗಿ ಸಲ್ಲಿಸಬೇಕಾದ ಶುಲ್ಕದ ಮೊಬಲಗನ್ನು ಸಹ ನಿರ್ದಿಷ್ಟಪಡಿಸತಕ್ಕದ್ದು.

(3) ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗಾಗಿ ಅರ್ಜಿಸಲ್ಲಿಸುವ ಕಾಲೇಜು, ಈ ಮುಂದಿನವುಗಳಿಗೆ ಸಂಬಂಧಪಟ್ಟಂತೆ ಮಾಹಿತಿಯನ್ನು ಒದಗಿಸುವುದರೊಂದಿಗೆ ಜಾಹೀರಾತಿನಲ್ಲಿ ನಿಗದಿಪಡಿಸಿದ ಕಾಲಮಿತಿಯೊಳಗೆ ಅರ್ಜಿಯನ್ನು ರಿಜಿಸ್ಟ್ರಾರರಿಗೆ ಕಳುಹಿಸತಕ್ಕದ್ದು, ಎಂದರೆ:-

(ಎ) ಆ ಕಾಲೇಜು ಒದಗಿಸಲು ಉದ್ದೇಶಿಸಿದ ಶಿಕ್ಷಣದ ಮಾದರಿಯನ್ನು ನೆರೆ ಹೊರೆಯಲ್ಲಿರುವ ಇತರ ಕಾಲೇಜುಗಳು ಅದೇ ಮಾದರಿಯ ಶಿಕ್ಷಣಕ್ಕೆ ಮಾಡಿರುವ ಪ್ರಸ್ತುತ ಏರ್ಪಾಟನ್ನು ಮತ್ತು ಕಾಲೇಜನ್ನು ಯಾವ ಸ್ಥಳದಲ್ಲಿ ಸ್ಥಾಪಿಸಬೇಕಾಗಿದೆಯೋ ಆ ಸ್ಥಳದ ಸೂಕ್ತತೆಯುನ್ನೂ ಗಮನದಲ್ಲಿಟ್ಟುಕೊಂಡು, ಆ ಕಾಲೇಜು ಸ್ಥಳೀಯ ಅವಶ್ಯಕತೆಯನ್ನು ಪೂರೈಸುತ್ತದೆಂದು;

(ಬಿ) ಅದು ಕ್ರಮಬದ್ಧವಾಗಿ ರಚಿಸಲಾದ ಆಡಳಿತ ಮಂಡಲಿಯ ನಿರ್ವಹಣೆಗೆ ಒಳಪಟ್ಟಿರಬೇಕೆಂದು;

(ಸಿ) ಬೋಧಕ ಸಿಬ್ಬಂದಿಯ ಸಂಖ್ಯೆ ಮತ್ತು ಅರ್ಹತೆಗಳು ಮತ್ತು ಅವರ ಪದಾವಧಿಯನ್ನು ನಿಯಂತ್ರಿಸುವ ಷರತ್ತುಗಳು ಆ ಕಾಲೇಜಿನಲ್ಲಿ

ಕೈಗೊಳ್ಳಬೇಕಾದ ಶಿಕ್ಷಣ, ಬೋಧನೆ ಅಥವಾ ತರಬೇತಿಗಳ ವ್ಯಾಸಂಗ ಕ್ರಮಗಳಿಗೆ ತಕ್ಕ ಏರ್ಪಾಟನ್ನು ಮಾಡುವಂಥಾದ್ದಾಗಿದೆ ಎಂದು;

(ಡಿ) ಯಾವ ಕಟ್ಟಡಗಳಲ್ಲಿ ಆ ಕಾಲೇಜು ಇರಬೇಕಾಗಿದೆಯೋ ಆ ಕಟ್ಟಡಗಳು ಸೂಕ್ತವಾಗಿವೆ ಎಂದು ಮತ್ತು ತಂದೆ ತಾಯಿಗಳ ಅಥವಾ ಪಾಲಕರೊಡನೆ ವಾಸವಾಗಿರದೆ ಇರುವ ವಿದ್ಯಾರ್ಥಿಗಳಿಗಾಗಿ ಆ ಕಾಲೇಜಿನಲ್ಲಿ ಅಥವಾ ಆ ಕಾಲೇಜು ಅನುಮೋದಿಸಿದ ವಸತಿಗಳಲ್ಲಿ ನಿವಾಸಕ್ಕಾಗಿ ಮತ್ತು ಮೇಲ್ವಿಚಾರಣೆ ಮತ್ತು ಕಲ್ಯಾಣಕ್ಕಾಗಿ, ಆರ್ಡಿನೆನ್ಸ್‌ಗಳಿಗೆ ಅನುಗುಣವಾಗಿ ಏರ್ಪಾಟು ಮಾಡಲಾಗುವುದೆಂದು;

(ಇ) ಗ್ರಂಥಾಲಯಕ್ಕಾಗಿ ಸೂಕ್ತ ವ್ಯವಸ್ಥೆ ಮಾಡಲಾಗಿದೆ ಅಥವಾ ಮಾಡಲಾಗುವುದೆಂದು;

(ಎಫ್) ಪ್ರಾಯೋಗಿಕ ವಿಜ್ಞಾನದ ಯಾವುದೇ ಶಾಖೆಯಲ್ಲಿ ಸಂಯೋಜನೆಯನ್ನು ಕೋರಿರುವಲ್ಲಿ, ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳಿಗೆ ಅನುಗುಣವಾಗಿ ಸರಿಯಾದ ರೀತಿಯಲ್ಲಿ ಸಜ್ಜುಗೊಳಿಸಿದ ಪ್ರಯೋಗಶಾಲೆ ಅಥವಾ ವಸ್ತು ಸಂಗ್ರಹಾಲಯದಲ್ಲಿ ವ್ಯವಸ್ಥೆಗಳನ್ನು ಆ ವಿಜ್ಞಾನದ ಶಾಖೆಯಲ್ಲಿ ಶಿಕ್ಷಣ ಕೊಡುವುದಕ್ಕಾಗಿ ಮಾಡಲಾಗಿದೆ ಅಥವಾ ಮಾಡಲಾಗುವುದೆಂದು;

(ಜಿ) ಪ್ರಾಂಶುಪಾಲನ ಮತ್ತು ಬೋಧಕ ಸಿಬ್ಬಂದಿಯ ಸದಸ್ಯರ ನಿವಾಸಕ್ಕಾಗಿ ಸಾಧ್ಯವಾದಷ್ಟು ಕಾಲೇಜಿನ ಪರಿಮಿತಿಯಲ್ಲಿ ಅಥವಾ ಅದರ ಹತ್ತಿರ ಅಥವಾ ವಿದ್ಯಾರ್ಥಿಗಳ ನಿವಾಸಕ್ಕಾಗಿ ಒದಗಿಸಿರುವ ಸ್ಥಳದಲ್ಲಿ ವಸತಿಗಾಗಿ ಸೂಕ್ತ ಏರ್ಪಾಟು ಮಾಡತಕ್ಕದ್ದೆಂದು;

(ಎಚ್) ಆ ಕಾಲೇಜಿನ ಹಣಕಾಸು ಸಂಪನ್ಮೂಲಗಳು ಅದರ ನಿರಂತರ ನಿರ್ವಹಣೆ ಮತ್ತು ದಕ್ಷ ಕಾರ್ಯ ನಿರ್ವಹಣೆಗಾಗಿ ತಕ್ಕ ಏರ್ಪಾಟು ಮಾಡುವಂತಹವು ಆಗಿವೆ ಎಂದು; ಮತ್ತು

(ಐ) ವಿದ್ಯಾರ್ಥಿಗಳು ಸಂದಾಯ ಮಾಡಬೇಕಾದ ಫೀಜು ಏನಾದರೂ ಇದ್ದರೆ ಅದನ್ನು ನಿಗದಿಮಾಡುವ ನಿಯಮಗಳನ್ನು ರಚಿಸಲಾಗಿದೆ ಅಥವಾ ರಚಿಸಲಾಗುತ್ತದೆ ಎಂದು

-ಮನದಟ್ಟು ಮಾಡಿಕೊಡತಕ್ಕದ್ದು.

(4) ಹೊಸ ಕಾಲೇಜುಗಳಿಗೆ ಸಂಯೋಜನೆಯ ಅರ್ಜಿಗಳನ್ನು ವ್ಯಕ್ತಿಗಳಿಂದ ಅಂಗೀಕರಿಸತಕ್ಕದ್ದಲ್ಲ, ಆದರೆ ರಾಜ್ಯಸರ್ಕಾರದ ನೆರವು ಇಲ್ಲದೆಯೇ ಕಾಲೇಜುಗಳನ್ನು ನಡೆಸಲು ಸಾಧ್ಯವಾಗುವಂತೆ ಹಣಕಾಸು ಪರಿಸ್ಥಿತಿಯನ್ನು ಹೊಂದಿರುವ, ನೋಂದಾಯಿತ ಸಂಘ ಅಥವಾ ನೋಂದಾಯಿತ ಸಾರ್ವಜನಿಕ ನ್ಯಾಸದಿಂದ ಮಾತ್ರವೇ ಅಂಗೀಕರಿಸತಕ್ಕದ್ದು.

(5) ಅರ್ಜಿಯು, ಇದರ ಜೊತೆಗೆ, ಕಾಲೇಜನ್ನು ಸಂಯೋಜಿಸಿದ ನಂತರ ರಾಜ್ಯಸರ್ಕಾರ ಮತ್ತು ವಿಶ್ವವಿದ್ಯಾನಿಲಯದ ಪೂರ್ವಾನುಮೋದನೆ ಇಲ್ಲದೆ ವ್ಯವಸ್ಥಾಪನೆಯಲ್ಲಿ ಯಾವುದೇ ವರ್ಗಾವಣೆ ಅಥವಾ ಕಾಲೇಜಿನ ಹೆಸರಿನಲ್ಲಿ ಅಥವಾ ಕಾರ್ಯರೀತಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲವೆಂಬ ಬಗ್ಗೆ ಒಂದು ಮುಚ್ಚಳಿಕೆಯನ್ನು ಒಳಗೊಂಡಿರತಕ್ಕದ್ದು.

(6) (2)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಅದನ್ನು ಪರಿಶೀಲನೆಗಾಗಿ ಸಿಂಡಿಕೇಟಿನ ಮುಂದೆ ಇಡತಕ್ಕದ್ದು. ಸಿಂಡಿಕೇಟು ಸಂಯೋಜನೆಯ ಪ್ರತಿಯೊಂದು ಅರ್ಜಿಯನ್ನು ಪರಿಶೀಲಿಸಿದ ತರುವಾಯ ಸ್ಥಳೀಯ ವಿಚಾರಣಾ ಸಮಿತಿಯಿಂದ ಸ್ಥಳೀಯ ವಿಚಾರಣೆಗೆ ನಿರ್ದೇಶನ ನೀಡತಕ್ಕದ್ದು:

ಪರಂತು, ಸ್ಥಳೀಯ ವಿಚಾರಣಾ ಸಮಿತಿಯು, ಅನುಸೂಚಿತ ಜಾತಿಗಳಿಗೆ ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ಕನಿಷ್ಠಪಕ್ಷ ಒಬ್ಬರು ಸದಸ್ಯರನ್ನು ಒಳಗೊಂಡಿರತಕ್ಕದ್ದು.

(7) ಸ್ಥಳೀಯ ವಿಚಾರಣಾ ಸಮಿತಿಯು, ಅದನ್ನು ರಚಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ, ಒಂದು ವರದಿಯನ್ನು ವಿದ್ಯಾ ವಿಷಯಕ ಪರಿಷತ್ತಿಗೆ ಸಲ್ಲಿಸತಕ್ಕದ್ದು.

(8) ವಿದ್ಯಾವಿಷಯಕ ಪರಿಷತ್ತು, ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಸ್ವೀಕರಿಸಿದ ತರುವಾಯ ವರದಿಯಲ್ಲಿ ವಿವರಿಸಿದ ಸಮಿತಿಯ ತೀರ್ಮಾನಗಳನ್ನು ಪರಿಗಣಿಸತಕ್ಕದ್ದು ಮತ್ತು ತನಗೆ ಅವಶ್ಯಕವೆಂದು ಕಂಡುಬರಬಹುದಾದ ಅಂಥ ಹೆಚ್ಚಿನ ವಿಚಾರಣೆಯನ್ನು ಮಾಡತಕ್ಕದ್ದು ಮತ್ತು ಅಂಥ ಕೋರಿಕೆಯ ಮೇಲೆ ತನ್ನ ಅಭಿಪ್ರಾಯವನ್ನು ದಾಖಲು ಮಾಡತಕ್ಕದ್ದು ಮತ್ತು ಅದನ್ನು ಸಿಂಡಿಕೇಟಿಗೆ ಕಳುಹಿಸತಕ್ಕದ್ದು.

(9) ಸಿಂಡಿಕೇಟು, ಸಮಿತಿಯ ವರದಿಯನ್ನು ಮತ್ತು ವಿದ್ಯಾ ವಿಷಯ ಪರಿಷತ್ತಿನ ಗೊತ್ತುವಳಿಯನ್ನು ಪರಿಗಣಿಸತಕ್ಕದ್ದು ಮತ್ತು ಅವಶ್ಯಕವೆಂದು ಭಾವಿಸ ಬಹುದಾದಂತೆ ಅಂಥ ಹೆಚ್ಚಿನ ವಿಚಾರಣೆಯನ್ನು ಮಾಡಿದ ತರುವಾಯ ಮನವಿಯನ್ನು ಪೂರ್ಣವಾಗಿ ಅಥವಾ ಭಾಗಶಃ ಅಂಗೀಕರಿಸಬೇಕೆ ಅಥವಾ ನಿರಾಕರಿಸ ಬೇಕೇ ಎಂಬ ಪ್ರಶ್ನೆಯ ಬಗ್ಗೆ ತನ್ನ ಅಭಿಪ್ರಾಯವನ್ನು ದಾಖಲಿಸತಕ್ಕದ್ದು.

(10) ರಿಜಿಸ್ಟ್ರಾರನು, ಅರ್ಜಿಯನ್ನು ಮತ್ತು ಅದರ ಅಡಕಗಳನ್ನು, ಅನುಬಂಧಗಳನ್ನು, ಸ್ಥಳೀಯ ವಿಚಾರಣಾ ಸಮಿತಿಯ ವರದಿ ಮತ್ತು ವಿದ್ಯಾ ವಿಷಯಕ ಪರಿಷತ್ತಿನ ಹಾಗೂ ಸಿಂಡಿಕೇಟಿನ ಎಲ್ಲ ನಡವಳಿಗಳನ್ನು ಅಂತಿಮ ತೀರ್ಮಾನ ಕೈಗೊಳ್ಳುವುದಕ್ಕಾಗಿ ಮುಂಬರುವ ವರ್ಷದ ಮಾರ್ಚ್ 31ಕ್ಕೆ ಮೊದಲು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(11) ರಾಜ್ಯ ಸರ್ಕಾರವು, ಸ್ಥಳೀಯ ವಿಚಾರಣಾ ಸಮಿತಿಯ, ವಿದ್ಯಾ ವಿಷಯಕ ಪರಿಷತ್ತಿನ ಮತ್ತು ಸಿಂಡಿಕೇಟಿನ ಶಿಫಾರಸ್ಸುಗಳ ಹಿನ್ನೆಲೆಯಲ್ಲಿ ಅಂಥ ಅರ್ಜಿಗಳನ್ನು ಪರಿಗಣಿಸತಕ್ಕದ್ದು ಮತ್ತು ತಾನು ಅವಶ್ಯಕವೆಂದು ಅದಕ್ಕೆ ಕಂಡು ಬರಬಹುದಾದಂತೆ ಅಂಥ ವಿಚಾರಣೆಯ ತರುವಾಯ ಪ್ರವೇಶದಲ್ಲಿ ವ್ಯತ್ಯಾಸಗಳೂ ಸೇರಿದಂತೆ, ಸಂಯೋಜಿಸಲು ಅಥವಾ ಸಂದರ್ಭಾನುಸಾರ

ಸಂಯೋಜನೆಯನ್ನು ಅಥವಾ ಅದರ ಯಾವುದೇ ಭಾಗವನ್ನು ನಿರಾಕರಿಸಲು ವಿಶ್ವವಿದ್ಯಾನಿಲಯಕ್ಕೆ ತನ್ನ ಶಿಫಾರಸುಗಳನ್ನು ಮಾಡತಕ್ಕದ್ದು.

(12) ವಿಶ್ವವಿದ್ಯಾನಿಲಯವು, ರಾಜ್ಯ ಸರ್ಕಾರದ ನಿರ್ದೇಶನಗಳನ್ನು ಸ್ವೀಕರಿಸಿದ ತರುವಾಯ ಅದರಂತೆ ಔಪಚಾರಿಕ ಆದೇಶಗಳನ್ನು ಹೊರಡಿಸತಕ್ಕದ್ದು.

(13) ಆದಾಗ್ಯೂ ಸಂಯೋಜನೆಯ ಮಂಜೂರಾತಿಯು, ಅಖಿಲಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ, ಭಾರತದ ಬಾರ್ ಕೌನ್ಸಿಲಿನ, ಅಧ್ಯಾಪಕರ ಶಿಕ್ಷಣದ ರಾಷ್ಟ್ರೀಯ ಪರಿಷತ್ತು ಅಥವಾ ಅಂಥ ಇತರ ಪ್ರಾಧಿಕಾರಗಳು ಅಥವಾ ಸಂಬಂಧಪಟ್ಟ ನಿಕಾಯಗಳ ಪೂರ್ವಾನುಮೋದನೆಗೆ ಒಳಪಟ್ಟಿರತಕ್ಕದ್ದು ಮತ್ತು ನಿರ್ಧರಿಸಲಾದ ಪ್ರವೇಶಾವಕಾಶ ಸಂಖ್ಯೆಯು, ಅಂಥ ಪ್ರಾಧಿಕಾರಗಳು ಅಥವಾ ನಿಕಾಯಗಳು ಆ ಸಂಖ್ಯೆಯನ್ನು ನಿರ್ದಿಷ್ಟಪಡಿಸಿದ್ದರೆ ಅದನ್ನು ಮೀರತಕ್ಕದ್ದಲ್ಲ.

(14) ಸಂಯೋಜನೆಗಾಗಿ ಅಥವಾ ಪ್ರವೇಶ ಸಂಖ್ಯೆಯನ್ನು ನಿಗದಿಪಡಿಸುವುದಕ್ಕಾಗಿ ಅಥವಾ ಅದರ ಯಾವುದೇ ಭಾಗಕ್ಕಾಗಿ, ಅರ್ಜಿಯನ್ನು ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇಲೆ ವಿಶ್ವವಿದ್ಯಾನಿಲಯವು ಮಂಜೂರ್ಮಾಡಿದ್ದರೆ, ವಿಶ್ವವಿದ್ಯಾನಿಲಯವು, ನಿರ್ದಿಷ್ಟ ಷರತ್ತುಗಳೊಡನೆ ಅಥವಾ ಷರತ್ತುಗಳಿಲ್ಲದೆ, ನಿರ್ದಿಷ್ಟ ಪ್ರವೇಶ ಸಂಖ್ಯೆಯೊಡನೆ ಯಾವ ವ್ಯಾಸಂಗ ವಿಷಯದ ಸಂಬಂಧದಲ್ಲಿ ಮತ್ತು ಯಾವ ಅವಧಿಗಾಗಿ, ಕಾಲೇಜನ್ನು ಅಥವಾ ಕೋರ್ಸನ್ನು ಸಂಯೋಜಿಸಲಾಗಿದೆಯೋ, ಅದರ ಸಂಬಂಧದಲ್ಲಿ ವ್ಯಾಸಂಗಕ್ರಮಗಳನ್ನು ಆದೇಶದಲ್ಲಿ ನಿರ್ದಿಷ್ಟಪಡಿಸತಕ್ಕದ್ದು.

(15) ಅಂಥ ಅರ್ಜಿಯನ್ನು ಅಥವಾ ಅದರ ಯಾವುದೇ ಭಾಗವನ್ನು ರಾಜ್ಯಸರ್ಕಾರವು ಅಥವಾ ವಿಶ್ವವಿದ್ಯಾನಿಲಯವು ತಿರಸ್ಕರಿಸಿದ್ದರೆ, ಅಂಥ ತಿರಸ್ಕರಣೆಯ ಕಾರಣಗಳನ್ನು ತಿಳಿಸತಕ್ಕದ್ದು.

(16) (1)ನೇ ಉಪ-ಪ್ರಕರಣದ ಅಡಿಯಲ್ಲಿ ಮಾಡಿದ ಯಾವುದೇ ಅರ್ಜಿಯನ್ನು (12)ನೇ ಉಪ-ಪ್ರಕರಣದ ಅಡಿಯಲ್ಲಿ ಆದೇಶವನ್ನು ಮಾಡುವುದಕ್ಕೆ ಮೊದಲು ಯಾವುದೇ ಸಮಯದಲ್ಲಿ ಅರ್ಜಿದಾರನು ಹಿಂದಕ್ಕೆ ಪಡೆಯಬಹುದು.

(17) ಪ್ರತಿಯೊಂದು ಶೈಕ್ಷಣಿಕ ವರ್ಷಕ್ಕಾಗಿ, ಪ್ರಸಕ್ತ ಇರುವ ವ್ಯಾಸಂಗ ಕ್ರಮಗಳಿಗಾಗಿ ಮತ್ತು ವ್ಯಾಸಂಗ ಕ್ರಮಗಳನ್ನು ಮುಂದುವರಿಸುವುದಕ್ಕಾಗಿ ಸಂಯೋಜನೆಯನ್ನು ವಿಸ್ತರಿಸುವುದಕ್ಕಾಗಿ, ಹೊಸ ವ್ಯಾಸಂಗ ಕ್ರಮಗಳನ್ನು ಹೊರತುಪಡಿಸಿ ಹೊಸ ಸಂಯೋಜನೆಯ ಮಂಜೂರಾತಿಗಾಗಿ ಅನ್ವಯವಾಗುವ ರೀತಿಯಲ್ಲಿಯೇ, ಸಂಯೋಜನೆಯ ನವೀಕರಣ ಅಥವಾ ಸಂಯೋಜನೆಯ ಮುಂದುವರಿಕೆಗಾಗಿ ವಿದ್ಯಾವಿಷಯಕ ಪರಿಷತ್ತಿನೊಡನೆ ಸಮಾಲೋಚಿಸಿ ಸಿಂಡಿಕೇಟು ಮಂಜೂರಾತಿ ನೀಡಬಹುದು.

(18) ಪ್ರತಿಯೊಂದು ವ್ಯಾಸಂಗ ಕ್ರಮದ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾದ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಯನ್ನು ಸಂದರ್ಭಾನುಸಾರ ಸಂಯೋಜನೆಯನ್ನು ನೀಡುವ ಅಥವಾ

ಸಂಯೋಜನೆಯನ್ನು ಮುಂದುವರೆಸುವ ಆದೇಶದಲ್ಲಿ ಪ್ರತಿಯೊಂದು ಶೈಕ್ಷಣಿಕ ವರ್ಷದ ಪ್ರಾರಂಭಕ್ಕೆ ಸಾಕಷ್ಟು ಮುಂಚೆಯೇ ವಾರ್ಷಿಕ ಆಧಾರದಲ್ಲಿ ವಿಶ್ವವಿದ್ಯಾನಿಲಯವು ನಿರ್ಧರಿಸತಕ್ಕದ್ದು:

ಪರಂತು, ಸಂಯೋಜಿತ ಕಾಲೇಜುಗಳಲ್ಲಿ ಸ್ನಾತಕೋತ್ತರ ಶಿಕ್ಷಣ ಕಾರ್ಯಕ್ರಮಗಳೂ ಸೇರಿದಂತೆ ಇಂಜಿನಿಯರಿಂಗ್, ವಾಸ್ತುಶಿಲ್ಪ ಮತ್ತು ವ್ಯವಸ್ಥಾಪನೆ ಮುಂತಾದ ವೃತ್ತಿಪರ ವ್ಯಾಸಂಗ ಕ್ರಮಗಳ ಸಂದರ್ಭದಲ್ಲಿ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಯನ್ನು ರಾಜ್ಯ ಸರ್ಕಾರವು ನಿರ್ಧರಿಸತಕ್ಕದ್ದು.

**60. ಹೊಸ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಪ್ರವೇಶಕ್ಕೆ ನಿರ್ಬಂಧ.-** (1) ವಿಶ್ವವಿದ್ಯಾನಿಲಯವು, ಹೊಸ ಕಾಲೇಜಿಗೆ ಅಥವಾ ಸಂದರ್ಭಾನುಸಾರ ಪ್ರಸಕ್ತ ಸಂಯೋಜಿತ ಕಾಲೇಜಿನಲ್ಲಿ ಹೊಸ ವ್ಯಾಸಂಗ ಕ್ರಮಕ್ಕೆ ಅಂಥ ವ್ಯಾಸಂಗ ಕ್ರಮದ ಸಂಬಂಧದಲ್ಲಿ ಅಥವಾ ನಿರ್ದಿಷ್ಟ ವ್ಯಾಸಂಗ ಕ್ರಮದ ಬದಲಾವಣೆಗಾಗಿ ಸಂಯೋಜನೆ ನೀಡಿದ್ದ ಹೊರತು, ಯಾವುದೇ ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆ ಕೋರುವ ಹೊಸ ಕಾಲೇಜಿಗೆ ಅಥವಾ ಹೊಸ ವ್ಯಾಸಂಗ ಕ್ರಮಕ್ಕೆ ಅಥವಾ ನಿರ್ದಿಷ್ಟ ಪಡಿಸಿದ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಗಾಗಿ ಸಂಯೋಜನೆ ಕೋರುವ ಪ್ರಸಕ್ತ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ನೀಡತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ಸಂಸ್ಥೆಯ ವಿರುದ್ಧ, ಕರ್ನಾಟಕ ಮಾನ್ಯತೆ ಪಡೆಯದ ಮತ್ತು ಸಂಯೋಜಿತವಾಗಿಲ್ಲದ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳ ಪ್ರವೇಶ ನಿಷೇಧ ಅಧಿನಿಯಮ, 1992ರ (1993ರ ಕರ್ನಾಟಕ ಅಧಿನಿಯಮ, 7) ಉಪಬಂಧಗಳ ಅನುಸಾರವಾಗಿ ಕ್ರಮ ಕೈಗೊಳ್ಳತಕ್ಕದ್ದು.

**61. ಪರೀಕ್ಷೆಗಳಿಗೆ ಹಾಜರಾಗಲು ನಿರ್ಬಂಧ.-** ಪ್ರವೇಶಾವಕಾಶವು ಅಮಾನ್ಯವಾಗಿರುವ ಅಥವಾ ವಿಶ್ವವಿದ್ಯಾನಿಲಯದಿಂದ ಪ್ರವೇಶವು ಅನುಮೋದಿತವಾಗಿಲ್ಲದ ಅಥವಾ ನಿರ್ದಿಷ್ಟಪಡಿಸಲಾದ ವಿದ್ಯಾರ್ಥಿಗಳ ಸಂಖ್ಯೆಗಿಂತ ಹೆಚ್ಚಿಗೆಯಾಗಿ ಕಾಲೇಜಿಗೆ ಅಥವಾ ವ್ಯಾಸಂಗ ಕ್ರಮಕ್ಕೆ ಪ್ರವೇಶ ಪಡೆದಿರುವ ಯಾವೊಬ್ಬ ವಿದ್ಯಾರ್ಥಿಯು, ಕಾಲೇಜು ಅಥವಾ ವಿಶ್ವವಿದ್ಯಾನಿಲಯವು ನಡೆಸುವ ಪರೀಕ್ಷೆಗೆ ಹಾಜರಾಗಲು ಅರ್ಹನಾಗಿರತಕ್ಕದ್ದಲ್ಲ.

**62. ಖಾಯಂ ಸಂಯೋಜನೆ.-** (1) ಐದು ವರ್ಷಗಳಿಗೆ ಕಡಿಮೆ ಇಲ್ಲದ ಅವಧಿಗೆ ನಿರಂತರವಾಗಿ ಸಂಯೋಜನೆಗೊಂಡಿರುವ ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾನಿಲಯವು ನಿರ್ದಿಷ್ಟಪಡಿಸಿದ ಸಂಯೋಜನೆಯ ಎಲ್ಲ ಷರತ್ತುಗಳನ್ನು ಪೂರೈಸಿರುವ ಮತ್ತು ವಿದ್ಯಾ ವಿಷಯದ ಹಾಗೂ ಆಡಳಿತಾತ್ಮಕ ಗುಣಮಟ್ಟಗಳನ್ನು ಹೊಂದಿರುವ ಕಾಲೇಜಿಗೆ ಖಾಯಂ ಸಂಯೋಜನೆಯನ್ನು ಮಂಜೂರು ಮಾಡಬಹುದು.

(2) 59ನೇ ಪ್ರಕರಣದ ಉಪಬಂಧಗಳು, ಯಥೋಚಿತ ವ್ಯತ್ಯಾಸಗಳೊಂದಿಗೆ ಖಾಯಂ ಸಂಯೋಜನೆಯ ಮಂಜೂರಾತಿಗಾಗಿ ಅನ್ವಯವಾಗತಕ್ಕದ್ದು.

(3) ಖಾಯಂ ಆಗಿ ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡ ಕಾಲೇಜು, ಕಾಲಕಾಲಕ್ಕೆ ಆಡಳಿತಾತ್ಮಕವಾಗಿ ಮತ್ತು ಶೈಕ್ಷಣಿಕವಾಗಿ ಅದರ ಪ್ರಕಾರ್ಯಗಳು ಮೂರು ವರ್ಷಗಳ ಅವಧಿಯಲ್ಲಿ ಕೊನೇಪಕ್ಷ ಒಂದು ಸಲವಾದರೂ ವಿಶ್ವವಿದ್ಯಾನಿಲಯದ ಮತ್ತು ರಾಜ್ಯಸರ್ಕಾರದ ಪರಿಶೀಲನೆಗೆ ಒಳಪಟ್ಟಿರತಕ್ಕದ್ದು.

(4) ಪೂರ್ವೋಕ್ತ ಉಪ-ಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ಖಾಯಂ ಆಗಿ ಸಂಯೋಜನೆಗೊಂಡ ಕಾಲೇಜು, (1)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ಷರತ್ತುಗಳನ್ನು ಪೂರೈಸಲು ವಿಫಲವಾಗಿದ್ದಲ್ಲಿ, ಅದರ ಖಾಯಂ ಸಂಯೋಜನೆಯನ್ನು ರದ್ದುಪಡಿಸತಕ್ಕದ್ದು:

ಪರಂತು, ಸಂಬಂಧಪಟ್ಟ ಕಾಲೇಜಿಗೆ ವಿಶ್ವವಿದ್ಯಾನಿಲಯವು ಒಂದು ಅವಕಾಶ ಕೊಟ್ಟ ಹೊರತು ಖಾಯಂ ಸಂಯೋಜನೆಯನ್ನು, ರದ್ದುಗೊಳಿಸತಕ್ಕದ್ದಲ್ಲ:

ಮತ್ತು ಪರಂತು, ಖಾಯಂ ಸಂಯೋಜನೆಯನ್ನು ರದ್ದುಗೊಳಿಸಿದ ತರುವಾಯ ಸಂಬಂಧಪಟ್ಟ ಕಾಲೇಜು, ವಾರ್ಷಿಕ ಆಧಾರದ ಮೇಲೆ ತಾತ್ಕಾಲಿಕ ಸಂಯೋಜನೆಯನ್ನು ಕೋರತಕ್ಕದ್ದು.

**63. ಸಂಯೋಜನೆಯನ್ನು ಹಿಂತೆಗೆದುಕೊಳ್ಳುವುದು.-** (1) ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಪಾಲಿಸಲು ವಿಫಲಗೊಂಡರೆ ಅಥವಾ ಸಂಯೋಜನೆಯ ಯಾವುವೇ ಷರತ್ತುಗಳನ್ನು ಪಾಲಿಸಲು ವಿಫಲಗೊಂಡರೆ ಅಥವಾ ಕಾಲೇಜನ್ನು ಶಿಕ್ಷಣದ ಹಿತಾಸಕ್ತಿಗಳಿಗೆ ಪ್ರತಿಕೂಲವಾಗುವ ರೀತಿಯಲ್ಲಿ ನಡೆಸಿಕೊಂಡು ಬರುತ್ತಿದ್ದರೆ, ಸಂಯೋಜನೆಯ ಮೂಲಕ ಕಾಲೇಜಿಗೆ ಪ್ರದತ್ತವಾದ ಹಕ್ಕುಗಳನ್ನು ಪೂರ್ತಿಯಾಗಿ ಅಥವಾ ಭಾಗಶಃ ಹಿಂತೆಗೆದುಕೊಳ್ಳಬಹುದು ಅಥವಾ ಮಾರ್ಪಾಟು ಮಾಡಬಹುದು.

(2) ಅಂಥ ಹಕ್ಕುಗಳನ್ನು ಹಿಂತೆಗೆದುಕೊಳ್ಳುವುದಕ್ಕೆ ಅಥವಾ ಮಾರ್ಪಾಟು ಮಾಡುವುದಕ್ಕೆ ಸಿಂಡಿಕೇಟಿನಲ್ಲಿ ಮಾತ್ರ ಸೂಚನೆಯನ್ನು ಪ್ರಾರಂಭಿಸತಕ್ಕದ್ದು. ಅಂಥ ಸೂಚನೆಯನ್ನು ಮಂಡಿಸಲು ಉದ್ದೇಶಿಸುವ ಸಿಂಡಿಕೇಟಿನ ಪದನಿಮಿತ್ತ ಸದಸ್ಯನೂ ಒಳಗೊಂಡಂತೆ ಯಾವೊಬ್ಬ ಸದಸ್ಯನು ಯಾವ ಕಾರಣದ ಮೇಲೆ ಅಂಥ ಸೂಚನೆಯನ್ನು ಮಾಡಲಾಗಿದೆಯೇ ಆ ಕಾರಣಗಳನ್ನು ಲಿಖಿತದಲ್ಲಿ ನಿರೂಪಿಸಿ ಒಂದು ನೋಟೀಸನ್ನು ಕೊಡತಕ್ಕದ್ದು.

(3) ಸದರಿ ಸೂಚನೆಯನ್ನು ಪರಿಗಣನೆಗೆ ತೆಗೆದುಕೊಳ್ಳುವುದಕ್ಕೆ ಮೊದಲು ಸಿಂಡಿಕೇಟು, ನೋಟೀಸಿನ ಒಂದು ಪ್ರತಿಯನ್ನು ಲಿಖಿತದಲ್ಲಿನ ನಿರೂಪಣೆಯಲ್ಲಿ ನಿರ್ದಿಷ್ಟ ಪಡಿಸಿದ ಅವಧಿಯೊಳಗೆ ಆ ಕಾಲೇಜಿನ ಪರವಾಗಿ ಲಿಖಿತದಲ್ಲಿ ಸಲ್ಲಿಸಿದ ಯಾವುದೇ ಮನವಿಯನ್ನು ಸಿಂಡಿಕೇಟು ಪರ್ಯಾಲೋಚಿಸುವುದು ಎಂಬ ತಿಳುವಳಿಕೆಯೊಡನೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಗೆ ಕಳುಹಿಸತಕ್ಕದ್ದು;

(4) (3)ನೇ ಉಪ-ಪ್ರಕರಣದಲ್ಲಿ ಹಾಗೆ ನಿರ್ದಿಷ್ಟಪಡಿಸಿದ ಅವಧಿಯನ್ನು, ಅವಶ್ಯವಿದ್ದಲ್ಲಿ, ಸಿಂಡಿಕೇಟು ಯುಕ್ತ ಸಮಯದವರೆಗೆ ವಿಸ್ತರಿಸಬಹುದು;

(5) ಮನವಿಯನ್ನು ಸ್ವೀಕರಿಸಿದ ಮೇಲೆ ಅಥವಾ ಹಿಂದೆ ಹೇಳಲಾದ ಉಪಪ್ರಕರಣಗಳಲ್ಲಿ ಉಲ್ಲೇಖಿಸಲಾದ ಅವಧಿಯು ಮುಗಿದಮೇಲೆ, ಸಿಂಡಿಕೇಟು ಸೂಚನೆಯ ನೋಟೀಸನ್ನು, ಅದರಲ್ಲಿ ತಿಳಿಸಿದ ಕಾರಣಗಳನ್ನು ಮತ್ತು ಮನವಿಯನ್ನು ಪರ್ಯಾಲೋಚಿಸಿದ ತರುವಾಯ ಮತ್ತು ರಚಿಸಲಾದ ಮತ್ತು ಈ ಸಂಬಂಧದಲ್ಲಿ ಅದರಿಂದ ಪ್ರಾಧಿಕೃತವಾದ ಸಮಿತಿಯಿಂದ ಅಂಥ ಪರಿಶೀಲನೆಯನ್ನು ನಡೆಸಿದ ತರುವಾಯ ಅದಕ್ಕೆ ಅವಶ್ಯವೆಂದು ಕಂಡುಬರಬಹುದಾದಂಥ ಪರಿಶೀಲನೆಯನ್ನು ಮತ್ತು ಹೆಚ್ಚಿನ ವಿಚಾರಣೆಯನ್ನು ನಡೆಸಿದ ತರುವಾಯ, ಆ ಬಗೆಗಿನ ಕಾರಣಗಳಿಗೆ ಸಂಬಂಧಿಸಿದಂತೆ ಒಂದು ನಿರ್ಣಯವನ್ನು ಜಾರಿಗೊಳಿಸಬಹುದು ಮತ್ತು ಅದರ ವರದಿಯನ್ನು ವಿದ್ಯಾವಿಷಯಕ ಪರಿಷತ್ತಿಗೆ ಸಲ್ಲಿಸತಕ್ಕದ್ದು;

(6) (5)ನೇ ಉಪ-ಪ್ರಕರಣದ ಅಡಿಯಲ್ಲಿ ವರದಿಯನ್ನು ಸ್ವೀಕರಿಸಿದ ಮೇಲೆ, ವಿದ್ಯಾವಿಷಯಕ ಪರಿಷತ್ತು ಅದಕ್ಕೆ ಅವಶ್ಯವೆಂದು ಕಂಡು ಬರಬಹುದಾದಂಥ ಹೆಚ್ಚಿನ ವಿಚಾರಣೆ ಯಾವುದಾದರೂ ಇದ್ದರೆ ಅದನ್ನು ಮಾಡಿದ ತರುವಾಯ, ಆ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ಅಭಿಲೇಖಿಸತಕ್ಕದ್ದು ಮತ್ತು ಸಿಂಡಿಕೇಟಿಗೆ ವಾಪಸು ಕಳುಹಿಸತಕ್ಕದ್ದು;

(7) ಸಿಂಡಿಕೇಟು, ವಿದ್ಯಾವಿಷಯಕ ಪರಿಷತ್ತಿನ ನಿರ್ಣಯವನ್ನು ಪರ್ಯಾಲೋಚಿಸಿದ ತರುವಾಯ ಸಂಯೋಜನೆಯನ್ನು ಹಿಂತೆಗೆದು ಕೊಳ್ಳಬೇಕೆಂದು ಶಿಫಾರಸ್ಸು ಮಾಡುವ ಅಂತಿಮ ನಿರ್ಣಯವನ್ನು ಜಾರಿಗೊಳಿಸತಕ್ಕದ್ದು. ಅಂಥ ನಿರ್ಣಯವನ್ನು ಸಿಂಡಿಕೇಟಿನ ಸಭೆಯಲ್ಲಿ ಹಾಜರಿದ್ದ ಸದಸ್ಯರ ಮೂರನೇ ಎರಡರಷ್ಟು ಸದಸ್ಯರ ಬೆಂಬಲವನ್ನು ಪಡೆದಿರುವ ಹೊರತು ಅದರಿಂದ ಅಂಗೀಕೃತವಾಗಿರುವುದಾಗಿ ಭಾವಿಸತಕ್ಕದ್ದಲ್ಲ;

(8) ರಿಜಿಸ್ಟ್ರಾರನು ಪ್ರಸ್ತಾವವನ್ನು, ಸೂಚನೆಯ ನೋಟೀಸು, ಕಾಲೇಜಿನ ಉತ್ತರ, ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ನಿರ್ಣಯವೂ ಒಳಗೊಂಡಂತೆ ಎಲ್ಲಾ ದಸ್ತಾವೇಜುಗಳೊಂದಿಗೆ ತೀರ್ಮಾನ ಕೈಗೊಳ್ಳುವುದಕ್ಕಾಗಿ ರಾಜ್ಯಸರ್ಕಾರಕ್ಕೆ ಒಪ್ಪಿಸತಕ್ಕದ್ದು;

(9) ರಾಜ್ಯ ಸರ್ಕಾರವು, ತನಗೆ ಅವಶ್ಯವೆಂದು ಕಂಡುಬರಬಹುದಾದಂಥ ಹೆಚ್ಚಿನ ವಿಚಾರಣೆಯನ್ನು ನಡೆಸಿದ ತರುವಾಯ, ಒಂದು ನಿರ್ದಿಷ್ಟ ಶೈಕ್ಷಣಿಕ ವರ್ಷದಿಂದ ಅನ್ವಯವಾಗುವಂತೆ, ಸಂಯೋಜನೆಯನ್ನು ಪೂರ್ತಿಯಾಗಿ ಅಥವಾ ಭಾಗಶಃ ಹಿಂತೆಗೆದು ಕೊಳ್ಳುವಂತೆ ಅಥವಾ ಮಾರ್ಪಾಟು ಮಾಡುವಂತೆ ಅಥವಾ ಪ್ರಸ್ತಾವವನ್ನು ತಿರಸ್ಕರಿಸುವಂತೆ ವಿಶ್ವವಿದ್ಯಾನಿಲಯಕ್ಕೆ ಆದೇಶಿಸಬಹುದು;

(10) ವಿಶ್ವವಿದ್ಯಾನಿಲಯವು, ಅಂಥ ನಿರ್ದೇಶನವನ್ನು ಸ್ವೀಕರಿಸಿದ ಮೇಲೆ ಅಂಥ ನಿರ್ದೇಶನದೊಂದಿಗೆ ಔಪಚಾರಿಕ ಆದೇಶವನ್ನು ಹೊರಡಿಸತಕ್ಕದ್ದು;

(11) ಸಂಯೋಜನೆಯನ್ನು ಪೂರ್ಣವಾಗಿ ಅಥವಾ ಭಾಗಶಃ ಹಿಂತೆಗೆದುಕೊಂಡ ಕಾಲೇಜಿನ ವಿದ್ಯಾರ್ಥಿಗಳಿಗೆ, ನಿರ್ದಿಷ್ಟ ವ್ಯಾಸಂಗ ಕ್ರಮದ ಸಂಬಂಧದಲ್ಲಿ ಪ್ರವೇಶ ಸಂಖ್ಯೆಯನ್ನು ಹೆಚ್ಚಿಸುವ ಮೂಲಕ, ವಿಶ್ವವಿದ್ಯಾನಿಲಯವು, ಹತ್ತಿರದಲ್ಲಿರುವ ಕಾಲೇಜಿನಲ್ಲಿ ಅಂಥ ವಿದ್ಯಾರ್ಥಿಗಳಿಗೆ ಸ್ಥಳಾವಕಾಶವನ್ನು ಕಲ್ಪಿಸುವ ವ್ಯವಸ್ಥೆ ಮಾಡತಕ್ಕದ್ದು. ಅಂಥ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ

ಎಲ್ಲಾ ದಾಖಲೆಗಳನ್ನು ಸಂಯೋಜನೆಯನ್ನು ಹಿಂತೆಗೆದುಕೊಂಡ ಕಾಲೇಜಿನಿಂದ ವಿಶ್ವವಿದ್ಯಾನಿಲಯವು ಅವರನ್ನು ವರ್ಗಾಯಿಸಿದ ಕಾಲೇಜಿಗೆ ವರ್ಗಾಯಿಸತಕ್ಕದ್ದು;

**64. ಸ್ವಾಯತ್ತ ಕಾಲೇಜು :** (1) ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿತವಾದ ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳಲ್ಲಿ ಏನೇ ಇದ್ದಾಗ್ಯೂ ವಿಶ್ವವಿದ್ಯಾನಿಲಯವು, ರಾಜ್ಯ ಸರ್ಕಾರದ ಪೂರ್ವ ಸಹಮತಿ ಪಡೆದು ಸಂಯೋಜನೆಗೊಂಡ ಕಾಲೇಜು, ವಿಭಾಗ ಅಥವಾ ಘಟಕಗಳನ್ನು ಯಾವುದೇ ವ್ಯಾಸಂಗ ಕ್ರಮಕ್ಕಾಗಿ ಈ ಬಗ್ಗೆ ರಚಿಸಲಾದ ಪರಿನಿಯಮಗಳಲ್ಲಿ ನಿಯಮಿಸಬಹುದಾದಂಥ ಪ್ರಕ್ರಿಯೆಯನ್ನು ಅನುಸರಿಸಿದ ತರುವಾಯ, ಅಂಥ ಷರತ್ತುಗಳಿಗೆ ಒಳಪಟ್ಟು ಮತ್ತು ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಹಾಗೂ ಹೊಸ ಮತ್ತು ಸುಸಂಗತ ವ್ಯಾಸಂಗ ಕ್ರಮಗಳನ್ನು ಪ್ರಾರಂಭಿಸುವ ದೃಷ್ಟಿಯಿಂದ ನಿರ್ದಿಷ್ಟ ಪಡಿಸಬಹುದಾದಂಥ ಅವಧಿಗಾಗಿ ಸ್ವಾಯತ್ತ ಕಾಲೇಜೆಂದು ಹೆಸರಿಸಬಹುದು.

(2) ಈ ಬಗ್ಗೆ ರಚಿಸಿದ ಪರಿನಿಯಮಗಳಿಗೆ ಒಳಪಟ್ಟು, ಸ್ವಾಯತ್ತ ಕಾಲೇಜೆಂದು ಹೆಸರಿಸಲಾದ ಕಾಲೇಜು ವ್ಯಾಸಂಗ ಕ್ರಮಗಳನ್ನು ರೂಪಿಸಲು ಸಮುಚಿತ ಬೋಧನಾ ಕ್ರಮಗಳನ್ನು ವ್ಯವಸ್ಥೆಗೊಳಿಸುವುದಕ್ಕಾಗಿ ವಿಶ್ವವಿದ್ಯಾನಿಲಯವು, ಪದವಿ ಅಥವಾ ಡಿಪ್ಲೋಮಗಳನ್ನು ಕೊಡುವುದಕ್ಕೆ ಸಂಬಂಧಿಸಿದಂತೆ ಮೌಲ್ಯಮಾಪನ ಪರೀಕ್ಷೆ ಮತ್ತು ಉಪಪರೀಕ್ಷೆಗಳನ್ನು ವ್ಯವಸ್ಥೆಗೊಳಿಸಲು ಮತ್ತು ವಿದ್ಯಾರ್ಥಿಗಳಿಗೆ ಪ್ರವೇಶ ಕೊಡುವ ಬಗ್ಗೆ ನಿಯಮಗಳನ್ನು ರಚಿಸಲು ಹಕ್ಕುಳ್ಳದ್ದಾಗಿರತಕ್ಕದ್ದು;

(3) ಪರಿನಿಯಮಗಳಲ್ಲಿ ನಿಯಮಿಸಬಹುದಾದಂಥ ನಿಯತಕಾಲಿಕ ಪುನರವಲೋಕನಕ್ಕೆ ಒಳಪಟ್ಟು ವಿಶ್ವವಿದ್ಯಾನಿಲಯವು, ರಾಜ್ಯಸರ್ಕಾರದ ಸಹಮತಿ ಪಡೆದೊಡನೆ, ನಿರ್ದಿಷ್ಟಪಡಿಸಬಹುದಾಂಥ ಹೆಚ್ಚಿನ ಅವಧಿಯವರೆಗೆ ವಿಶ್ವವಿದ್ಯಾನಿಲಯವು ಸ್ವಾಯತ್ತ ಕಾಲೇಜಿನ ಹೆಸರಿಸುವಿಕೆಯನ್ನು ಮುಂದುವರಿಸ ಬಹುದು ಅಥವಾ ಅಂಥ ಹೆಸರಿಸುವಿಕೆಯನ್ನು ರದ್ದುಗೊಳಿಸಬಹುದು.

(4) ಈ ಉದ್ದೇಶಕ್ಕಾಗಿ ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ತಿನೊಂದಿಗೆ ಸಮಾಲೋಚಿಸಿ ಪರಿನಿಯಮಗಳನ್ನು ರಚಿಸತಕ್ಕದು, ಮತ್ತು,-

(ಎ) ಸಂಯೋಜನೆಗೊಂಡ ಕಾಲೇಜು, ವಿಭಾಗ ಅಥವಾ ಘಟಕವನ್ನು ಯಾವ ವಿಧಾನ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ಸ್ವಾಯತ್ತ ಕಾಲೇಜು ಎಂದು ಹೆಸರಿಸಬಹುದು ಅಥವಾ ಅಂಥ ಕಾಲೇಜಿನ ಹೆಸರಿಸುವಿಕೆಯನ್ನು ರದ್ದುಗೊಳಿಸಬಹುದೋ ಆ ವಿಧಾನ ಮತ್ತು ಷರತ್ತುಗಳು;

(ಬಿ) ಸ್ವಾಯತ್ತ ಕಾಲೇಜಿನ ಆಡಳಿತ ನಿಕಾಯ, ವಿದ್ಯಾವಿಷಯಕ ಪರಿಷತ್ತು, ಅಧ್ಯಯನ ಮಂಡಳಿ ಮತ್ತು ಪರೀಕ್ಷಾ ಮಂಡಳಿಯ ರಚನೆ ಅಥವಾ ಪುನಾರಚನೆ, ಪ್ರಕಾರ್ಯಗಳು, ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಒಳಗೊಂಡಂತೆ ಸ್ವಾಯತ್ತ ಕಾಲೇಜಿನ ಆಡಳಿತಕ್ಕೆ ಪ್ರಾಸಂಗಿಕವಾದ ವಿಷಯಗಳು;

(ಸಿ) ವಿದ್ಯಾರ್ಥಿಗಳ ಪ್ರವೇಶಕ್ಕೆ ಸಂಬಂಧಿಸಿದ ವಿಷಯಗಳು;

(ಡಿ) ಸ್ವಾಯತ್ತ ಕಾಲೇಜಿನ ಮುಂದುವರಿಕೆ ಅಥವಾ ರದ್ದುಪಡಿಸುವಿಕೆ ಕುರಿತು ನಿಯತಕಾಲಿಕ ಪುನರವಲೋಕನ;

(ಇ) (2)ನೇ ಉಪಪ್ರಕರಣದಲ್ಲಿ ನಮೂದಿಸಿದ ವಿಷಯಗಳನ್ನು ಒಳಗೊಂಡಂತೆ ಸ್ವಾಯತ್ತ ಕಾಲೇಜಿನ ಕಾರ್ಯನಿರ್ವಹಣೆಗೆ ಸುಗಮವಾಗಬಹುದಾದ ಅಂಥ ಇತರ ವಿಷಯಗಳು;

- ಇವುಗಳ ಬಗ್ಗೆ ಉಪಬಂಧಿಸತಕ್ಕದ್ದು.

**65. ಕಾಲೇಜುಗಳ ಅಥವಾ ವ್ಯಾಸಂಗ ಕ್ರಮದ ಸ್ವಯಂ ಮುಚ್ಚುವಿಕೆ :** (1) ತನ್ನ ಅಸಾಮರ್ಥ್ಯದ ಅಥವಾ ಹಣಕಾಸು ಹೊಣೆಗಾರಿಕೆ ಅಥವಾ ಆಡಳಿತ ವ್ಯವಸ್ಥೆಯ ಕುಸಿತದ ದೃಷ್ಟಿಯಿಂದ ಕಾಲೇಜನ್ನು ಅಥವಾ ವ್ಯಾಸಂಗಕ್ರಮವನ್ನು ಮುಚ್ಚಲು ಉದ್ದೇಶಿಸಿರುವಂತಹ ಯಾವುದೇ ಕಾಲೇಜಿನ ಆಡಳಿತ ಮಂಡಳಿಯು, ವಿಶ್ವವಿದ್ಯಾನಿಲಯಕ್ಕೆ ಮತ್ತು ರಾಜ್ಯಸರ್ಕಾರಕ್ಕೆ, ಕಾಲೇಜನ್ನು ಮುಚ್ಚುವುದಕ್ಕೆ ಮೊದಲು ಮೂರು ತಿಂಗಳುಗಳಿಗಿಂತ ಕಡಿಮೆಯಿಲ್ಲದಂತೆ ಆ ಬಗ್ಗೆ ಕಾರಣಗಳನ್ನು ತಿಳಿಸಿ ಲಿಖಿತ ನೋಟೀಸನ್ನು ನೀಡತಕ್ಕದ್ದು.

(2) ಕಾಲೇಜಿನ ಅಥವಾ ವ್ಯಾಸಂಗ ಕ್ರಮದ ಮುಚ್ಚುವಿಕೆಯ ಅರ್ಜಿಯನ್ನು ವಿದ್ಯಾವಿಷಯಕ ಪರಿಷತ್ತು ಮತ್ತು ಸಿಂಡಿಕೇಟು ಪರಿಗಣಿಸತಕ್ಕದ್ದು ಮತ್ತು ಸಿಂಡಿಕೇಟು ಅದರ ಮೇಲೆ ಸೂಕ್ತ ಗೊತ್ತುವಳಿಗಳನ್ನು ಮಾಡತಕ್ಕದ್ದು.

(3) ರಿಜಿಸ್ಟ್ರಾರನು, ಅರ್ಜಿಯನ್ನು ಮತ್ತು ವಿದ್ಯಾವಿಷಯಕ ಪರಿಷತ್ತಿನ ಮತ್ತು ಸಿಂಡಿಕೇಟಿನ ಗೊತ್ತುವಳಿಗಳನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು, ಅದು ಅದನ್ನು ಪರಿಗಣಿಸಿದ ತರುವಾಯ ಮುಚ್ಚುವ ಬಗ್ಗೆ ಅನುಮತಿ ನೀಡುವ ಅಥವಾ ಮುಚ್ಚುವಿಕೆಯನ್ನು ತಿರಸ್ಕರಿಸುವ ಬಗ್ಗೆ ವಿಶ್ವವಿದ್ಯಾನಿಲಯಕ್ಕೆ ನಿರ್ದೇಶನ ನೀಡತಕ್ಕದ್ದು ಮತ್ತು ವಿಶ್ವವಿದ್ಯಾನಿಲಯವು ಅಂಥ ನಿರ್ದೇಶನಗಳನ್ನು ಸ್ವೀಕರಿಸಿದ ತರುವಾಯ ಅದಕ್ಕನುಸಾರ ಆದೇಶಗಳನ್ನು ಹೊರಡಿಸತಕ್ಕದ್ದು.

(4) ಆಡಳಿತ ಮಂಡಳಿಯು, ಶೈಕ್ಷಣಿಕ ವರ್ಷದ ಚಾಲ್ತಿ ಅವಧಿಯಲ್ಲಿ ಮತ್ತು ವಿಶ್ವವಿದ್ಯಾನಿಲಯವು ಸಂಬಂಧಪಟ್ಟ ವ್ಯಾಸಂಗ ಕ್ರಮದ ವಾರ್ಷಿಕ ಪರೀಕ್ಷೆಗಳನ್ನು ನಡೆಸುವವರೆಗೆ ಮತ್ತು ವಿಶ್ವವಿದ್ಯಾನಿಲಯವು ಹಾಗೆ ಮಾಡುವುದಕ್ಕಾಗಿ ಒಂದು ಔಪಚಾರಿಕ ಆದೇಶವನ್ನು ಹೊರಡಿಸುವವರೆಗೆ ಕಾಲೇಜನ್ನು ಅಥವಾ ವ್ಯಾಸಂಗ ಕ್ರಮವನ್ನು ಮುಚ್ಚತಕ್ಕದ್ದಲ್ಲ.

(5) ಹಾಗೆ ಮುಚ್ಚಲಾದ ಕಾಲೇಜುಗಳ ವಿದ್ಯಾರ್ಥಿಗಳು ವರ್ಗಾವಣೆಯ ನಂತರ, ವಿಶ್ವವಿದ್ಯಾನಿಲಯವು, ಹತ್ತಿರವಿರುವ ಕಾಲೇಜಿನಲ್ಲಿ ಸಂಬಂಧಪಟ್ಟ ವ್ಯಾಸಂಗ ಕ್ರಮದಲ್ಲಿ ಪ್ರವೇಶ ಸಂಖ್ಯೆಯನ್ನು ಅಂಥ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ನೀಡುವಷ್ಟರ ಮಟ್ಟಿಗೆ ಹೆಚ್ಚಿಸಿ ಅವರಿಗೆ ಪ್ರವೇಶವನ್ನು ನೀಡತಕ್ಕದ್ದು ಮತ್ತು ಅಂಥ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು

ಹಾಗೆ ಮುಚ್ಚಲ್ಪಟ್ಟ ಕಾಲೇಜಿನಿಂದ, ಯಾವ ಕಾಲೇಜಿಗೆ ಅಂಥ ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದಿರುವರೋ ಅಲ್ಲಿಗೆ ವರ್ಗಾಯಿಸತಕ್ಕದ್ದು.

(6) (1)ನೇ ಉಪಪ್ರಕರಣದ ಅಡಿಯಲ್ಲಿ ನೋಟೀಸಿನ ಅವಧಿಯು ಮುಕ್ತಾಯವಾದ ತರುವಾಯ ಮೂವತ್ತು ದಿನಗಳೊಳಗೆ, ಹಾಗೆ ಮುಚ್ಚುವ ಬಗ್ಗೆ ಅನುಮತಿ ನೀಡುವ ಅಥವಾ ತಿರಸ್ಕರಿಸುವ ಯಾವುದೇ ನಿರ್ದೇಶನವನ್ನು ರಾಜ್ಯ ಸರ್ಕಾರವು ನೀಡದಿದ್ದರೆ, (4)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಕಾಲೇಜನ್ನು ಅಥವಾ ಸಂದರ್ಭಾನುಸಾರ ವ್ಯಾಸಂಗ ಕ್ರಮವನ್ನು ಮುಚ್ಚಲು ಆಡಳಿತ ಮಂಡಲಿಗೆ ಅನುಮತಿ ನೀಡಲಾಗಿದೆ ಎಂದು ಭಾವಿಸತಕ್ಕದ್ದು.

**66. ಕೆಲವು ಸಂಸ್ಥೆಗಳಿಗೆ ಮನ್ನಣೆ :** (1) ಸಂಶೋಧನೆ ಅಥವಾ ನಿರ್ದಿಷ್ಟಪಡಿಸಿದ ಅಧ್ಯಯನಗಳನ್ನು ಅಥವಾ ಪರಿಣಿತ ಅಧ್ಯಯನಗಳನ್ನು ನಡೆಸುವ ಕಾಲೇಜನ್ನು ಹೊರತುಪಡಿಸಿ, ವಿಶ್ವವಿದ್ಯಾನಿಲಯ ಪ್ರದೇಶದ ಒಳಗೆ ಅಥವಾ ಹೊರಗೆ ಇರುವ ಯಾವುದೇ ಸಂಸ್ಥೆಯನ್ನು ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಅಂಥ ಉದ್ದೇಶಕ್ಕಾಗಿ ಮತ್ತು ಅಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು, ಸಿಂಡಿಕೇಟು, ಮನ್ನಣೆ ಪಡೆದ ಸಂಸ್ಥೆಯೆಂದು ಮನ್ನಣೆ ಕೊಡಬಹುದು.

(2) ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ರೀತಿಯಲ್ಲಿ ಮತ್ತು ಅಂಥ ಕಾರಣಗಳಿಗಾಗಿ, ಅಂಥ ಮನ್ನಣೆಯನ್ನು ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ಹಿಂತೆಗೆದುಕೊಳ್ಳಬಹುದು ಅಥವಾ ಮಾರ್ಪಾಟು ಮಾಡಬಹುದು.

**67. ಕಾಲೇಜುಗಳ ಪರಿವೀಕ್ಷಣೆ :** (1) ಖಾಯಂ ಆಗಿ ಸಂಯೋಜನೆಗೊಂಡ ಕಾಲೇಜು ಸೇರಿದಂತೆ ಸಂಯೋಜನೆಗೊಂಡ ಪ್ರತಿಯೊಂದು ಕಾಲೇಜು, ಸಿಂಡಿಕೇಟು, ವಿದ್ಯಾ ವಿಷಯಕ ಪರಿಷತ್ತಿನೊಡನೆ ಸಮಾಲೋಚನೆ ನಡೆಸಿದ ತರುವಾಯ, ಆ ಕಾಲೇಜಿನ ದಕ್ಷತೆಯನ್ನು ಅಥವಾ ಸಂಸ್ಥೆಯು ಸಾಧಿಸಿದ ಶೈಕ್ಷಣಿಕ ಗುಣಮಟ್ಟವನ್ನು ತೀರ್ಮಾನಿಸುವುದಕ್ಕೆ ಅಗತ್ಯವಾಗಬಹುದಾದಂಥ ವರದಿಗಳನ್ನು, ವಿವರ ಪಟ್ಟಿಕೆಗಳನ್ನು ಮತ್ತು ಇತರ ಮಾಹಿತಿಯನ್ನು ರಿಜಿಸ್ಟ್ರಾರರಿಗೆ ಒದಗಿಸತಕ್ಕದ್ದು.

(2) ಸಿಂಡಿಕೇಟು ಅಂಥ ಪ್ರತಿಯೊಂದು ಕಾಲೇಜನ್ನು, ಈ ಬಗ್ಗೆ ರಚಿತವಾದ ಸಮಿತಿಯು ಕಾಲಕಾಲಕ್ಕೆ ಪರಿವೀಕ್ಷಣೆ ನಡೆಸುವಂತೆ ಮಾಡತಕ್ಕದ್ದು.

(3) ಸಿಂಡಿಕೇಟು, ಹಾಗೆ ಪರಿವೀಕ್ಷಿಸಲಾದ ಯಾವುದೇ ಕಾಲೇಜನ್ನು, ನಿರ್ದಿಷ್ಟಪಡಿಸಿದ ಅವಧಿಯೊಳಗೆ ಯಾವುದೇ ವಿಷಯುಗಳಿಗೆ ಸಂಬಂಧಿಸಿದಂತೆ ತನಗೆ ಅವಶ್ಯವೆಂದು ಕಂಡುಬರಬಹುದಾದಂಥ ಕ್ರಮ ಕೈಗೊಳ್ಳಲು ಕೋರಬಹುದು.

(4) ಶೈಕ್ಷಣಿಕ, ಆಡಳಿತಾತ್ಮಕ ಹಾಗೂ ಅದಕ್ಕೆ ಪೂರಕವಾದ ಎಲ್ಲಾ ವಿಷಯಗಳ ಸಂಬಂಧವಾಗಿ ವಿಶ್ವವಿದ್ಯಾನಿಲಯವು ಕಾಲಕಾಲಕ್ಕೆ ಹೊರಡಿಸುವ ನಿರ್ದೇಶನಗಳನ್ನು ಪ್ರತಿಯೊಂದು ಕಾಲೇಜು ಪಾಲಿಸತಕ್ಕದ್ದು.

## ಅಧ್ಯಾಯ - XI

## ಪಟ್ಟಿಗೆ ಸೇರಿಸುವಿಕೆ ಮತ್ತು ಪದವಿಗಳು

**68. ವಿದ್ಯಾರ್ಥಿಗಳ ಪ್ರವೇಶಕ್ಕಾಗಿ ಅರ್ಹತೆ.-** ಯಾವೊಬ್ಬ ವಿದ್ಯಾರ್ಥಿಯು ಕಾಲ ಕಾಲಕ್ಕೆ ಪರಿನಿಯಮದಿಂದ ನಿಯಮಿಸಬಹುದಾದ ಅಂಥ ಅರ್ಹತೆಗಳನ್ನು ಅವನು ಹೊಂದಿದ್ದ ಹೊರತು, ಪದವಿ ಅಥವಾ ಡಿಪ್ಲೋಮಾ ಅಧ್ಯಯನ ಕ್ರಮಗಳ ಪ್ರವೇಶಕ್ಕೆ ಅರ್ಹನಾಗಿರತಕ್ಕದ್ದಲ್ಲ.

**69. ಗೌರವ ಪದವಿಗಳು.-** (1) ಸಿಂಡಿಕೇಟಿನ ಮೂರನೇ ಎರಡರಷ್ಟಕ್ಕೆ ಕಡಿಮೆ ಇಲ್ಲದ ಸದಸ್ಯರು, ಯಾವೊಬ್ಬ ವ್ಯಕ್ತಿಗೆ, ಅವನ ಶ್ರೇಷ್ಠ ಸಾಧನೆ ಮತ್ತು ಸ್ಥಾನಮಾನದ ಕಾರಣದಿಂದಾಗಿ ಅವರ ಅಭಿಪ್ರಾಯದಲ್ಲಿ ಅಂಥ ಗೌರವ ಪದವಿ ಅಥವಾ ಇತರ ವಿದ್ಯಾವಿಷಯಕ ಪ್ರಶಸ್ತಿಯನ್ನು ಸ್ವೀಕರಿಸಲು ಯೋಗ್ಯ ಮತ್ತು ಸರಿಯಾದ ವ್ಯಕ್ತಿ ಎಂಬ ಆಧಾರದ ಮೇಲೆ ಗೌರವ ಪದವಿ ಅಥವಾ ವಿದ್ಯಾವಿಷಯಕ ಪ್ರಶಸ್ತಿಯನ್ನು ಪ್ರದಾನ ಮಾಡಬೇಕೆಂದು ಶಿಫಾರಸ್ಸು ಮಾಡಿದರೆ, ಸಿಂಡಿಕೇಟು, ಸಂಬಂಧಪಟ್ಟ ವ್ಯಕ್ತಿಗೆ ಅದನ್ನು ಪ್ರದಾನ ಮಾಡಲು ಕುಲಾಧಿಪತಿಯವರ ಅನುಮೋದನೆಗಾಗಿ ಶಿಫಾರಸ್ಸು ಮಾಡಬಹುದು.

(2) ಗೌರವ ಪದವಿಯನ್ನು ಅಥವಾ ಪ್ರಶಸ್ತಿಯನ್ನು ವಿಶೇಷ ಸಂದರ್ಭಗಳಲ್ಲಿ ಮಾತ್ರ ಪ್ರದಾನ ಮಾಡತಕ್ಕದ್ದು. ಅದನ್ನು ಕೇವಲ ಒಂದು ವಾಡಿಕೆಯ ಕ್ರಮವಾಗಿ ಪ್ರದಾನ ಮಾಡತಕ್ಕದ್ದಲ್ಲ. ಸಾಹಿತ್ಯ, ತತ್ವಜ್ಞಾನ, ಕಲೆ, ಸಂಗೀತ, ವರ್ಣಚಿತ್ರಕಲೆ ಅಥವಾ ಕಲೆ, ವಿಜ್ಞಾನ ಅಥವಾ ತಂತ್ರಜ್ಞಾನದ ವ್ಯಾಸಂಗ ವಿಭಾಗಗಳಿಗೆ ವಹಿಸಿಕೊಡಲಾಗಿರುವ ಯಾವುದೇ ಇತರೆ ವಿಷಯದಲ್ಲಿ ಮುನ್ನಡೆಗಾಗಿ ಗಣನೀಯ ಕೊಡುಗೆ ನೀಡಿದ ಅಥವಾ ಶಿಕ್ಷಣದ ಧ್ಯೇಯಗಳಿಗಾಗಿ ವಿಶಿಷ್ಟ ಸೇವೆ ಸಲ್ಲಿಸಿದ ವ್ಯಕ್ತಿಗಳನ್ನು ಅಂಥ ಗೌರವ ಪದವಿಗಳ ನೀಡಿಕೆಯ ಉದ್ದೇಶಕ್ಕಾಗಿ ಗುರುತಿಸತಕ್ಕದ್ದು.

(3) ವಿಜ್ಞಾನ ಅಥವಾ ತಂತ್ರಜ್ಞಾನ ಶಾಖೆಗಳ, ವೈಜ್ಞಾನಿಕ ಮತ್ತು ತಂತ್ರಜ್ಞಾನ ಸಂಸ್ಥೆಗಳಲ್ಲಿ ಯೋಜನೆ, ಸಂಘಟನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಶಾಖೆಗಳಲ್ಲಿನ ಅಂಥ ವ್ಯಕ್ತಿಗಳಿಗೆ ಡಾಕ್ಟರ್ ಆಫ್ ಸೈನ್ಸ್ (ಡಿಎಸ್‌ಸಿ) ಪದವಿಯನ್ನು ಹಾನರಿಸ್‌ಕಾಸಾ (ಗೌರವ ಪದವಿ) ಆಗಿ ಪ್ರದಾನ ಮಾಡಬಹುದು.

(4) ಪ್ರತಿಷ್ಠಿತ ನ್ಯಾಯವಾದಿಗಳು, ನ್ಯಾಯಾಧೀಶರು, ಜ್ಯೂರಿಗಳು, ರಾಜಕೀಯ ಗಣ್ಯವ್ಯಕ್ತಿಗಳಿಗೆ ಅಥವಾ ಸಾರ್ವಜನಿಕ ಕ್ಷೇತ್ರದ ಧ್ಯೇಯಗಳಿಗಾಗಿ ಗಮನಾರ್ಹಕೊಡುಗೆ ನೀಡಿದ ವ್ಯಕ್ತಿಗಳಿಗೆ ಡಾಕ್ಟರ್ ಆಫ್ ಲಾಜ್ (ಎಲ್‌ಎಲ್.ಡಿ) ಪದವಿಯನ್ನು ಹಾನರೀಸ್‌ಕಾಸ್ (ಗೌರವ ಪದವಿ) ಆಗಿ ಪ್ರದಾನ ಮಾಡಬಹುದು.

**70. ಪದವಿ ಅಥವಾ ಡಿಪ್ಲೊಮಾಗಳನ್ನು ಹಿಂತೆಗೆದುಕೊಳ್ಳುವುದು.-** (1) ಯಾವೊಬ್ಬ ವ್ಯಕ್ತಿಯು, ಒಂದು ಪದವಿಯನ್ನು, ಡಿಪ್ಲೊಮಾವನ್ನು ಅಥವಾ ಸರ್ಟಿಫಿಕೇಟನ್ನು ಮೋಸದಿಂದ ಅಥವಾ ಸುಳ್ಳು ಜಾತಿ ಪ್ರಮಾಣಪತ್ರದ ಮೂಲಕ ಪ್ರವೇಶವನ್ನು ಪಡೆದುಕೊಂಡಿದ್ದಾನೆಂದು ಕಂಡುಬಂದರೆ, ಸಿಂಡಿಕೇಟಿನ ಒಟ್ಟು ಸದಸ್ಯರ ಬಹುಮತದಿಂದ ಮತ್ತು ಆ ಸಭೆಯಲ್ಲಿ ಹಾಜರಿದ್ದು

ಮತ ಚಲಾಯಿಸುವ ಮೂರನೆಯ ಎರಡು ಅಂಶಕ್ಕಿಂತ ಕಡಿಮೆಯಿಲ್ಲದ ಸದಸ್ಯರ ಬಹುಮತದಿಂದ ಅಂಗೀಕೃತವಾದ ನಿರ್ಣಯದ ಮೂಲಕ ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಸಿಂಡಿಕೇಟ್, ಅಂಥ ಯಾವನೇ ವ್ಯಕ್ತಿಗೆ ಪ್ರದಾನ ಮಾಡಲಾಗಿದ್ದ ಅಥವಾ ಕೊಡಲಾಗಿದ್ದ ಅಂಥ ಯಾವುದೇ ಪ್ರಶಸ್ತಿ, ಪದವಿ, ಡಿಪ್ಲೊಮಾ ಅಥವಾ ವಿಶೇಷಾಧಿಕಾರವನ್ನು ಹಿಂತೆಗೆದುಕೊಳ್ಳಬಹುದು.

(2) ಈ ಪ್ರಕರಣದ ಅಡಿಯಲ್ಲಿ ಯಾವೊಬ್ಬ ವ್ಯಕ್ತಿಯ ವಿರುದ್ಧ, ಕೈಗೊಳ್ಳಬೇಕೆಂದು ಪ್ರಸ್ತಾವಿಸಿದ ಕ್ರಮದ ವಿರುದ್ಧ ಕಾರಣ ತೋರಿಸಲು ಅವನಿಗೆ ಅವಕಾಶವನ್ನು ಕೊಟ್ಟ ಹೊರತು, ಯಾವುದೇ ಕ್ರಮ ಕೈಗೊಳ್ಳತಕ್ಕದ್ದಲ್ಲ.

(3) ಸಿಂಡಿಕೇಟು ಅಂಗೀಕರಿಸಿದ ನಿರ್ಣಯದ ಪ್ರತಿಯೊಂದನ್ನು ಸಂಬಂಧಪಟ್ಟ ವ್ಯಕ್ತಿಗೆ ಕೂಡಲೇ ಕಳುಹಿಸತಕ್ಕದ್ದು.

(4) ಸಿಂಡಿಕೇಟು ತೆಗೆದುಕೊಂಡ ತೀರ್ಮಾನದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಅಂಥ ನಿರ್ಣಯವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ, ಕುಲಾಧಿಪತಿಗೆ ಅಪೀಲು ಸಲ್ಲಿಸಬಹುದು.

(5) ಅಂಥ ಅಪೀಲಿನ ಮೇಲೆ ಕುಲಾಧಿಪತಿಯವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

## ಅಧ್ಯಾಯ - XII

## ವಿಶ್ವವಿದ್ಯಾನಿಲಯ ಪುನರವಲೋಕನಾ ಆಯೋಗ

**71. ವಿಶ್ವವಿದ್ಯಾನಿಲಯದ ಪುನರವಲೋಕನಾ ಆಯೋಗದ ನೇಮಕ.-** (1) ಕುಲಾಧಿಪತಿಯು, ಐದು ವರ್ಷಗಳಿಗೊಮ್ಮೆ, ವಿಶ್ವವಿದ್ಯಾನಿಲಯದ ಕಾರ್ಯನಿರ್ವಹಣೆಯನ್ನು ಪುನರವಲೋಕಿಸುವುದಕ್ಕಾಗಿ ಮತ್ತು ಶಿಫಾರಸ್ಸುಗಳನ್ನು ಮಾಡುವುದಕ್ಕಾಗಿ ಒಂದು ಆಯೋಗವನ್ನು ರಚಿಸತಕ್ಕದ್ದು.

(2) ಆಯೋಗವು, ಮೂವರಿಗೆ ಕಡಿಮೆಯಿಲ್ಲದ ಪ್ರಸಿದ್ಧ ಶಿಕ್ಷಣ ತಜ್ಞರನ್ನು ಒಳಗೊಂಡಿರತಕ್ಕದ್ದು. ಅದರಲ್ಲಿ ಒಬ್ಬನು, ಕುಲಾಧಿಪತಿಯವರು ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ನೇಮಿಸಿದ ಅಧ್ಯಕ್ಷರಾಗಿರತಕ್ಕದ್ದು.

(3) ಸದಸ್ಯರ ನೇಮಕಾತಿಯ ನಿಬಂಧನೆಗಳು ಮತ್ತು ಷರತ್ತುಗಳು, ಕುಲಾಧಿಪತಿಯವರು ನಿರ್ಧರಿಸಬಹುದಾದಂಥವುಗಳು ಆಗಿರತಕ್ಕದ್ದು.

(4) ಆಯೋಗವು, ಅದು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ ಕುಲಾಧಿಪತಿಯವರಿಗೆ ಮತ್ತು ರಾಜ್ಯ ಸರ್ಕಾರಕ್ಕೆ ತನ್ನ ಶಿಫಾರಸ್ಸುಗಳನ್ನು ಮಾಡತಕ್ಕದ್ದು.

(5) ಕುಲಾಧಿಪತಿಯವರು, ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ, ಶಿಫಾರಸ್ಸಿನ ಮೇಲೆ ತಾನು ಸೂಕ್ತವೆಂದು ಭಾವಿಸುವಂಥ ಕ್ರಮವನ್ನು ಕೈಗೊಳ್ಳಬಹುದು.

(6) ರಾಜ್ಯ ಸರ್ಕಾರವು, ಕೈಗೊಂಡ ಕ್ರಮವನ್ನು ವಿವರಿಸುವ ಜ್ಞಾಪನ ಪತ್ರದೊಡನೆ ವರದಿಯ ಒಂದು ಪ್ರತಿಯನ್ನು ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

**72. ಕರ್ನಾಟಕ ರಾಜ್ಯ ಅಂತರ - ವಿಶ್ವವಿದ್ಯಾನಿಲಯ ಮಂಡಳಿ :** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದಾಗ್ಯೂ, ಈ ಕೆಳಕಂಡ ಸದಸ್ಯರನ್ನು ಒಳಗೊಂಡ "ಕರ್ನಾಟಕ ರಾಜ್ಯ ಅಂತರ - ವಿಶ್ವವಿದ್ಯಾನಿಲಯ ಮಂಡಳಿ" ಎಂದು ಕರೆಯಲಾಗುವ ಒಂದು ಅಂತರ್ ವಿಶ್ವವಿದ್ಯಾನಿಲಯ ಮಂಡಳಿಯು ಕರ್ನಾಟಕ ರಾಜ್ಯದಲ್ಲಿ ಇರತಕ್ಕದ್ದು :-

(ಎ) ಉನ್ನತ ಶಿಕ್ಷಣದ ಪ್ರಭಾರದಲ್ಲಿರುವ ಸಚಿವರು - ಅಧ್ಯಕ್ಷ,

(ಬಿ) ರಾಜ್ಯದಲ್ಲಿರುವ ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಪತಿಗಳು,

(ಸಿ) ಉನ್ನತ ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ - ಸದಸ್ಯ ಕಾರ್ಯದರ್ಶಿ,

(ಡಿ) ಆರ್ಥಿಕ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ,

(ಇ) ಕೃಷಿ ಮತ್ತು ತೋಟಗಾರಿಕಾ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ,

(ಎಫ್) ಯೋಜನಾ ಇಲಾಖೆಯ ಸರ್ಕಾರದ ಕಾರ್ಯದರ್ಶಿ,

(ಜಿ) ವೈದ್ಯಕೀಯ ಶಿಕ್ಷಣದ ಪ್ರಭಾರದಲ್ಲಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ಕಾರದ ಕಾರ್ಯದರ್ಶಿ,

(ಹೆಚ್) ಸಮಾಜ ಕಲ್ಯಾಣ ಇಲಾಖೆಯ ಸರ್ಕಾರದ ಕಾರ್ಯದರ್ಶಿ,

(ಐ) ಕಾಲೇಜು ಶಿಕ್ಷಣ ಆಯುಕ್ತರು,

(ಜೆ) ತಾಂತ್ರಿಕ ಶಿಕ್ಷಣ ನಿರ್ದೇಶಕರು,

(ಕೆ) ಸಾರ್ವಜನಿಕ ಶಿಕ್ಷಣ ಆಯುಕ್ತರು,

(ಎಲ್) ವೈದ್ಯಕೀಯ ಶಿಕ್ಷಣ ನಿರ್ದೇಶಕರು,

(ಎಂ) ಪದವಿ ಪೂರ್ವ ಶಿಕ್ಷಣ ನಿರ್ದೇಶಕರು,

(2) ಮಂಡಳಿಯು ಅಗತ್ಯವೆನಿಸಿದಾಗ ಆಗಾಗ್ಗೆ ಕೊನೆಯ ಪಕ್ಷ ಮೂರು ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕದ್ದು. ಅದರ ಚರ್ಚೆಗಳಲ್ಲಿ ನೆರವು ನೀಡಲು ಅಗತ್ಯವಾಗಬಹುದಾದಂತೆ ಅಂಥ ಇತರ ವ್ಯಕ್ತಿಗಳನ್ನು ಆಹ್ವಾನಿಸಬಹುದು.

(3) ಮಂಡಳಿಯ ಸಭೆಗಳ ಕೋರಂ ಎಂಟು ಇರತಕ್ಕದ್ದು.

(4) ಮಂಡಳಿಯ ಪ್ರಕಾರ್ಯಗಳು,-

(ಎ) ಶೈಕ್ಷಣಿಕ ಸೌಲಭ್ಯಗಳ, ವಿಶೇಷ ಅಧ್ಯಯನಗಳ ಹಾಗೂ ಗುಣಮಟ್ಟಗಳ ಸಮನ್ವಯಾಭಿವೃದ್ಧಿ,

(ಬಿ) ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಪ್ರವೇಶಾರ್ಹತೆ,ಸನ್ನದ್ಧತೆ, ಪರೀಕ್ಷೆಗಳು ಮತ್ತು ಅಂತಹವೇ ವಿಷಯಗಳ ಸಮನ್ವಯ,

(ಸಿ) ವಿಶ್ವವಿದ್ಯಾನಿಲಯಗಳ ಆಡಳಿತಾತ್ಮಕ ಸಮಸ್ಯೆಗಳು ಮತ್ತು ವಿಶ್ವವಿದ್ಯಾನಿಲಯಗಳ ಹಣಕಾಸು- ಇವುಗಳ ಅಧ್ಯಯನ ಹಾಗೂ,

(ಡಿ) ಅನುಕ್ರಮವಾಗಿ, ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ ಮತ್ತು ರಾಜ್ಯ ಸರ್ಕಾರದಿಂದ ಅನುದಾನ ಪಡೆದ ವಿಶ್ವವಿಧ್ಯಾನಿಲಯಗಳ ಹಣಕಾಸು ಕಾರ್ಯಕ್ರಮದ ಸಮನ್ವಯ ಏಜೆನ್ಸಿಯಾಗಿ ಕರ್ತವ್ಯ ನಿರ್ವಹಿಸುವುದು

- ಇವುಗಳನ್ನು ಒಳಗೊಂಡಿರತಕ್ಕದ್ದು.

(5) ಮಂಡಳಿಯ ಶಿಫಾರಸ್ಸುಗಳು, ನಿರ್ಣಯಗಳು ಅಥವಾ ತೀರ್ಮಾನಗಳು ರಾಜ್ಯಸರ್ಕಾರದ ಅನುಮೋದನೆಗೆ ಒಳಪಟ್ಟು ರಾಜ್ಯದಲ್ಲಿಯ ವಿಶ್ವವಿದ್ಯಾನಿಲಯಗಳ ಮೇಲೆ ಬದ್ಧವಾಗಿರತಕ್ಕದ್ದು ಮತ್ತು ಅವುಗಳನ್ನು ತತ್‌ಕ್ಷಣವೇ ಜಾರಿಗೊಳಿಸತಕ್ಕದ್ದು ಮತ್ತು ಅದರ ಅನುಪಾಲನಾ ವರದಿಯನ್ನು ಎರಡು ತಿಂಗಳ ಒಳಗೆ ಸದಸ್ಯ ಕಾರ್ಯದರ್ಶಿಯವರಿಗೆ ಕಳುಹಿಸತಕ್ಕದ್ದು.

(6) ಮಂಡಳಿಯು, ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗಾಗಿ ಹುದ್ದೆಗಳಲ್ಲಿ, ನೇಮಕಾತಿಗಳಲ್ಲಿ ಮೀಸಲಾತಿಗಾಗಿ ರಾಜ್ಯ ಸರ್ಕಾರವು ಹೊರಡಿಸಿದ ಆದೇಶಗಳನ್ನು ಪಾಲಿಸಲಾಗುತ್ತಿದೆಯೇ, ನೇರನೇಮಕಾತಿಗಳಲ್ಲಿ ಮತ್ತು ಬಡ್ತಿಗಳಲ್ಲಿ ಅನುಸೂಚಿತ ಜಾತಿಗಳ ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ ಸಂಬಂಧಪಟ್ಟಂತೆ ಅನುಸರಿಸಲಾಗುತ್ತಿದೆಯೇ ಎಂಬ ಬಗ್ಗೆ ಕಾಲಕಾಲಕ್ಕೆ ಪರಿಶೀಲನೆ ನಡೆಸತಕ್ಕದ್ದು ಮತ್ತು ರಾಜ್ಯದಲ್ಲಿ ವಿಶ್ವವಿದ್ಯಾನಿಲಯಗಳಿಂದ ಅವುಗಳ ಪಾಲನೆಗಾಗಿ ಅಂಥ ನಿರ್ದಿಷ್ಟ ಶಿಫಾರಸ್ಸುಗಳು ಯಾವುವಾದರೂ ಇದ್ದಲ್ಲಿ ಅವುಗಳನ್ನು ಮಾಡತಕ್ಕದ್ದು.

## ಅಧ್ಯಾಯ - XIII

## ಪರೀಕ್ಷೆಯ ಕೆಲಸದಲ್ಲಿ ತೊಡಗಿರುವ ವ್ಯಕ್ತಿಗಳ ಪ್ರಕಾರ್ಯಗಳು ಮತ್ತು ಜವಾಬ್ದಾರಿಗಳು

**73. ಅಧ್ಯಾಪಕರ ಕರ್ತವ್ಯಗಳು.-** (1) ವಿಶ್ವವಿದ್ಯಾನಿಲಯದ ಅಥವಾ ಸಂಯೋಜಿತ ಕಾಲೇಜಿನ ಪ್ರತಿಯೊಬ್ಬ ಅಧ್ಯಾಪಕನು, ಕಾಲಕಾಲಕ್ಕೆ ವಿಶ್ವವಿದ್ಯಾನಿಲಯದಿಂದ ಅವನಿಗೆ ವಹಿಸಲಾದ ಬೋಧನೆ, ಸಂಶೋಧನೆ, ಪರೀಕ್ಷೆ ಅಥವಾ ಶೈಕ್ಷಣಿಕ ಕಾರ್ಯಗಳಿಗೆ ಸಂಬಂಧಪಟ್ಟ ಕೆಲಸಗಳನ್ನು ನಿರ್ವಹಿಸತಕ್ಕದ್ದು.

(2) (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, ವಿಶ್ವವಿದ್ಯಾನಿಲಯದ ಮತ್ತು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡ ಕಾಲೇಜಿನ ಸೇವೆಯಲ್ಲಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ಆಡಳಿತಾತ್ಮಕವಾಗಿ ವಿಶ್ವವಿದ್ಯಾನಿಲಯದ ನಿಯಂತ್ರಣಕ್ಕೆ ಒಳಪಡಿಸತಕ್ಕದ್ದು ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾನಿಲಯವು ನೀಡಿದ ಸೂಚನೆಗಳು ಅಥವಾ ಆದೇಶಗಳನ್ನು ಪಾಲಿಸತಕ್ಕದ್ದು.

**74. ಪರೀಕ್ಷಾ ಕಾರ್ಯವನ್ನು ನೆರವೇರಿಸುವ ಹೊಣೆ:-** (1) ಯಾವ ವ್ಯಕ್ತಿಗೆ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸುವುದು, ಪರಿವೀಕ್ಷಣೆ, ಮೇಲ್ವಿಚಾರಣೆ, ಮೌಲ್ಯಮಾಪನ, ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸುವುದು, ಪ್ರಶ್ನೆ ಪತ್ರಿಕೆಗಳ ಮತ್ತು ಉತ್ತರ ಪತ್ರಿಕೆಗಳ ಮುದ್ರಣ ಮತ್ತು ಅಂಕಪಟ್ಟಿಯನ್ನು ಸಿದ್ಧಪಡಿಸುವುದೇ ಮುಂತಾದ ಪರೀಕ್ಷೆಗೆ ಸಂಬಂಧಿಸಿದ ಕಾರ್ಯವನ್ನು ಮತ್ತು ಅದಕ್ಕೆ ಪ್ರಾಸಂಗಿಕವಾದ ಮತ್ತು ಅದಕ್ಕೆ ಸಂಬಂಧಿಸಿದ ಅಂಥ ಎಲ್ಲ ಚಟುವಟಿಕೆಗಳನ್ನು, ವಹಿಸಲಾಗಿದೆಯೋ ಆ ವ್ಯಕ್ತಿಯು, ಅಂಥ ಕರ್ತವ್ಯಗಳನ್ನು ಶೈಕ್ಷಣಿಕ ಗುಣಮಟ್ಟಗಳನ್ನು ಸಾಧಿಸುವುದಕ್ಕಾಗಿ ವಿವೇಕದಿಂದ ಮತ್ತು ಅತ್ಯಂತ ಹೆಚ್ಚಿನ ಪ್ರಾಮಾಣಿಕತೆಯಿಂದ ನಿರ್ವಹಿಸತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಪರೀಕ್ಷಾ ಕಾರ್ಯವನ್ನು ಹಂಚಿಕೆ ಮಾಡಲಾಗಿರುವ ಯಾವೊಬ್ಬ ವ್ಯಕ್ತಿಯು, ಕರ್ತವ್ಯಗಳ ಉಲ್ಲಂಘನೆಯ ತಪ್ಪಿತಸ್ಥನೆಂದು ಕಂಡು ಬಂದರೆ ಅಥವಾ ದುರ್ನಡತೆಯಲ್ಲಿ ಒಳಗೊಂಡಿದ್ದರೆ, ಅಪರಾಧ ನಿರ್ಣಯವಾದ ತರುವಾಯ, ಮೂರು ವರ್ಷಗಳ ವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ರಿಜಿಸ್ಟ್ರಾರ್ (ಮೌಲ್ಯಮಾಪನ) ಇವರು ನೀಡಿದ ದೂರಿನ ಮೇಲಲ್ಲದೆ ಈ ಪ್ರಕರಣದ ಅಡಿಯಲ್ಲಿ, ದಂಡನೀಯವಾದ ಒಂದು ಅಪರಾಧದ ಅಥವಾ ಅಂಥ ಅಪರಾಧದ ದುಷ್ಪ್ರೇರಣೆಯ ಸಂಜ್ಞೇಯತೆಯನ್ನು ಯಾವುದೇ ನ್ಯಾಯಾಲಯವು ತೆಗೆದುಕೊಳ್ಳತಕ್ಕದ್ದಲ್ಲ.

**75. ಅಪರಾಧದ ದುಷ್ಪ್ರೇರಣೆಗಾಗಿ ಶಿಕ್ಷೆ.-** 74ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಪ್ರಚೋದಿಸುವ ಅಥವಾ ದುಷ್ಪ್ರೇರಿಸುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದ ತರುವಾಯ, ಆ ಪ್ರಕರಣದಲ್ಲಿ ಅದಕ್ಕಾಗಿ ಉಪಬಂಧಿಸಲಾದ ಅದೇ ಶಿಕ್ಷೆಯಿಂದ ದಂಡಿತನಾಗತಕ್ಕದ್ದು.

**76. ಖಾಸಗಿ ಟ್ಯೂಷನ್ ಮೇಲೆ ಪ್ರತಿಬಂಧ:-** ವಿಶ್ವವಿದ್ಯಾನಿಲಯದ ಅಥವಾ ಸಂಯೋಜಿತ ಕಾಲೇಜಿನ ಯಾವೊಬ್ಬ ಅಧ್ಯಾಪಕನು, ವಿಶ್ವವಿದ್ಯಾನಿಲಯದ ಅಥವಾ ಅವನನ್ನು ನೇಮಕಮಾಡಿದ ಪ್ರಾಧಿಕಾರಿಯ ಅನುಮತಿ ಇಲ್ಲದೆ, ಖಾಸಗಿ ಟ್ಯೂಷನ್‌ನಲ್ಲಿ ಅಥವಾ ಯಾವುದೇ ಇತರ ನಿಯೋಜನೆ ಅಥವಾ ಉದ್ಯೋಗದಲ್ಲಿ ತೊಡಗತಕ್ಕದ್ದಲ್ಲ.

## ಅಧ್ಯಾಯ - XIV

## ಸಂಕೀರ್ಣ ಮತ್ತು ತಾತ್ಕಾಲಿಕ ಉಪಬಂಧಗಳು

**77. ಶಿಸ್ತು.-** (1) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಕಾಯ್ದುಕೊಂಡು ಬರುವ ಅಂತಿಮ ಪ್ರಾಧಿಕಾರಿಯು ಕುಲಪತಿಯಾಗಿರತಕ್ಕದ್ದು. ಈ ಸಂಬಂಧದಲ್ಲಿ ಅವನ ನಿರ್ದೇಶನಗಳನ್ನು ಕಾಲೇಜುಗಳ, ವಿದ್ಯಾರ್ಥಿನಿಲಯಗಳ ಮತ್ತು ಇತರ ಸಂಸ್ಥೆಗಳ ಮುಖ್ಯಸ್ಥರು ಕಾರ್ಯಗತಗೊಳಿಸತಕ್ಕದ್ದು.

(2) (1)ನೇ ಉಪ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ,-

(ಎ) ಪರೀಕ್ಷೆಗಳಿಂದ ಒಬ್ಬ ವಿದ್ಯಾರ್ಥಿಯನ್ನು ಡಿಬಾರ್ ಮಾಡುವ ಶಿಕ್ಷೆಯನ್ನು ಕುಲಪತಿಯ ವರದಿಯ ಮೇಲೆ ಸಿಂಡಿಕೇಟು ಪರಿಗಣಿಸತಕ್ಕದ್ದು ಮತ್ತು ವಿಧಿಸತಕ್ಕದ್ದು.

(ಬಿ) ಕಾಲೇಜು ಅಥವಾ ವಿದ್ಯಾರ್ಥಿನಿಲಯ ಅಥವಾ ಸಂಬಂಧಪಟ್ಟ ಸಂಸ್ಥೆಯಿಂದ ಹೊರಹಾಕುವ ಶಿಕ್ಷೆಯನ್ನು ಕಾಲೇಜಿನ ಅಥವಾ ವಿದ್ಯಾರ್ಥಿನಿಲಯದ ಅಥವಾ ಸಂಸ್ಥೆಯ ಮುಖ್ಯಸ್ಥರು ವಿಧಿಸತಕ್ಕದ್ದು.

(3) ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಯಾವುದೇ ಗೊತ್ತುವಳಿಯನ್ನು ಯಾವೊಬ್ಬ ಸದಸ್ಯನಿಗೆ ನೋಟೀಸನ್ನು ಜಾರಿ ಮಾಡುವಲ್ಲಿಯ ಯಾವುದೇ ಅಕ್ರಮತೆಯ ಕಾರಣದಿಂದಾಗಿ ಅದು ಅಸಿಂಧುವೆಂದು ಭಾವಿಸತಕ್ಕದ್ದಲ್ಲ:

ಪರಂತು, ಅಂಥ ಪ್ರಾಧಿಕಾರದ ಅಥವಾ ನಿಕಾಯದ ನಡವಳಿಗಳು, ಅಂಥ ಅಕ್ರಮತೆಯಿಂದ ಪ್ರತಿಕೂಲವಾಗಿ ಬಾಧಕವಾಗತಕ್ಕದ್ದಲ್ಲ.

**78. ಈ ಅಧಿನಿಯಮವು ಇತರ ಅಧಿನಿಯಮಗಳ ಮೇಲೆ ಹೆಚ್ಚಿನ ಪ್ರಭಾರವುಳ್ಳದ್ದಾಗಿರುವುದು:-** ಈ ಅಧಿನಿಯಮವು ಮತ್ತು ಅದರ ಅಡಿಯಲ್ಲಿ ಮಾಡಿದ ಪರಿನಿಯಮಗಳು ಅಥವಾ ವಿನಿಯಮಗಳು ಅಥವಾ ನಿಯಮಗಳು ಅಥವಾ ಆರ್ಡಿನೆನ್ಸ್‌ಗಳು, ವಿಶ್ವವಿದ್ಯಾನಿಲಯದ ಪ್ರದೇಶದಲ್ಲಿರುವ ಯಾವುದೇ ಕಾಲೇಜಿನ ಸಂಬಂಧದಲ್ಲಿ, ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯಲ್ಲಿ ನಮೂದು ಮಾಡಿದ ವಿಷಯಗಳ ಸಂಬಂಧದಲ್ಲಿ ಯಾವುದೇ ಇತರ ಅಧಿನಿಯಮದಲ್ಲಿ ಇದಕ್ಕೆ ಅಸಂಗತವಾದುದೇನೇ ಒಳಗೊಂಡಿದ್ದರೂ ಪರಿಣಾಮವುಳ್ಳವುಗಳಾಗಿರತಕ್ಕದ್ದು.

**79. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ:-** ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಅಥವಾ ನಿಯಮಗಳಿಗೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ವಿಶ್ವವಿದ್ಯಾನಿಲಯದ ಅಥವಾ ಅದರ ಪ್ರಾಧಿಕಾರಿಗಳ, ನಿಕಾಯಗಳ ಅಥವಾ ಅಧಿಕಾರಿಗಳ ವಿರುದ್ಧ ಯಾವುದೇ ದಾವೆ ಅಥವಾ ಇತರ ವ್ಯವಹರಣೆ ಇರತಕ್ಕದ್ದಲ್ಲ ಮತ್ತು ಅದರಿಂದ ಯಾವುದೇ ಹಾನಿಗಳನ್ನು ಕ್ಲೇಮು ಮಾಡತಕ್ಕದ್ದಲ್ಲ.

**80. ಅಧಿನಿಯಮ ಮತ್ತು ವ್ಯವಹರಣೆಗಳು ರಚನೆ, ರಿಕ್ತಸ್ಥಾನ, ಇತ್ಯಾದಿ ದೋಷದ ಆಧಾರದ ಮೇಲೆ ಮಾತ್ರವೇ ಅಸಿಂಧುವಾಗತಕ್ಕದ್ದಲ್ಲ:-** ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಅಥವಾ ವಿದ್ಯಾ ವಿಷಯಕ ಪರಿಷತ್ತು ಅಥವಾ ಯಾವುದೇ ಇತರ ಪ್ರಾಧಿಕಾರ ಅಥವಾ ನಿಕಾಯವನ್ನು ವಿಧ್ಯುಕ್ತವಾಗಿ ರಚಿಸಿರದಿದ್ದರೆ ಅಥವಾ ಯಾವುದೇ ಕಾಲದಲ್ಲಿ ಅದರ ರಚನೆಯಲ್ಲಿ ಅಥವಾ ಪುನರ್‌ರಚನೆಯಲ್ಲಿ ಯಾವುದೇ ದೋಷವಿದ್ದರೆ ಮತ್ತು ಯಾವುದೇ ಅಂಥ ಪ್ರಾಧಿಕಾರದ ಸದಸ್ಯರ ಸ್ಥಾನವು ಖಾಲಿಯಿದ್ದರೆ, ಅಂಥ ಪ್ರಾಧಿಕಾರದ ಅಥವಾ ನಿಕಾಯದ ಯಾವುದೇ ಕಾರ್ಯ ಅಥವಾ ವ್ಯವಹರಣೆಯು, ಅಂಥ ಯಾವುದೇ ಕಾರಣ ಅಥವಾ ಕಾರಣಗಳ ಆಧಾರದ ಮೇಲೆ ಅಸಿಂಧುವಾಗತಕ್ಕದ್ದಲ್ಲ.

**81. ವಿಶ್ವವಿದ್ಯಾನಿಲಯದೊಡನೆ ಸಂಯೋಜಿತ ಕಾಲೇಜುಗಳ ಸಂಬಂಧ:-** ವಿಶ್ವವಿದ್ಯಾನಿಲಯದೊಡನೆ ಸಂಯೋಜಿತ ಕಾಲೇಜುಗಳ ಸಂಬಂಧವು, ಈ ಸಂಬಂಧದಲ್ಲಿ ರಚಿಸಲಾಗುವ ಪರಿನಿಯಮಗಳಿಗೆ ಒಳಪಟ್ಟಿರತಕ್ಕದ್ದು ಮತ್ತು ಅಂಥ ಪರಿನಿಯಮಗಳು, ವಿಶೇಷವಾಗಿ, ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತವಾದ ಕಾಲೇಜುಗಳ ಸಂಬಂಧದಲ್ಲಿ, ಗ್ರಂಥಾಲಯಗಳು, ಪ್ರಯೋಗಶಾಲೆಗಳು ಮತ್ತು ಬೋಧನೆ ಮತ್ತು ಸಂಶೋಧನೆಗಾಗಿ ಇತರ ಸಲಕರಣೆಗಳ ಸಂಬಂಧದಲ್ಲಿ ಅಂಥ ಕಾಲೇಜುಗಳು ಒದಗಿಸಿದ ಸೌಲಭ್ಯಗಳ ಬಗ್ಗೆ ವಹಿಸಿದ ವೆಚ್ಚದ ಸಂಬಂಧದಲ್ಲಿ ಸಮನ್ವಯ ಮತ್ತು ನಿಯಂತ್ರಣ ಮಾಡಲು ಮುಂದಿನ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

**82. ವಿಶ್ವವಿದ್ಯಾನಿಲಯಕ್ಕೆ ಸರ್ಕಾರಿ ಕಾಲೇಜುಗಳ ವರ್ಗಾವಣೆ:-** (1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ, ಅಂಥ ದಿನಾಂಕದಿಂದ ಜಾರಿಗೆ ಬರುವಂತೆ ಮತ್ತು ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಅಂಥ ಷರತ್ತುಗಳಿಗೊಳಪಟ್ಟು ಅದರ ಯಾವುವೇ ಕಾಲೇಜುಗಳನ್ನು ಯಾವುದೇ ಹಾಸ್ಟಲ್ ಅಥವಾ ಅಂಥ ಕಾಲೇಜುಗಳ ಇತರ ಕಟ್ಟಡಗಳನ್ನು ಮತ್ತು ಅಂಥ ಕಾಲೇಜಿನ ಪೀಠೋಪಕರಣಗಳು, ವಸ್ತುಗಳು, ಗ್ರಂಥಾಲಯ, ಪುಸ್ತಕಗಳು, ಪ್ರಯೋಗ ಶಾಲೆ, ದಾಸ್ತಾನುಗಳು, ಸಾಧನಗಳು, ಸಲಕರಣೆಗಳು, ಸಜ್ಜು ಸಲಕರಣೆಗಳು ಮತ್ತು ಸಾಮಗ್ರಿಗಳನ್ನು ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸತಕ್ಕದ್ದು. ಅಂಥ ಆದೇಶದ ಪ್ರಕಟಣೆಯ ತರುವಾಯ, ಅಂಥ ಕಾಲೇಜು ವಿಶ್ವವಿದ್ಯಾನಿಲಯದ ಕಾಲೇಜು ಆಗಿ ನಿರ್ವಹಣೆ ಮತ್ತು ಆಡಳಿತಕ್ಕೊಳಪಡತಕ್ಕದ್ದು ಮತ್ತು ಆದೇಶದಲ್ಲಿ ನಮೂದಿಸಿದ ಸ್ವತ್ತುಗಳು ವಿಶ್ವವಿದ್ಯಾನಿಲಯದ ಸ್ವತ್ತುಗಳಾಗಿರತಕ್ಕದ್ದು.

(2) ಈ ಅಧಿನಿಯಮದಲ್ಲಿರುವುದಾವುದೂ, (1)ನೇ ಉಪ ಪ್ರಕರಣದ ಅಡಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ವರ್ಗಾಯಿಸಲಾದ ಯಾವುದೇ ಭೂಮಿ ಅಥವಾ ಕಟ್ಟಡವನ್ನು ಮಾರಾಟ ಮಾಡಲು, ಗುತ್ತಿಗೆಗೆ ಕೊಡಲು, ವಿನಿಮಯ ಮಾಡಲು ಅಥವಾ ಇತರ ರೀತಿಯಲ್ಲಿ ವಿಲೇ ಮಾಡಲು ವಿಶ್ವವಿದ್ಯಾನಿಲಯಕ್ಕೆ ಅಧಿಕಾರ ನೀಡತಕ್ಕದ್ದಲ್ಲ.

(3) (1)ನೇ ಉಪ ಪ್ರಕರಣದ ಅಡಿಯಲ್ಲಿ ಮಾಡಿದ ಆದೇಶದ ಮೂಲಕ ಯಾವುದೇ ಕಾಲೇಜನ್ನು ವಿಶ್ವವಿದ್ಯಾನಿಲಯದ ನಿರ್ವಹಣೆ ಮತ್ತು ಆಡಳಿತಕ್ಕೆ ವರ್ಗಾಯಿಸಲಾಗಿದ್ದಲ್ಲಿ, ಆಗ ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಸದರಿ ಆದೇಶದ ಪ್ರಕಟಣೆಯ ದಿನಾಂಕದ ನಿಕಟ ಪೂರ್ವದಲ್ಲಿ, ಆ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿದ್ದ ಅಥವಾ ಅದಕ್ಕೆ ಸೇರಿದ, ರಾಜ್ಯ ಸರ್ಕಾರದ ಬೋಧಕ ಸಿಬ್ಬಂದಿ ಮತ್ತು ಇತರ ನೌಕರ ವರ್ಗದ ಎಲ್ಲಾ ಸದಸ್ಯರು ವಿಶ್ವವಿದ್ಯಾನಿಲಯುದಲ್ಲಿರುವ ಹುದ್ದೆಗಳ ಸೂಕ್ತ ಕೇಡರ್‌ಗೆ ಮತ್ತು ಪ್ರವರ್ಗಕ್ಕೆ ವರ್ಗಾವಣೆಯಾಗತಕ್ಕದ್ದು:

ಪರಂತು, ವಿಶ್ವವಿದ್ಯಾನಿಲಯಕ್ಕೆ ಕಾಲೇಜನ್ನು ವರ್ಗಾಯಿಸಿದ ಸಂದರ್ಭದಲ್ಲಿ, ಅಂಥ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರಿಗೆ, ರಾಜ್ಯಾಧೀನ ಸೇವೆಗಳಲ್ಲಿ ಮುಂದುವರಿಯಲು ಅಥವಾ ವಿಶ್ವವಿದ್ಯಾನಿಲಯದ ಸೇವೆಗಳಲ್ಲಿ ವಿಲೀನಗೊಳ್ಳುವ ಬಗ್ಗೆ ಆಯ್ಕೆ ಮಾಡಿಕೊಳ್ಳಲು ಒಂದು ಅವಕಾಶವನ್ನು ಕೊಡತಕ್ಕದ್ದು.

**83. ಪರಿನಿಯಮಗಳ, ವಿನಿಯಮಗಳ, ಆರ್ಡಿನೆನ್ಸ್ ಇತ್ಯಾದಿಗಳ ಮುಂದುವರಿಕೆ:-** (1) ಈ ಅಧಿನಿಯಮದ ಸೂಕ್ತ ಉಪಬಂಧಗಳ ಅಡಿಯಲ್ಲಿ, ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳನ್ನು ರಚಿಸುವವರೆಗೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 1976ರ ಉಪಬಂಧಗಳ ಅಡಿಯಲ್ಲಿ ಮಾಡಿದ ಹಾಗೂ ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಜಾರಿಯಲ್ಲಿರುವ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳ ಉಪಬಂಧಗಳು, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರ ಮಟ್ಟಿಗೆ, ರಾಜ್ಯಸರ್ಕಾರದ ಮೂಲಕ ಕುಲಾಧಿಪತಿಯವರಿಂದ ಪಡೆದುಕೊಂಡ ಅನುಮೋದನೆಯೊಡನೆ, ಕುಲಪತಿಯು ಅದರಲ್ಲಿ ಮಾಡಬಹುದಾದ ಅಂಥ ಅಳವಡಿಕೆಗಳು ಅಥವಾ ಮಾರ್ಪಾಡುಗಳಿಗೆ ಒಳಪಟ್ಟು, ಈ ಅಧಿನಿಯಮದ ಸೂಕ್ತ ಉಪಬಂಧಗಳ ಅಡಿಯಲ್ಲಿ ಮಾಡಿದ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳೆಂದು ಭಾವಿಸತಕ್ಕದ್ದು.

(2) 1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮದ ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾನಿಲಯದ ಕುಲಪತಿಯ ಹುದ್ದೆಯನ್ನು ಧಾರಣ ಮಾಡಿದ ವ್ಯಕ್ತಿಯು, ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು, ಈ ಅಧಿನಿಯಮವನ್ನು ಅಂಗೀಕರಿಸಿರದಿದ್ದರೆ ಅವರು ಪದವನ್ನು ಧಾರಣ ಮಾಡಬಹುದಾಗಿದ್ದ ದಿನಾಂಕದವರೆಗೆ ಪದಧಾರಣ ಮಾಡುವುದು ಮುಂದುವರಿಯತಕ್ಕದ್ದು.

**84. ತಾತ್ಕಾಲಿಕ ಉಪಬಂಧಗಳು:-** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಕುಲಪತಿಯು ಕುಲಾಧಿಪತಿಯವರ ಪೂರ್ವಾನುಮೋದನೆ ಯೊಂದಿಗೆ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ, ವಿಶ್ವವಿದ್ಯಾನಿಲಯದ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಬಹುದು ಮತ್ತು ಆ ಉದ್ದೇಶಕ್ಕಾಗಿ ಈ ಅಧಿನಿಯಮದ ಮೂಲಕ ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರವು ಚಲಾಯಿಸಬೇಕಾದ ಅಥವಾ ನಿರ್ವಹಿಸಬೇಕಾದ ಯಾವುವೇ ಅಧಿಕಾರಗಳನ್ನು ಅಥವಾ ಕರ್ತವ್ಯಗಳನ್ನು ಈ ಅಧಿನಿಯಮದಲ್ಲಿ ಉಪಬಂಧಿಸಿದಂತೆ ಅಂಥ ಪ್ರಾಧಿಕಾರವು ಅಸ್ತಿತ್ವಕ್ಕೆ ಬರುವ ವರೆಗೆ ಚಲಾಯಿಸಬಹುದು ಅಥವಾ ನೆರವೇರಿಸಬಹುದು.

**85. ತೊಂದರೆಗಳನ್ನು ನಿವಾರಿಸಲು ಅಧಿಕಾರ:-** (1) ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಪ್ರಥಮ ರಚನೆ ಅಥವಾ, ಪುನರ್ ರಚನೆಗೆ ಅಥವಾ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದಕ್ಕೆ ಸಂಬಧಿಸಿದಂತೆ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಅಂಥ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯಕವೆಂದು ಅಥವಾ ಸೂಕ್ತವೆಂದು ತನಗೆ ಕಂಡುಬರಬಹುದಾದಂತೆ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದ ಅಂಥ ಉಪಬಂಧಗಳನ್ನು ಅಧಿಸೂಚನೆ ಮೂಲಕ ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಐದು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಅಂಥ ಯಾವುದೇ ಅಧಿಸೂಚನೆಯುನ್ನು ಹೊರಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯನ್ನು ಅದನ್ನು ಹೊರಡಿಸಿದ ತರುವಾಯ ಆದಷ್ಟು ಬೇಗನೇ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನ ಅಥವಾ ಎರಡು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಮೂವತ್ತು ದಿನಗಳ ಒಟ್ಟು ಅವಧಿಯಲ್ಲಿ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು ವಿಧಾನ ಮಂಡಲದ ಉಭಯ ಸದನಗಳು ಆ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಒಪ್ಪಿದರೆ ಅಥವಾ ಅಧಿಸೂಚನೆಯನ್ನು ಮಾಡಬಾರದೆಂದು ತೀರ್ಮಾನಿಸಿದರೆ ಆ ತರುವಾಯ ಅಂಥ ಅಧಿಸೂಚನೆಯು ಸಂದರ್ಭಾನುಸಾರ ಅಂಥ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದಲ್ಲ. ಆದಾಗ್ಯೂ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ಅಧಿಸೂಚನೆಯ ಅಡಿಯಲ್ಲಿ ಈ ಹಿಂದೆ ಮಾಡಲಾದ ಯಾವುದರ ಮಾನ್ಯತೆಗೂ ಪ್ರತಿಕೂಲವಾಗಿರತಕ್ಕದ್ದಲ್ಲ.

**86. ನಿರಸನ ಮತ್ತು ಉಳಿಸುವಿಕೆಗಳು:-** ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ ಸಂಖ್ಯೆ 28) ಈ ಮೂಲಕ ನಿರಸಿತವಾಗಿದೆ.

ಪರಂತು, ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ರ 6ನೇ ಪ್ರಕರಣದ ಉಪಬಂಧಗಳು, ಸದರಿ ಅಧಿನಿಯಮದ ನಿರಸನದ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು ಮತ್ತು ಸದರಿ ಕಾನೂನಿನ ಮತ್ತು ಸದರಿ ಅಧಿನಿಯಮದ 8 ಮತ್ತು 24ನೇ ಪ್ರಕರಣಗಳ ಉಪಬಂಧಗಳು ಸದರಿ ಅಧಿನಿಯಮವನ್ನು ಮತ್ತು ಉಪಬಂಧಗಳನ್ನು ನಿರಸನಗೊಳಿಸಿದ್ದರೆ ಮತ್ತು ಈ ಅಧಿನಿಯಮದ ಮೂಲಕ ಪುನಃ ಅಧಿನಿಯಮಿಸಲಾಗಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.